# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

**6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–3.**

ಸಂಖ್ಯೆ:ಎ8/ಎಸ್.ಎಸ್.ಎಲ್.ಸಿ.ಅಧಿಸೂಚನೆ/ಏಪ್ರಿಲ್–2017/2016–17 ದಿನಾಂಕ:05.07.2016.

## ಅಧಿಸೂಚನೆ

ವಿಷಯ: 2017ನೇ ಏಪ್ರಿಲ್ ಮಾಹೆಯಲ್ಲಿ ನಡೆಯಲಿರುವ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ರಾಜ್ಯದ ಶಾಲಾ/ ಕಾಲೇಜುಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಕುರಿತು.

ಉಲ್ಲೇಖ: 1)ಸರ್ಕಾರದ ಆದೇಶದ ಸಂಖ್ಯೆ:ಇಡಿ.254.ಎಸ್.ಎಲ್.ಬಿ.2015, ದಿನಾಂಕ:18.08.2015.
2)ಸರ್ಕಾರದ ಆದೇಶದ ಸಂಖ್ಯೆ:ಇಡಿ.59.ಎಂ.ಸಿ.ಡಿ.2016, ದಿನಾಂಕ:16.06.2016.

******

2017ನೇ ಏಪ್ರಿಲ್ ಮಾಹೆಯಲ್ಲಿ ನಡೆಯುವ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ರಾಜ್ಯದ ಸರ್ಕಾರಿ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಅನುದಾನಿತ, ಅನುದಾನ ರಹಿತ ಶಾಲಾ/ ಕಾಲೇಜುಗಳಿಂದ ಹಾಜರಾಗುವ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇದಲ್ಲದೆ ಖಾಸಗಿ ಅಭ್ಯರ್ಥಿಗಳು ಮತ್ತು ಪುನರಾವರ್ತಿತ ಅಭ್ಯರ್ಥಿಗಳು ಕೂಡ ಈ ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

### I. ಶೈಕ್ಷಣಿಕ ವಿಭಾಗ

ಸರ್ಕಾರಿ ಆದೇಶದ ಸಂಖ್ಯೆ:ಇಡಿ.156.ಮಾಹಿತಿ.2014, ದಿನಾಂಕ:26.06.2014 ರನ್ವಯ, 2016–17ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಏಪ್ರಿಲ್–2017 ರಲ್ಲಿ ನಡೆಯುವ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ(ಸಿ.ಸಿ.ಇ) ಪದ್ಧತಿಯನ್ನು ರಾಜ್ಯದ ಸರ್ಕಾರಿ, ಅನುದಾನಿತ, ಅನುದಾನ ರಹಿತ ಮತ್ತು ಅಧಿಕೃತ ಪ್ರೌಢ ಶಾಲೆಗಳಲ್ಲಿ ಜಾರಿಗೊಳಿಸಲಾಗಿರುವುದನ್ನು ಮುಂದುವರೆಸಲಾಗಿದೆ. ಈ ಹಿನ್ನೆಲೆಯಲ್ಲಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ(ಸಿ.ಸಿ.ಇ.) ಅಳವಡಿಸುವ ವಿಧಿವಿಧಾನಗಳನ್ನು ಕೆಳಕಂಡಂತೆ ವಿವರಿಸಲಾಗಿದೆ.

1. ವಿದ್ಯಾರ್ಥಿಗಳನ್ನು ಪ್ರಗತಿಶೀಲರನ್ನಾಗಿಸಲು, ಸರ್ವತೋಮುಖ ಅಭಿವೃದ್ಧಿಗೆ ಪ್ರೇರೇಪಿಸಲು ಶಿಕ್ಷಣ ಮಹತ್ತರವಾದ ಪಾತ್ರ ವಹಿಸುತ್ತದೆ. ವಿದ್ಯಾರ್ಥಿಗಳಲ್ಲಿ ಗುಣಮಟ್ಟದ ಕಲಿಕೆ ಉಂಟಾಗಬೇಕಾದಲ್ಲಿ ಅವರಲ್ಲಿ ಶಿಸ್ತು, ಕಾರ್ಯತತ್ಪರತೆ, ಸೃಜನಶೀಲತೆ, ಕಲಾತ್ಮತೆಗಳಿಗೆ ಶಿಕ್ಷಣ ಒತ್ತು ನೀಡಬೇಕಾಗಿದೆ. ಇದನ್ನು ಸಾಧಿಸಲು ಪಠ್ಯ ವಿಷಯಗಳ ಮೌಲ್ಯಮಾಪನದ ಜೊತೆಗೆ ಸಹಪಠ್ಯ ಚಟುವಟಿಕೆಗಳ ಮೌಲ್ಯಮಾಪನದ ಅಗತ್ಯತೆ ಇರುವುದನ್ನು ಮನಗಂಡಿದೆ.
2. ಶೈಕ್ಷಣಿಕ ವರ್ಷದಲ್ಲಿ ವಿಷಯವಾರು ಒಟ್ಟು 04 ರೂಪಣಾತ್ಮಕ ಮೌಲ್ಯಮಾಪನಗಳನ್ನು ಮಾಡಲಾಗುತ್ತಿದ್ದು, ಪ್ರತಿ ರೂಪಣಾತ್ಮಕ ಮೌಲ್ಯಮಾಪನದಲ್ಲಿ(ಎರಡು ಚಟುವಟಿಕೆಗಳನ್ನು) ಒಂದು ಕಿರು ಪರೀಕ್ಷೆಯನ್ನು ನಡೆಸಬೇಕಾಗುತ್ತದೆ. ಒಟ್ಟಾರೆ 04 ರೂಪಣಾತ್ಮಕ ಮೌಲ್ಯಮಾಪನಗಳಿಂದ 08 ಚಟುವಟಿಕೆಗಳು ಹಾಗೂ 04 ಕಿರು ಪರೀಕ್ಷೆಗಳನ್ನು ನಡೆಸಬೇಕಾಗುತ್ತದೆ.
3. 2015–16ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ವ್ಯಾಸಂಗ ಮಾಡಿರುವ ವಿದ್ಯಾರ್ಥಿಗಳು ಸೇರಿ ಮುಂದಿನ ದಿನಗಳಲ್ಲಿ ಅಂದರೆ 2016–17ನೇ ಸಾಲಿನಿಂದ ಜಾರಿಗೆ ಬರುವಂತೆ(2015ನೇ ಏಪ್ರಿಲ್ ಪರೀಕ್ಷೆಯಿಂದ) ಈ ಕೆಳಕಂಡ ಮಾನದಂಡಗಳನ್ನು ಆಧರಿಸಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ ಪದ್ಧತಿ(ಸಿ.ಸಿ.ಇ.)ಯನ್ನು ಅಳವಡಿಸಿ ಏಪ್ರಿಲ್–2015 ರಲ್ಲಿ ಹಾಗೂ ತದನಂತರದಲ್ಲಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶವನ್ನು (ಮುಂಬರುವ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶಗಳನ್ನು) ಅಂಕಗಳು ಹಾಗೂ ಶ್ರೇಣಿಗಳ ಆಧಾರದ ಮೇರೆಗೆ ಪ್ರಕಟಿಸಲಾಗುವುದು.

**I(A)ಮಾನದಂಡಗಳು:–**

1. ಹತ್ತು ವರ್ಷದ ಔಪಚಾರಿಕ ಶಿಕ್ಷಣವನ್ನು ಮುಗಿಸಿದ ಎಲ್ಲಾ ವಿದ್ಯಾರ್ಥಿಗಳು, ಹತ್ತನೇ ವರ್ಷದ ಅಂತ್ಯದಲ್ಲಿ ಎಸ್.ಎಸ್.ಎಲ್.ಸಿ. ಅಂತಿಮ ಪರೀಕ್ಷೆ ಬರೆಯತಕ್ಕದ್ದು.
2. ಪರೀಕ್ಷೆಯು ವಿದ್ಯಾರ್ಥಿಯ ಆಂತರಿಕ ಮೌಲ್ಯಮಾಪನ ಹಾಗೂ ಬಾಹ್ಯ ಪರೀಕ್ಷಾ ವಿಧಾನದಿಂದ ಕೂಡಿರಬೇಕು.
3. ಬಾಹ್ಯ ಪರೀಕ್ಷೆಗೆ ಶೇ.80 ಹಾಗೂ ಆಂತರಿಕ ಮೌಲ್ಯಮಾಪನಕ್ಕೆ ಶೇ.20 ಅಂಕಗಳನ್ನು ಮೀಸಲಿಡತಕ್ಕದ್ದು.
4. ಎಲ್ಲಾ ವಿಷಯಗಳಲ್ಲಿ ಬಾಹ್ಯ ಪರೀಕ್ಷೆಗೆ ಒಟ್ಟು 500 ಅಂಕಗಳು ಮತ್ತು ಆಂತರಿಕ ಮೌಲ್ಯಮಾಪನಕ್ಕೆ 125 ಅಂಕಗಳನ್ನು ನಿಗದಿಪಡಿಸಿದೆ. ವಿಷಯವಾರು ಅಂಕಗಳ ವಿಂಗಡಣೆ ಗರಿಷ್ಠ ಇಂತಿದೆ.

| **ವಿಷಯ** | **ಬಾಹ್ಯ** | **ಆಂತರಿಕ** | **ಒಟ್ಟು** |
|---|---|---|---|
| ಪ್ರಥಮ ಭಾಷೆ | 100 | 25 | 125 |
| ದ್ವಿತೀಯ ಭಾಷೆ | 80 | 20 | 100 |
| ತೃತೀಯ ಭಾಷೆ | 80 | 20 | 100 |
| ಗಣಿತ | 80 | 20 | 100 |
| ವಿಜ್ಞಾನ | 80 | 20 | 100 |
| ಸಮಾಜ ವಿಜ್ಞಾನ | 80 | 20 | 100 |
| **ಒಟ್ಟು** | **500** | **125** | **625** |

5. ವಿದ್ಯಾರ್ಥಿಗಳ ಪ್ರಗತಿಯನ್ನು ಭಾಗ–ಎ(ಪಠ್ಯ ವಿಷಯಗಳು), ಭಾಗ–ಬಿ(ಸಹ ಪಠ್ಯ ವಿಷಯಗಳು) ಆಧಾರದ ಮೇಲೆ ಪರಿಗಣಿಸಬೇಕಾಗುತ್ತದೆ.
6. ಭಾಗ–ಎ ಯಲ್ಲಿ ಬರುವ ಪ್ರತಿ ವಿಷಯಗಳಿಗೆ ಅಂಕಗಳು ಹಾಗೂ ಶ್ರೇಣಿಗಳನ್ನು ಒಟ್ಟಾರೆ ಅಂಕಗಳು ಮತ್ತು ಶ್ರೇಣಿ (Cumulative Grade Average) CGA ಯನ್ನು ನೀಡಲಾಗುತ್ತದೆ.
7. ಭಾಗ–ಬಿಯಲ್ಲಿ (P1)ದೈಹಿಕ ಮತ್ತು ಆರೋಗ್ಯ ಶಿಕ್ಷಣ, (P2)ಮನೋಭಾವ ಮತ್ತು ಮೌಲ್ಯಗಳು, (P3)ಕಾರ್ಯಾನುಭವ, (P4)ಕಲಾ ಶಿಕ್ಷಣ ವಿಷಯಗಳಿದ್ದ ಇಂತಹ ಸಹ ಪಠ್ಯ ವಿಷಯಗಳಿಗೆ ಎ, ಬಿ ಅಥವಾ ಸಿ ಶ್ರೇಣಿಗಳನ್ನು ನೀಡತಕ್ಕದ್ದು.

4. **ಅಂಕಗಳು ಮತ್ತು ಶ್ರೇಣಿಗಳ ವಿವರ :**

**ಒಟ್ಟು 625 ಅಂಕಗಳಿಗೆ**

| **ಅಂಕಗಳು** | **ಶೇಕಡಾ** | **ಶ್ರೇಣಿ** |
|---|---|---|
| 563–625 | 90 ರಿಂದ 100 | ಎ+ |
| 500–562 | 80 ರಿಂದ 90 ರವರೆಗೆ | ಎ |
| 438–499 | 70 ರಿಂದ 80 ರವರೆಗೆ | ಬಿ+ |
| 375–437 | 60 ರಿಂದ 70 ರವರೆಗೆ | ಬಿ |
| 313–374 | 50 ರಿಂದ 60 ರವರೆಗೆ | ಸಿ+ |
| 219–312 | 35 ರಿಂದ 50 ರವರೆಗೆ | ಸಿ |

**ಒಟ್ಟು 100 ಅಂಕಗಳಿಗೆ(ವಿಷಯವಾರು)**

| **ಅಂಕಗಳು/ಶೇಕಡಾ** | **ಶ್ರೇಣಿ** |
|---|---|
| 90 ರಿಂದ 100 | ಎ+ |
| 80 ರಿಂದ 90 ರವರೆಗೆ | ಎ |
| 70 ರಿಂದ 80 ರವರೆಗೆ | ಬಿ+ |
| 60 ರಿಂದ 70 ರವರೆಗೆ | ಬಿ |
| 50 ರಿಂದ 60 ರವರೆಗೆ | ಸಿ+ |
| 35 ರಿಂದ 50 ರವರೆಗೆ | ಸಿ |

**ಒಟ್ಟು 125 ಅಂಕಗಳಿಗೆ(ಪ್ರಥಮ ಭಾಷಾ ವಿಷಯದಲ್ಲಿ) ಅಂಕಗಳ**

| **ಅಂಕಗಳು** | **ಶೇಕಡಾ** | **ಶ್ರೇಣಿ** |
|---|---|---|
| 113–125 | 90 ರಿಂದ 100 | ಎ+ |
| 100–112 | 80 ರಿಂದ 90 ರವರೆಗೆ | ಎ |
| 88–99 | 70 ರಿಂದ 80 ರವರೆಗೆ | ಬಿ+ |
| 75–87 | 60 ರಿಂದ 70 ರವರೆಗೆ | ಬಿ |
| 63–74 | 50 ರಿಂದ 60 ರವರೆಗೆ | ಸಿ+ |

**ಭಾಗ'ಬಿ'ಯ ಸಹಪಠ್ಯ ವಿಷಯಗಳಿಗೆ ಗಳಿಸಿದ**

**ಆಧಾರದ ಮೇಲೆ ನೀಡುವ ಗ್ರೇಡ್(ಶ್ರೇಣಿ)**

| **ಅಂಕಗಳು** | **ಶ್ರೇಣಿ** |
|---|---|
| 100 – 80 | ಎ |
| 50 – 79 | ಬಿ |
| 35 – 49 | ಸಿ |

| | | |
|---|---|---|
| 44–62 | 35 ರಿಂದ 50 ರವರೆಗೆ | ಸಿ |

5. ಬಾಹ್ಯ ಪರೀಕ್ಷೆಯಲ್ಲಿ ಪ್ರಥಮ ಭಾಷೆಯಲ್ಲಿ 100 ಅಂಕಗಳಿಗೆ ಕನಿಷ್ಠ 35 ಹಾಗೂ ಇತರೆ ವಿಷಯಗಳಲ್ಲಿ 80 ಅಂಕಗಳಿಗೆ ಕನಿಷ್ಠ 28 ಅಂಕಗಳನ್ನು ಪಡೆದಿರತಕ್ಕದ್ದು.
6. ವಿದ್ಯಾರ್ಥಿಯು ತೇರ್ಗಡೆಯಾಗಲು ಬಾಹ್ಯ ಪರೀಕ್ಷೆಯ 500 ಅಂಕಗಳಿಗೆ ಕನಿಷ್ಠ 175 ಅಂಕಗಳನ್ನು(ಶೇ.35) ಪಡೆದಿರಲೇಬೇಕು.
7. ವಿದ್ಯಾರ್ಥಿ ತೇರ್ಗಡೆಯಾಗಲು ಬಾಹ್ಯ ಪರೀಕ್ಷೆಯಲ್ಲಿ ಪ್ರತಿ ವಿಷಯದಲ್ಲಿ ಕನಿಷ್ಠ ಶೇ.30 ಹಾಗೂ ಬಾಹ್ಯ ಪರೀಕ್ಷೆಯ ಎಲ್ಲಾ ವಿಷಯಗಳ ಸರಾಸರಿ ಶೇ.35 ಹಾಗೂ ಬಾಹ್ಯ ಪರೀಕ್ಷೆ ಮತ್ತು ಆಂತರಿಕ ಮೌಲ್ಯಮಾಪನದ ಎಲ್ಲಾ ವಿಷಯಗಳ ಒಟ್ಟು ಸರಾಸರಿ ಶೇ.35 ಆಗಿರಬೇಕು.

**ರೂಪಣಾತ್ಮಕ ಮೌಲ್ಯಮಾಪನದ(Formative Assessment) ಚಟುವಟಿಕೆಗಳು:**

8. ಆಂತರಿಕ ಮೌಲ್ಯಮಾಪನದ ಅಂಕಗಳನ್ನು ನಾಲ್ಕು ರೂಪಣಾತ್ಮಕ ಮೌಲ್ಯಮಾಪನದ ಆಧಾರದ ಮೇಲೆ ನಿರ್ಧರಿಸುವುದು. FA1, FA2, FA3, FA4
9. ಪ್ರತಿಯೊಂದು ರೂಪಣಾತ್ಮಕ ಮೌಲ್ಯಮಾಪನದಲ್ಲಿ 20 ಅಂಕಗಳ ಕಿರುಪರೀಕ್ಷೆ, (ಉಪಾಧ್ಯಾಯರ ನಿರ್ಧಾರದಂತೆ) ಹಾಗೂ 15 ಅಂಕಗಳ ಎರಡು ಚಟುವಟಿಕೆಗಳು ಇದ್ದು, ಪ್ರತಿ ರೂಪಣಾತ್ಮಕ ಮೌಲ್ಯಮಾಪನಕ್ಕೆ 50 ಅಂಕಗಳು ನಿಗದಿಯಾಗಿರುತ್ತದೆ. ಒಟ್ಟು ನಾಲ್ಕು ರೂಪಣಾತ್ಮಕ ಮೌಲ್ಯಮಾಪನದ ಅಂಕ 200 ಆಗಿರುತ್ತದೆ. ವಿದ್ಯಾರ್ಥಿಯು ಗಳಿಸಿದ ಒಟ್ಟು ಅಂಕಗಳನ್ನು, 200 ಅಂಕಗಳಿಗೆ ಪರಿಮಾಣಾತ್ಮಕವಾಗಿ ಪ್ರಥಮ ಭಾಷೆಗೆ 25 ಅಂಕಗಳಿಗೂ, ಉಳಿದ 05 ವಿಷಯಗಳಲ್ಲಿ 20 ಅಂಕಗಳಿಗೂ ಲೆಕ್ಕ ಹಾಕಿ ಆಂತರಿಕ ಮೌಲ್ಯಮಾಪನಕ್ಕೆ ಪರಿಗಣಿಸತಕ್ಕದ್ದು.
10. ಆಂತರಿಕ ಮೌಲ್ಯಮಾಪನದಲ್ಲಿ ನಡೆಸುವ ಕಿರುಪರೀಕ್ಷೆ ಹಾಗೂ ಚಟುವಟಿಕೆಗಳು ಸಿ.ಸಿ.ಇ. ಆಧಾರವಾಗಿರಬೇಕು.
11. ಪ್ರತಿ ರೂಪಣಾತ್ಮಕ ಮೌಲ್ಯಮಾಪನದ ಚಟುವಟಿಕೆಗಳು ಮತ್ತು ಕಿರು ಪರೀಕ್ಷೆಗಳ ಅಂಕಗಳು ದಶಮಾಂಶ ರೂಪದಲ್ಲಿದ್ದರೆ, ಉದಾಹರಣೆಗೆ:–9.25, 14.75, 13.50 ಹೀಗೆ ಪಡೆದಿದ್ದಲ್ಲಿ ಕೊನೆಯವರೆಗೂ ಹಾಗೇ ಉಳಿಸಿಕೊಂಡಿದ್ದು, 04 ರೂಪಣಾತ್ಮಕ ಮೌಲ್ಯಮಾಪನಗಳು ಮತ್ತು ಚಟುವಟಿಕೆಗಳು ಪೂರ್ಣಗೊಂಡ ನಂತರ ಮುಂದಿನ ಪೂರ್ಣಾಂಕಕ್ಕೆ ಪರಿವರ್ತಿಸುವುದು.

**ಉದಾಹರಣೆಗೆ:–**

| Subject | FA1 | | | | FA2 | | | | FA3 | | | | FA4 | | | | GRAND TOTAL | |
|---|---|---|---|---|---|---|---|---|---|---|---|---|---|---|---|---|---|---|
| | Test | Activity 1 | Activity 2 | Total | Test | Activity 1 | Activity 2 | Total | Test | Activity 1 | Activity 2 | Total | Test | Activity 1 | Activity 2 | Total | | |
| | 20 | 15 | 15 | 50 | 20 | 15 | 15 | 50 | 20 | 15 | 15 | 50 | 20 | 15 | 15 | 50 | 200 | |
| Ist Language | 18 | 14 | 10.5 | 42.5 | 17 | 13 | 14.5 | 44.5 | 16 | 14 | 13 | 43 | 15 | 12 | 13 | 43 | 173 | (173/200) X 25= 21.62 = 22 |
| Other Subjects | 13 | 14 | 12 | 39 | 14 | 14 | 13 | 41 | 15 | 12 | 11 | 38 | 14 | 13 | 14 | 41 | 159 | (159/200) X 20 = 15.9 = 16 |

| | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|
| | 17 | 15 | 13 | 45 | 11 | 13 | 15 | 39 | 19 | 12 | 15 | 46 | 09 | 11 | 12 | 32 | 162 | (162/200) X 20 = 16.2 = 17 |

12. ವಿದ್ಯಾರ್ಥಿಗಳು ತೇರ್ಗಡೆಯಾಗಲು ಆಂತರಿಕ ಮೌಲ್ಯಮಾಪನದಲ್ಲಿ ಇಂತಿಷ್ಟೇ ಕನಿಷ್ಠ ಅಂಕಗಳನ್ನು ಪಡೆಯಬೇಕು ಎಂಬ ನಿಯಮವಿರುವುದಿಲ್ಲ.

13. ವಿದ್ಯಾರ್ಥಿಗಳ ತೇರ್ಗಡೆಗೆ ಅಂತಿಮ ಫಲಿತಾಂಶವನ್ನು ನಿರ್ಧರಿಸುವಾಗ(ಪರೀಕ್ಷಾ ಮಂಡಳಿ ನಡೆಸುವ) ಬಾಹ್ಯ ಪರೀಕ್ಷೆಯಲ್ಲಿ ಪ್ರತಿ ವಿಷಯದಲ್ಲೂ ಕನಿಷ್ಟ ಶೇ.30ರಷ್ಟು ಅಂಕಗಳನ್ನು ಗಳಿಸಿರಬೇಕಾಗುತ್ತದೆ ಹಾಗೂ ಒಟ್ಟಾರೆ ಶೇ.35 ಅಂಕಗಳನ್ನು ಪಡೆದಿರತಕ್ಕದ್ದು.

14. ವಿದ್ಯಾರ್ಥಿಗಳ ಚಟುವಟಿಕೆಗಳ ದಾಖಲೀಕರಣವನ್ನು ಮುಖ್ಯಶಿಕ್ಷಕರು ನಿರ್ವಹಣೆ ಮಾಡುವುದು ತುಂಬಾ ಪ್ರಾಮುಖ್ಯತೆ ಹೊಂದಿರುತ್ತದೆ. ಇಲಾಖೆ, ಪೋಷಕರು ಹಾಗೂ ವಿದ್ಯಾರ್ಥಿಗಳು ಮೌಲ್ಯಮಾಪನ ಮಾಡಿದ ವಿದ್ಯಾರ್ಥಿಗಳ ಚಟುವಟಿಕೆಗಳು ಹಾಗೂ ಕಿರು ಪರೀಕ್ಷೆಯ ಉತ್ತರ ಪತ್ರಿಕೆಗಳ ಮಾಹಿತಿಯನ್ನು, ಮಾಹಿತಿ ಹಕ್ಕು ಅಧಿನಿಯಮಗಳ ಅಡಿಯಲ್ಲಿ ಮಾಹಿತಿಗಳನ್ನು ಪಡೆಯುವ ಸಂಭವಗಳಿರುತ್ತದೆ. ಆದ್ದರಿಂದ ಸರ್ಕಾರಿ/ ಅನುದಾನಿತ/ ಅನುದಾನ ರಹಿತ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರು ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಚಟುವಟಿಕೆ ಮತ್ತು ಕಿರು ಪರೀಕ್ಷೆಗಳ ದಾಖಲೀಕರಣಗಳನ್ನು ಮಂಡಳಿಯ ಕಾಯ್ದೆ 1966ರ Annexure–3 ನಿಯಮ–20(ಎ) ಅನ್ವಯ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶ ಪ್ರಕಟವಾದ ನಂತರ ಕನಿಷ್ಠ 05 ತಿಂಗಳವರೆಗೆ ಸುರಕ್ಷಿತವಾಗಿ ಮುಖ್ಯ ಗುರುಗಳ ವಶದಲ್ಲಿ ಸಂರಕ್ಷಿಸಿಡಬೇಕು. ಉಳಿದಂತೆ ಕ್ರೋಢೀಕೃತ ವಹಿಗಳನ್ನು ದಾಖಲಾತಿ ವಹಿಯಂತೆ ಖಾಯಂ ಆಗಿ ಸಂರಕ್ಷಿಸಬೇಕಾಗುತ್ತದೆ.

15. ಪ್ರತಿ ರೂಪಣಾತ್ಮಕ ಮೌಲ್ಯಮಾಪನ ಮತ್ತು ಕಿರುಪರೀಕ್ಷೆಗಳಲ್ಲಿ ಗಳಿಸಿದ ಅಂಕಗಳನ್ನು ವಿದ್ಯಾರ್ಥಿಗೆ ಮತ್ತು ಪೋಷಕರುಗಳಿಗೆ ತಿಳಿಸಬೇಕು. ಈ ಮಾಹಿತಿಯನ್ನು ತಿಳಿಸಿದ ಬಗ್ಗೆ ಪೋಷಕರುಗಳಿಂದ ಕಡ್ಡಾಯವಾಗಿ ಸಹಿ ಪಡೆಯತಕ್ಕದ್ದು.

16. ಸಿ.ಸಿ.ಇ. ಪದ್ದತಿಯನ್ನು ರಾಜ್ಯದ ಎಲ್ಲಾ ಅಧಿಕೃತ ಪ್ರೌಢಶಾಲೆಗಳಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ಮಂಡಳಿಯು ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಶಿಕ್ಷಕ ವರ್ಗದವರಲ್ಲಿ, ವಿದ್ಯಾರ್ಥಿಗಳಲ್ಲಿ, ಪೋಷಕರುಗಳಲ್ಲಿ ಅರಿವು ಮೂಡಿಸಲು ಮಂಡಳಿಯಿಂದ ಉಪಗ್ರಹ ಆಧಾರಿತ ವೀಡಿಯೋ ಕಾನ್ಫರೆನ್ಸ್ ಮತ್ತು ಟೆಲಿ ಕಾನ್ಫರೆನ್ಸ್ ಗಳನ್ನು ಮತ್ತು ಪೂರಕ ತರಬೇತಿಗಳನ್ನು ನೀಡಲಾಗಿದೆ.

17. ರೂಪಣಾತ್ಮಕ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಪ್ರತಿ ಶಾಲೆಗಳಲ್ಲಿ ಸಿ.ಸಿ.ಇ. ಪದ್ದತಿ ಅನುಷ್ಠಾನ ಆಗುವ ಬಗ್ಗೆ ಹಾಗೂ ದಾಖಲೆಗಳನ್ನು ಪರಿಶೀಲನೆಗಾಗಿ ಜಿಲ್ಲಾ ಹಂತದಲ್ಲಿ ತ್ರಿ–ಸದಸ್ಯ ಸಮಿತಿಯನ್ನು ರಚಿಸಿ, ತಂಡಗಳಲ್ಲಿ ಶಾಲೆಗಳಿಗೆ ಭೇಟಿ ನೀಡಿ ಸಿ.ಸಿ.ಇ. ಪದ್ದತಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ತಾಲ್ಲೂಕು ಹಂತದಲ್ಲಿ ತ್ರಿ–ಸದಸ್ಯ ಸಮಿತಿ ತಂಡಗಳನ್ನು ತಾಲ್ಲೂಕಿನಲ್ಲಿರುವ ಶಾಲೆಗಳ ಸಂಖ್ಯೆಗಳಿಗನುಗುಣವಾಗಿ ಕೆಳಕಂಡಂತೆ ಸಮಿತಿಗಳನ್ನು ರಚಿಸಲು ಕ್ರಮ ಕೈಗೊಳ್ಳಬಹುದಾಗಿದೆ.

**ತಂಡ–1:**–ಕ್ಷೇತ್ರ ಶಿಕ್ಷಣಾಧಿಕಾರಿಗಳು, ಡಯಟ್ ಉಪನ್ಯಾಸಕರು, ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,

**ತಂಡ–2:**–ಡಯಟ್ ಹಿರಿಯ ಉಪನ್ಯಾಸಕರು, ಉಪನಿರ್ದೇಶಕರ ಕಛೇರಿ ವಿಷಯ ಪರಿವೀಕ್ಷಕರು,
ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,

**ತಂಡ–3:**–ಉಪನಿರ್ದೇಶಕರ ಕಛೇರಿ ಶಿಕ್ಷಣಾಧಿಕಾರಿಗಳು, ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,
ಮುಖ್ಯ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ,

18. **<u>ಖಾಸಗಿ ಅಭ್ಯರ್ಥಿಗಳಿಗೆ:–</u>**

ಭಾಗ–ಎ ಯ ಪಠ್ಯ ವಿಷಯಗಳಿಗಷ್ಟೆ ಅಂತಿಮ ಪರೀಕ್ಷೆಯನ್ನು ನಡೆಸತಕ್ಕದ್ದು.

| | | |
|---|---|---|
| ಪ್ರಥಮ ಭಾಷೆ | : | 125 |
| ದ್ವಿತೀಯ ಭಾಷೆ | : | 100 |
| ತೃತೀಯ ಭಾಷೆ | : | 100 |
| ಗಣಿತ | : | 100 |
| ವಿಜ್ಞಾನ | : | 100 |
| ಸಮಾಜ ವಿಜ್ಞಾನ | : | 100 |
| **ಒಟ್ಟು** | : | **625 ಅಂಕಗಳು** |

- ಆಂತರಿಕ ಮೌಲ್ಯಮಾಪನ ಹಾಗೂ ಭಾಗ–ಬಿ ಗೆ ಪರೀಕ್ಷೆಗಳಿರುವುದಿಲ್ಲ.

- ಭಾಗ–ಎ ಪರೀಕ್ಷೆಯನ್ನು 625 ಅಂಕಗಳಿಗೆ ನಡೆಸಲಾಗುವುದು.

19. **<u>ಇತರೆ ವಿಷಯಗಳು:</u>**

- ಅರ್ಧ ವಾರ್ಷಿಕ ಪರೀಕ್ಷೆಯ ಅಂಕಗಳನ್ನು ರೂಪಣಾತ್ಮಕ ಮೌಲ್ಯಮಾಪನದೊಡನೆ ಸೇರಿಸುವ ಅವಶ್ಯಕತೆ ಇಲ್ಲ.
- ಎರಡು ಪೂರ್ವ ಸಿದ್ಧತಾ ಪರೀಕ್ಷೆಗಳಿಗೆ ಮಿತಿಗೊಳಿಸತಕ್ಕದ್ದು.
- ಪಾಠ ಪ್ರವಚನಗಳು, ಚಟುವಟಿಕೆಗಳು, ಫೆಬ್ರವರಿಯ ಅಂತ್ಯದವರೆಗೂ ಶಾಲೆಯಲ್ಲಿ ನಿಗದಿತ ವೇಳಾ ಪಟ್ಟಿಯಂತೆ ನಡೆಸತಕ್ಕದ್ದು.
- ಎಸ್.ಎಸ್.ಎಲ್.ಸಿ. ಪರೀಕ್ಷೆಯ ಹಳೆ ಪಠ್ಯಕ್ರಮವು ಜೂನ್–2016ಕ್ಕೆ ಅಂತ್ಯಗೊಂಡಿದೆ. ಹಳೆ ಪಠ್ಯಕ್ರಮದಲ್ಲಿನ ವಿದ್ಯಾರ್ಥಿಗಳು ಅನುತ್ತೀರ್ಣವಾಗಿದ್ದಲ್ಲಿ ಏಪ್ರಿಲ್–2017ರ ಪರೀಕ್ಷೆಯಿಂದ ಸಿ.ಸಿ.ಇ. ಆಧಾರಿತ ಹೊಸ ಪಠ್ಯಕ್ರಮದಲ್ಲಿ ಪರೀಕ್ಷೆಗೆ ಹಾಜರಾಗತಕ್ಕದ್ದು.
- ಸತತ 06 ಪ್ರಯತ್ನಗಳು ಪೂರಕವಾಗಿ ಮುಗಿದು ಅನುತ್ತೀರ್ಣವಾಗಿದ್ದಲ್ಲಿ ಮುಂದಿನ ಪರೀಕ್ಷೆಗೆ ಹೊಸದಾಗಿ ಖಾಸಗಿ ಅಭ್ಯರ್ಥಿಯಾಗಿ ನೊಂದಣಿ ಮಾಡಿಸಿ ಸಿ.ಸಿ.ಇ. ಆಧಾರಿತ ಹೊಸ ಪಠ್ಯಕ್ರಮದಲ್ಲಿ ಪರೀಕ್ಷೆಗೆ ಹಾಜರಾಗತಕ್ಕದ್ದು ಹಾಗೂ 06 ವಿಷಯಗಳಿಗೂ ಹೊಸದಾಗಿ ಪರೀಕ್ಷೆಗೆ ಹಾಜರಾಗತಕ್ಕದ್ದು.
- ಸತತ 06 ಪ್ರಯತ್ನಗಳಲ್ಲಿ ಜೂನ್–2016ಕ್ಕೆ 04 ಪ್ರಯತ್ನಗಳು ಪೂರ್ಣಗೊಂಡು ಇನ್ನೂ ಎರಡು ಪ್ರಯತ್ನಗಳು ಅವಕಾಶವಿದ್ದ ಸಂದರ್ಭದಲ್ಲಿ 04 ಪ್ರಯತ್ನಗಳಲ್ಲಿ ಉತ್ತೀರ್ಣವಾಗಿರುವ ವಿಷಯಗಳನ್ನು ಹೊರತುಪಡಿಸಿ ಬಾಕಿ ಇರುವ ವಿಷಯಗಳನ್ನು ಸಿ.ಸಿ.ಇ. ಆಧಾರಿತ ಹೊಸ ಪಠ್ಯಕ್ರಮದಲ್ಲಿ ಖಾಸಗಿ ವಿದ್ಯಾರ್ಥಿಗಳಿಗೆ ಅನ್ವಯಿಸುವ ಪ್ರಶ್ನೆ ಪತ್ರಿಕೆಯಲ್ಲಿ ಪರೀಕ್ಷೆಗೆ ಹಾಜರಾಗುವುದು.

20. **<u>ವಿಭಿನ್ನ ಸಾಮರ್ಥ್ಯವುಳ್ಳ (Differently Abled) ಮಕ್ಕಳು:–</u>** ಭಾಷಾ ವಿನಾಯಿತಿ, ಹೆಚ್ಚುವರಿ ಸಮಯ, ಸಹಾಯಕರ ಸೌಲಭ್ಯ, ಪರ್ಯಾಯ ವಿಷಯಗಳನ್ನು ತೆಗೆದುಕೊಳ್ಳಲು ಅವಕಾಶವಿದೆ. ವಿನಾಯಿತಿ ಪಡೆದ ಭಾಷಾ ವಿಷಯಗಳಿಗೆ ಶಾಲಾ ಹಂತದ ಮೌಲ್ಯಮಾಪನದಿಂದ ವಿನಾಯಿತಿ ನೀಡಲಾಗಿದೆ ಸದರಿ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿದ್ಯಾರ್ಥಿಗಳು ಅಧ್ಯಯನ ಮಾಡಿದ ವಿಷಯಗಳಿಗನುಗುಣವಾಗಿ ನೀಡಲಾಗುವುದು.
21. ಈ ವ್ಯವಸ್ಥೆಯ ಕುರಿತು ರಾಜ್ಯದ ಎಲ್ಲಾ ಶಿಕ್ಷಕರಿಗೆ, ಪೋಷಕರಿಗೆ ವ್ಯಾಪಕವಾದ ಮಾಹಿತಿಯನ್ನು ವೆಬ್‌ಸೈಟ್, ಪತ್ರಿಕೆಗಳ ಮೂಲಕ ಪ್ರಕಟಿಸಲಾಗಿದೆ.

## <u>II. ಖಾಸಗಿ ಪ್ರೌಢಶಾಲೆಗಳ ನೊಂದಣಿ ಮತ್ತು ಮಾನ್ಯತೆಗಳು:–</u>

- The Karnataka Education Act-1983 ನಿಯಮ–30, 31, 33, 36 ಹಾಗೂ 38 ರನ್ವಯ ಖಾಸಗಿ ಪ್ರೌಢಶಾಲೆಗಳು ನೊಂದಣಿ ಮತ್ತು ಮಾನ್ಯತೆಗಳನ್ನು ನವೀಕರಿಸಬೇಕಾಗಿರುವುದು ಕಡ್ಡಾಯವಾಗಿರುತ್ತದೆ.
- 2016–17ನೇ ಸಾಲಿನ ಮಾನ್ಯತೆ ನವೀಕರಣ ಸಕ್ಷಮ ಪ್ರಾಧಿಕಾರದಿಂದ ಪಡೆದು ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾಗಿರುತ್ತದೆ.
- ಪ್ರೌಢಶಾಲೆಯಲ್ಲಿ ಬೋಧನೆ ಮಾಡುವ ಮಾಧ್ಯಮಗಳಿಗನುಗುಣವಾಗಿ ಸಕ್ಷಮ ಪ್ರಾಧಿಕಾರದಿಂದ ಮಾನ್ಯತೆಯ ನವೀಕರಣವಾಗಿರಬೇಕು. ಮಾನ್ಯತೆ ನವೀಕರಣದ ದಾಖಲಾತಿಯನ್ನು ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳವರಿಂದ ದೃಢೀಕರಣ ಪಡೆದು ಸಲ್ಲಿಸಬೇಕು.

## <u>III. ಆಡಳಿತ ವಿಭಾಗ:–</u>

**<u>ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳನ್ನು ಕೆಳಕಂಡಂತೆ ವರ್ಗೀಕರಿಸಲಾಗಿದೆ:–</u>**

1. **<u>ಶಾಲಾ ಅಭ್ಯರ್ಥಿಗಳು</u>**:–ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಕಾಯ್ದೆ–1966ರ **Chapter-VI** ನಿಯಮ–37(**i)(ii)** ಮತ್ತು **Annexure-III** ನಿಯಮ–7ರನ್ವಯ, ರಾಜ್ಯದ ಅಧಿಕೃತ ಪ್ರೌಢ ಶಾಲೆಯಲ್ಲಿ 8 ರಿಂದ 10ನೇ ತರಗತಿಯವರೆಗೆ ವಿದ್ಯಾರ್ಥಿ ವ್ಯಾಸಂಗ ಮಾಡಿರಬೇಕು ಇಂತಹ ವಿದ್ಯಾರ್ಥಿಯನ್ನು ಶಾಲಾ ವಿದ್ಯಾರ್ಥಿಯೆಂದು ಪರಿಗಣಿಸಲಾಗುತ್ತದೆ.

   2016–17ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಸರ್ಕಾರಿ ಮತ್ತು ಮಾನ್ಯತೆ ಪಡೆದ ಅನುದಾನಿತ ಹಾಗೂ ಅನುದಾನ ರಹಿತ ಶಾಲಾ ಕಾಲೇಜುಗಳಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಶಾಲಾ ಅಭ್ಯರ್ಥಿಗಳೆಂದು ಪರಿಗಣಿಸಿದೆ. ಈ ವರ್ಗದ ಸಂಕೇತ **ಸಿ.ಸಿ.ಇ.–ಆರ್.ಎಫ್.(CCERF)** ಎಂದು ವರ್ಗೀಕರಿಸಿದೆ.

2. **<u>ಪುನರಾವರ್ತಿತ ಅಭ್ಯರ್ಥಿಗಳು</u>**:-ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ, ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕುಳಿತು ಅನುತ್ತೀರ್ಣರಾಗಿ ಪುನ: ಪರೀಕ್ಷೆ ಬರೆಯಲು ಬಯಸಿರುವ ವಿದ್ಯಾರ್ಥಿಗಳಿಗೆ ಸಂಕೇತ **ಆರ್.ಆರ್.(R.R.)** ಎಂದು ವರ್ಗೀಕರಿಸಿದೆ. ರೆಗ್ಯುಲರ್ ಪುನರಾವರ್ತಿತ ವಿಭಾಗದಲ್ಲಿಯೂ ಸಹ ಎರಡು ವರ್ಗಗಳಿರುತ್ತವೆ.

a)**CCE** ಪದ್ದತಿಯಲ್ಲಿ 2015 ರಲ್ಲಿ ಕುಳಿತು ಅನುತ್ತೀರ್ಣರಾಗಿದ್ದು, ಮನಃ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳನ್ನು **CCERR** ಎಂಬುದಾಗಿ ವರ್ಗೀಕರಿಸಲಾಗಿದೆ.

b)2015ಕ್ಕಿಂತ ಪೂರ್ವದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ಕುಳಿತು ಅನುತ್ತೀರ್ಣರಾಗಿದ್ದು, ಪುನಃ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೆಗೆದುಕೊಳ್ಳುವ ವಿದ್ಯಾರ್ಥಿಗಳನ್ನು **R.R.** ಎಂಬುದಾಗಿ ವರ್ಗೀಕರಿಸಲಾಗಿದೆ.

3. **<u>ಖಾಸಗಿ ಅಭ್ಯರ್ಥಿಗಳು</u>:-**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಕಾಯ್ದೆ-1966ರ **Chapter-VI** ನಿಯಮ-39(**i)(iii)(iv)** ಮತ್ತು **Annexure-III** ನಿಯಮ-9**(a)(b)** ರನ್ವಯ, ಖಾಸಗಿ ಅಭ್ಯರ್ಥಿಯಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆಯಲು ಅನುಮತಿ ಬಯಸುವ ಅಭ್ಯರ್ಥಿಗಳು ಆಯಾ ವರ್ಷದ ಮಾರ್ಚ್-1ನೇ ತಾರೀಖಿಗೆ 15 ವರ್ಷ ವಯೋಮಿತಿ ಹೊಂದಿರಬೇಕು ಹಾಗೂ ಜಿಲ್ಲಾ ಉಪನಿರ್ದೇಶಕರುಗಳ ಕಛೇರಿಗಳಲ್ಲಿ ನೊಂದಾವಣೆ ಮಾಡಿಸಿಕೊಂಡಿರಬೇಕು.

ಮಾನ್ಯತೆ ಪಡೆದ ಮತ್ತು ಶಾಲಾ ಸಂಕೇತ ಪಡೆದ ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡದಿರುವ/ಅರ್ಧದಲ್ಲಿಯೇ ವ್ಯಾಸಂಗ ಮೊಟಕುಗೊಳಿಸಿರುವ ಅಥವಾ **ದಿನಾಂಕ:01.03.2017ಕ್ಕೆ** 15 ವರ್ಷಗಳ ವಯೋಮಾನ ಪೂರ್ಣಗೊಳಿಸಿ ನೇರವಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳಲು ಅಪೇಕ್ಷಿಸುವವರನ್ನು ಖಾಸಗಿ ಅಭ್ಯರ್ಥಿಗಳೆಂದು ಪರಿಗಣಿಸಲಾಗುತ್ತದೆ. ಇವರುಗಳು ತಮ್ಮ ಹೆಸರು ಮತ್ತು ಇತರೆ ವಿವರಗಳನ್ನು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರವರ ಕಚೇರಿಯಲ್ಲಿ ನೋಂದಣಿ ಶುಲ್ಕ ರೂ:.180+5=ರೂ.185/- ಪಾವತಿಸಿ ನೋಂದಾಯಿಸಿಕೊಳ್ಳಬೇಕು. ಈ ಹಿಂದಿನ ವರ್ಷಗಳಲ್ಲಿ ಉಪನಿರ್ದೇಶಕರ ಕಛೇರಿಯಲ್ಲಿ ನಿಗದಿತ ನೋಂದಣಿ ಶುಲ್ಕ ಪಾವತಿಸಿ ನೋಂದಣಿ ಮಾಡಿಸಿಕೊಂಡು ಆ ವರ್ಷದಲ್ಲಿ ಪರೀಕ್ಷೆ ತೆಗೆದುಕೊಳ್ಳದಿದ್ದಲ್ಲಿ ಪ್ರಸ್ತಕ ಸಾಲಿಗೆ ರೂ.50/-ನ್ನು ಪಾವತಿಸಿ ನವೀಕರಿಸಿಕೊಂಡು ಪರೀಕ್ಷೆಗೆ ಹಾಜರಾಗಬಹುದು. ಈ ವರ್ಗದ ಸಂಕೇತ **ಸಿ.ಸಿ.ಇ.ಪಿ.ಎಫ್.(CCEPF)** ಎಂದು ವರ್ಗೀಕರಿಸಿದೆ. ಖಾಸಗಿ ಅಭ್ಯರ್ಥಿಗಳು ನೋಂದಾಯಿಸಿಕೊಳ್ಳಲು ಕೊನೆಯ **ದಿನಾಂಕ:22.08.2016** ಆಗಿರುತ್ತದೆ. ಖಾಸಗಿ ಅಭ್ಯರ್ಥಿಯಾಗಿ ನೋಂದಾವಣೆ ಮಾಡಿಕೊಂಡ ವಿದ್ಯಾರ್ಥಿಗಳು **2014-15ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬಂದಿರುವ ಹೊಸ ಪಠ್ಯಕ್ರಮದ ವಿಷಯಗಳಿಗೆ ಪರೀಕ್ಷೆ ಬರೆಯಬೇಕಾಗುತ್ತದೆ.**

**ಏಪ್ರಿಲ್-2011 ಮತ್ತು ನಂತರದ ಅವಧಿಗಳಲ್ಲಿ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳು ಸತತ 06 ಪ್ರಯತ್ನಗಳಲ್ಲಿ ತೇರ್ಗಡೆಯಾಗಬೇಕು.** ಇಲ್ಲವಾದಲ್ಲಿ, ಖಾಸಗಿ ಅಭ್ಯರ್ಥಿಗಳಾಗಿ ಪುನಃ ಎಲ್ಲಾ 06 ವಿಷಯಗಳಿಗೆ ಪರೀಕ್ಷೆ ಬರೆಯಬೇಕಾಗುತ್ತದೆ. ಇವರುಗಳಿಗೂ ಸಹ ಖಾಸಗಿ ಅಭ್ಯರ್ಥಿಗಳಿಗೆ ಅನುಸರಿಸುವ ವಿಧಿವಿಧಾನಗಳನ್ನು ಪಾಲಿಸಬೇಕಾಗುತ್ತದೆ. ಉದಾಹರಣೆಗಾಗಿ ಉಪನಿರ್ದೇಶಕರ ಕಛೇರಿಯಲ್ಲಿ ನೋಂದಣಿ ಮತ್ತು ಅಧಿಕೃತ ಶಾಲೆಗಳ ಮುಖೇನ ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಬೇಕಾಗುತ್ತದೆ.

4. **<u>ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳು</u>**:-ಖಾಸಗಿ ವಿದ್ಯಾರ್ಥಿಗಳಾಗಿ ಉಪನಿರ್ದೇಶಕರ ಕಛೇರಿಯಲ್ಲಿ ನೋಂದಣಿ ಮಾಡಿಕೊಂಡು ಪರೀಕ್ಷೆಯಲ್ಲಿ ಕುಳಿತು ಅನುತ್ತೀರ್ಣರಾಗಿ ಪುನ: ಪರೀಕ್ಷೆ ಬರೆಯಲು ಬಯಸಿರುವ ವಿದ್ಯಾರ್ಥಿಗಳನ್ನು **ಪಿ.ಆರ್.(P.R.)** ಎಂದು ವರ್ಗೀಕರಿಸಿದೆ. ಖಾಸಗಿ ಪುನರಾವರ್ತಿತ ವಿಭಾಗದಲ್ಲಿಯೂ ಸಹ ಎರಡು ವರ್ಗಗಳಿರುತ್ತವೆ.

a)**CCE** ಪದ್ದತಿಯಲ್ಲಿ 2015 ಮತ್ತು ನಂತರದಲ್ಲಿ ಕುಳಿತು ಅನುತ್ತೀರ್ಣರಾಗಿದ್ದು, ಪುನಃ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ತೆಗೆದುಕೊಳ್ಳುವ ಖಾಸಗಿ ವಿದ್ಯಾರ್ಥಿಗಳನ್ನು **CCEPR** ಎಂಬುದಾಗಿ ವರ್ಗೀಕರಿಸಲಾಗಿದೆ.

b)2015ಕ್ಕಿಂತ ಪೂರ್ವದಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಗಳಲ್ಲಿ ಕುಳಿತು ಅನುತ್ತೀರ್ಣರಾಗಿದ್ದು, ಪುನಃ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೆಗೆದುಕೊಳ್ಳುವ ಖಾಸಗಿ ವಿದ್ಯಾರ್ಥಿಗಳನ್ನು **P.R.** ಎಂಬುದಾಗಿ ವರ್ಗೀಕರಿಸಲಾಗಿದೆ.

c) ಈ ಅಭ್ಯರ್ಥಿಗಳು 2014-15ನೇ ಸಾಲಿನಿಂದ ಜಾರಿಗೆ ಬಂದಿರುವ ಹೊಸ ಪಠ್ಯಕ್ರಮದಲ್ಲಿನ ವಿಷಯಗಳನ್ನು ಅಭ್ಯಾಸಮಾಡಿ ಏಪ್ರಿಲ್-2017ರ ಪರೀಕ್ಷೆಗೆ ಕುಳಿತುಕೊಳ್ಳಬೇಕಾಗುತ್ತದೆ.

**VI. <u>ಅರ್ಜಿಗಳ ಸ್ವರೂಪ</u>:–**ಶಾಲಾ ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳು ಓ.ಎಂ.ಆರ್.(ಆಪ್ಟಿಕಲ್ ಮಾರ್ಕ್ ರೀಡರ್) ನಮೂನೆಗಳ ರೂಪದಲ್ಲಿರುತ್ತವೆ. ಶಾಲಾ/ಕಾಲೇಜುಗಳಿಂದ ಭರ್ತಿ ಮಾಡಿದ ಓ.ಎಂ.ಆರ್. ನಮೂನೆಗಳನ್ನು ನೇರವಾಗಿ ಕಂಪ್ಯೂಟರ್ ಸ್ಕ್ಯಾನ್ ಮಾಡಲಾಗುತ್ತದೆ. ಆದ್ದರಿಂದ ಶಾಲಾ ಹಂತದಲ್ಲಿ ಮುಖ್ಯೋಪಾಧ್ಯಾಯರು, ವಿದ್ಯಾರ್ಥಿಯ ನಿಖರವಾದ ಮಾಹಿತಿಯನ್ನು ನಿಖರವಾಗಿ ನಿಗಧಿತ ಬಾಕ್ಸ್‌ಗಳಲ್ಲಿ ಶೇಡ್ ಮಾಡಬೇಕು. ಶಾಲಾ ಸಿಬ್ಬಂದಿ ತಪ್ಪು ಶೇಡ್ ಮಾಡಿದಲ್ಲಿ ವಿದ್ಯಾರ್ಥಿಗೆ ಮುಂದಿನ ದಿನಗಳಲ್ಲಿ ತೊಂದರೆಯಾಗುತ್ತದೆ. ಅದನ್ನು ತಪ್ಪಿಸಲು ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ಅತಿ ಎಚ್ಚರಿಕೆಯಿಂದ ಮತ್ತು ಜಾಗರೂಕತೆಯಿಂದ ಶೇಡ್ ಮಾಡುವುದು. ತಪ್ಪು ಶೇಡ್ ಮಾಡಿದಲ್ಲಿ ಮುಖ್ಯ ಶಿಕ್ಷಕರಿಗೆ ಹಾಗೂ ಶಾಲಾ ಸಿಬ್ಬಂದಿಯವರಿಗೆ ಪ್ರತಿ ತಪ್ಪಿಗೆ ದಂಡ ವಿಧಿಸಲಾಗುತ್ತದೆ.

**<u>ಎಂ.ಎಸ್.ಎ. ಅರ್ಜಿಗಳು</u>:–**ಪುನರಾವರ್ತಿತ(CCERR+RR+CCEPR+**P**R ಸೇರಿದಂತೆ) ಅಭ್ಯರ್ಥಿಗಳು ಎಂ.ಎಸ್.ಎ. ಅರ್ಜಿಗಳೊಂದಿಗೆ ಸಲ್ಲಿಸಬೇಕು. ಯಾವ ವಿಷಯಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಬೇಕು(subject offered for Examination) ಮತ್ತು ಯಾವ ವಿಷಯಗಳಲ್ಲಿ ತೇರ್ಗಡೆಯಾಗಿರುವ ಬಗ್ಗೆ ಸ್ಪಷ್ಟವಾಗಿ ನಮೂದಾಗಿರುವುದನ್ನು ಪರಿಶೀಲಿಸಿ, ಅರ್ಜಿಗಳನ್ನು ಸಲ್ಲಿಸಬೇಕು.

- ಪುನರಾವರ್ತಿತ ಅಭ್ಯರ್ಥಿಗಳಿಂದ ಎಂ.ಎಸ್.ಎ. ಅರ್ಜಿ, ಭಾವಚಿತ್ರ ಮತ್ತು ಪರೀಕ್ಷಾ ಶುಲ್ಕಗಳನ್ನು ಪಡೆಯುವುದು ಕಡ್ಡಾಯ. ಕೆಲವು ಮುಖ್ಯ ಶಿಕ್ಷಕರುಗಳು ಕೇವಲ ಶುಲ್ಕವನ್ನು ಮಾತ್ರ ಪಡೆದು ಮಂಡಳಿಗೆ ಪ್ರಸ್ತಾವನೆ ಸಲ್ಲಿಸುತ್ತಿರುವುದನ್ನು ಮಂಡಳಿ ಗಮನಿಸಿದೆ. ನಂತರದಲ್ಲಿ ಎಂ.ಎಸ್.ಎ. ಅರ್ಜಿ ಮತ್ತು ಭಾವಚಿತ್ರಗಳನ್ನು ಪಡೆಯದೇ ಅನಾವಶ್ಯಕವಾಗಿ ಮಂಡಳಿಯೊಡನೆ ಪತ್ರವ್ಯವಹಾರ ಮಾಡುತ್ತಿರುವುದು ಗಮನಿಸಿದೆ.
- ಇದನ್ನು ತಡೆಗಟ್ಟುವಲ್ಲಿ ಮುಖ್ಯ ಗುರುಗಳು ಅರ್ಜಿಗಳನ್ನು ಸ್ವೀಕರಿಸುವ ಸಂದರ್ಭದಲ್ಲಿಯೇ ಎಂ.ಎಸ್.ಎ. ಅರ್ಜಿ/ಭಾವಚಿತ್ರ/ಪರೀಕ್ಷಾ ಶುಲ್ಕಗಳನ್ನು ಪಡೆಯುವುದು ಕಡ್ಡಾಯಗೊಳಿಸಿದೆ. ಎಂ.ಎಸ್.ಎ. ಅರ್ಜಿ ಮತ್ತು ಭಾವಚಿತ್ರಗಳನ್ನು ಸಲ್ಲಿಸದೇ ಕೇವಲ ಶುಲ್ಕ ಪಾವತಿ ಮಾಡಿ ನಾಮಿನಲ್ ರೋಲ್(ನಾಮಯಾದಿ ಪಟ್ಟಿ)ನಲ್ಲಿ ಹೆಸರು ಸೇರ್ಪಡಿಸಿರುವ ಅಭ್ಯರ್ಥಿಗಳ ನೊಂದಣಿಯನ್ನು ತಿರಸ್ಕರಿಸಲಾಗುವುದು. ಅಪೂರ್ಣ ಮಾಹಿತಿಗಳನ್ನೊಳಗೊಂಡ ಅರ್ಜಿಗಳನ್ನು ಪುರಸ್ಕರಿಸುವುದಿಲ್ಲ.
- ಈ ಪುನರಾವರ್ತಿತ ವಿದ್ಯಾರ್ಥಿಗಳು 2014–15ನೇ ಸಾಲಿನಿಂದ ಜಾರಿಗೆ ಬಂದಿರುವ ಹೊಸ ಪಠ್ಯಕ್ರಮದಲ್ಲಿನ ವಿಷಯಗಳನ್ನು ಅಭ್ಯಾಸಮಾಡಿ ಏಪ್ರಿಲ್–2017ರ ಪರೀಕ್ಷೆಗೆ ಕುಳಿತುಕೊಳ್ಳಬೇಕಾಗುತ್ತದೆ.

*<u>ಪುನರಾವರ್ತಿತ ಅಭ್ಯರ್ಥಿಗಳ ಎಂ.ಎಸ್.ಎ.ಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬೇಕು.</u>*

- ಜುಲೈ–2002ರ ಮತ್ತು ಹಿಂದಿನ ವರ್ಷಗಳಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳ ಎಂ.ಎಸ್.ಎ.ಗಳು.
- ಏಪ್ರಿಲ್–2003ರ ಮತ್ತು ನಂತರದ ವರ್ಷಗಳಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳ ಎಂ.ಎಸ್.ಎ.ಗಳು.

**1. <u>ಶಾಲಾ ಅಭ್ಯರ್ಥಿಗಳು(CCERF) ಹಾಗೂ ಹೊಸದಾಗಿ ನೋಂದಾಯಿಸಲ್ಪಡುವ ಖಾಸಗಿ ವಿದ್ಯಾರ್ಥಿಗಳು(CCEPF) ಓ.ಎಂ.ಆರ್. ಅರ್ಜಿಗಳನ್ನು ಬಳಸುವುದು</u>:–**

ಪರೀಕ್ಷಾ ಶುಲ್ಕ/ನೋಂದಣಿ ಶುಲ್ಕ ಪಾವತಿಸಿದ ವಿದ್ಯಾರ್ಥಿಗಳಿಗೆ ಕೆಳಕಂಡ ನಾಮಿನಲ್ ರೋಲ್‌ನಲ್ಲಿ ವಿದ್ಯಾರ್ಥಿಗಳ ಮಾಹಿತಿಯನ್ನು ಮುಖ್ಯೋಪಾಧ್ಯಾಯರು ಮಂಡಳಿಗೆ ಸಲ್ಲಿಸಬೇಕು. ಪ್ರತಿ ಶಾಲೆಯಿಂದ ಬರುವ ನಾಮಿನಲ್ ರೋಲ್‌ನಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶಾಲಾವಾರು ಓ.ಎಂ.ಆರ್. ಅರ್ಜಿಗಳನ್ನು ಪರೀಕ್ಷಾ ಮಂಡಳಿಯಿಂದ ಶಾಲೆಗಳಿಗೆ ರವಾನಿಸಲಾಗುವುದು. ನಾಮಿನಲ್ ರೋಲ್‌ನಲ್ಲಿರುವ ವಿದ್ಯಾರ್ಥಿಗಳಿಗೆ ನಿಗಧಿತ ಶುಲ್ಕ ಕಡ್ಡಾಯ. ಒಂದು ವೇಳೆ ಮುಖ್ಯ ಶಿಕ್ಷಕರು ಶುಲ್ಕಪಾವತಿ ಮಾಡದ ವಿದ್ಯಾರ್ಥಿಗಳ ಹೆಸರನ್ನು ನಾಮಿನಲ್ ರೋಲ್‌ನಲ್ಲಿ ಸೇರ್ಪಡೆ ಮಾಡಿದ್ದರೆ, ಅಂತಹ ವಿದ್ಯಾರ್ಥಿಗಳ ಹೆಸರನ್ನು ತಿರಸ್ಕರಿಸಲಾಗುವುದು. ಶಾಲೆ ಅನುಮತಿ ಪಡೆದಿರುವ ಮಾಧ್ಯಮಗಳ ಬಗ್ಗೆ ಪ್ರಮಾಣ ಪತ್ರವನ್ನು ಇದರೊಂದಿಗೆ ಲಗತ್ತಿಸುವುದು.

**<u>ನಾಮಿನಲ್ ರೋಲ್</u>:–**

| ಶಾಲಾ ಸಂಕೇತ ಮತ್ತು ವಿಳಾಸ | ವಿದ್ಯಾರ್ಥಿಯ ಹೆಸರು (Capital letters) | ತಂದೆಯ ಹೆಸರು (Capital letters) | ತಾಯಿಯ ಹೆಸರು (Capital letters) | ಜನ್ಮ ದಿನಾಂಕ | ಲಿಂಗ ಹೆಣ್ಣು / ಗಂಡು | ಜಾತಿ ಎಸ್.ಸಿ/ ಎಸ್.ಟಿ./ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಇತರೆ | ಇಲಾಖೆಯಿಂದ ಅನುಮತಿ ಪಡೆದಿರುವ ಮಾಧ್ಯಮ | ದೈಹಿಕ ಸ್ಥಿತಿ |
|---|---|---|---|---|---|---|---|---|

| | | | | | | | | |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |

| ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಬರೆಯುವ ವಿಷಯಗಳು | ಭಾಷಾ ವಿಷಯಗಳು | ಐಚ್ಛಿಕ ವಿಷಯಗಳು | ವಿದ್ಯಾರ್ಥಿಗಳ ಯುಐಡಿ ಸಂಖ್ಯೆ (ಲಭ್ಯವಿದ್ದಲ್ಲಿ) | ಪೋಷಕರ ದೂರವಾಣಿ ಸಂಖ್ಯೆ | ಶಾಲಾ ದೂರವಾಣಿ ಸಂಖ್ಯೆ | ಪಾವತಿಸಿದ ಪರೀಕ್ಷಾ ಶುಲ್ಕ |
|---|---|---|---|---|---|---|
| 10 | 11 | 12 | 13 | 14 | 15 | 16 |

**V. <u>ಪರೀಕ್ಷಾ ಶುಲ್ಕ</u>:**–ಸರ್ಕಾರದ ಆದೇಶ ಸಂಖ್ಯೆ:ಇಡಿ.254.ಎಸ್.ಎಲ್.ಬಿ.2015, ದಿನಾಂಕ:18.08.2015 ರನ್ವಯ ಏಪ್ರಿಲ್–2017ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ನಿಗಧಿಪಡಿಸಿದ ಪರೀಕ್ಷಾ ಶುಲ್ಕದ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ.ಸಂ. | ವಿದ್ಯಾರ್ಥಿಗಳ ವಿವರ | ಶುಲ್ಕದ ವಿವರ |
|---|---|---|
| 1 | ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ಶಾಲಾ ಅಭ್ಯರ್ಥಿಗಳು<br>ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ಖಾಸಗಿ ಅಭ್ಯರ್ಥಿಗಳು<br>CCERF ಮತ್ತು CCEPF | ಪರೀಕ್ಷಾ ಶುಲ್ಕ ರೂ.365/– + ರೂ.20/–<br>(ಲ್ಯಾಮಿನೇಷನ್ ಶುಲ್ಕ)<br>**ಒಟ್ಟು ರೂ.385/– (ಪ್ರತಿ ವಿದ್ಯಾರ್ಥಿಗೆ)** |
| 2 | **ಪುನರಾವರ್ತಿತ ಅಭ್ಯರ್ಥಿಗಳು:**(CCERR+CCEPR+RR+PR)<br>1. ಒಂದು ವಿಷಯಕ್ಕೆ<br>2. ಎರಡು ವಿಷಯಕ್ಕೆ<br>3. ಮೂರು ವಿಷಯ ಹಾಗೂ ಮೂರಕ್ಕಿಂತ ಹೆಚ್ಚಿನ ವಿಷಯಗಳಿಗೆ | ಪ್ರತಿ ವಿದ್ಯಾರ್ಥಿಗೆ<br>ರೂ.240/–<br>ರೂ.290/–<br>ರೂ.390/– |
| 3 | ಖಾಸಗಿ ಅಭ್ಯರ್ಥಿಗಳ ನೋಂದಣಿ ಶುಲ್ಕ | ರೂ.180/–+ರೂ.5/– ಅರ್ಜಿ ಶುಲ್ಕ<br>(ಪ್ರತಿ ವಿದ್ಯಾರ್ಥಿಗೆ) |
| 4 | ಖಾಸಗಿ ಅಭ್ಯರ್ಥಿಗಳ ನೋಂದಣಿ ನವೀಕರಣ ಶುಲ್ಕ | ರೂ.50/– ಪ್ರತಿ ವಿದ್ಯಾರ್ಥಿಗೆ |

- ಪ್ರಥಮ ಬಾರಿಗೆ ಪರೀಕ್ಷೆಗೆ ಕುಳಿತುಕೊಳ್ಳುವ ಎಲ್ಲಾ ವರ್ಗದ ವಿದ್ಯಾರ್ಥಿಗಳು ಅಂಕಪಟ್ಟಿಯ ಲ್ಯಾಮಿನೇಷನ್ ಶುಲ್ಕ ರೂ.**20**/–(ರೂ.ಇಪ್ಪತ್ತು ಮಾತ್ರ) ಗಳನ್ನು ಕಡ್ಡಾಯವಾಗಿ ಪಾವತಿಸಬೇಕು. **ಯಾವುದೇ ವಿದ್ಯಾರ್ಥಿಗೂ ಲ್ಯಾಮಿನೇಷನ್ ಶುಲ್ಕ ಪಾವತಿಯಿಂದ ವಿನಾಯಿತಿ ಇರುವುದಿಲ್ಲ.**
- ಪುನರಾವರ್ತಿತ ವಿದ್ಯಾರ್ಥಿಗಳು ಪುನ: ಲ್ಯಾಮಿನೇಷನ್ ಶುಲ್ಕ ಪಾವತಿಸುವ ಅಗತ್ಯವಿಲ್ಲ.

**VI. <u>ಪರೀಕ್ಷಾ ಶುಲ್ಕ ವಿನಾಯಿತಿ:</u>**

1. ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಿದೆ. ಈ ವಿದ್ಯಾರ್ಥಿಗಳ ಜಾತಿ ಪ್ರಮಾಣ ಪತ್ರಗಳನ್ನು ನಾಮಿನಲ್ ರೋಲ್‌ನೊಂದಿಗೆ ಮಂಡಳಿಗೆ ಕಳುಹಿಸುವಂತಿಲ್ಲ.
2. ಹಿಂದುಳಿದ ವರ್ಗಗಳ ಇಲಾಖೆಯ ಸರ್ಕಾರಿ ಆದೇಶದ ಸಂಖ್ಯೆ: ಬಿ.ಸಿ.ಡಬ್ಲ್ಯೂ 07 ಬಿ.ಎಂ.ಎಸ್–2015 ಬೆಂಗಳೂರು ದಿನಾಂಕ:24.01.2015ರ ಅನ್ವಯ ಮೊದಲ ಬಾರಿಗೆ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕುಳಿತುಕೊಳ್ಳುವ (FRESHERS ONLY) ವಿವಿಧ ಪ್ರವರ್ಗಗಳ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದ ವಿನಾಯಿತಿ ಇರುತ್ತದೆ. ಈ ಸೌಲಭ್ಯ ಪಡೆಯಲು ಬಯಸುವ ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ ಹಾಗೂ ಪ್ರವರ್ಗ–3ಎ ಮತ್ತು ಪ್ರವರ್ಗ–3ಬಿ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿಗಳ/ ಪೋಷಕರ ವಾರ್ಷಿಕ ಆದಾಯ ಮಿತಿ ಕೆಳಕಾಣಿಸಿದಂತೆ ನಿಗದಿಗೊಳಿಸಿದೆ(ಹೆಚ್ಚಿನ ವಿವರಗಳಿಗೆ ಸಂಬಂಧಿಸಿದ ಹಿಂದುಳಿದ ವರ್ಗಗಳ ಕಛೇರಿಯನ್ನು ಸಂಪರ್ಕಿಸತಕ್ಕದ್ದು).

| ನಿಗದಿಪಡಿಸಿರುವ ವಾರ್ಷಿಕ ಆದಾಯ ಮಿತಿ | |
|---|---|
| **ಪ್ರವರ್ಗ–1 ರಲ್ಲಿ ಬರುವ ವಿದ್ಯಾರ್ಥಿಗಳಿಗೆ** | **ಪ್ರವರ್ಗ–2ಎ, 2ಬಿ, 3ಎ ಮತ್ತು 3ಬಿ ಗಳಿಗೆ** |
| ರೂ.1.00ಲಕ್ಷ(ಒಂದು ಲಕ್ಷದ ರೂಪಾಯಿಗಳು ಮಾತ್ರ) | ರೂ.44,500/– (ನಲವತ್ತಾಲ್ಕು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) |

ಪ್ರವರ್ಗ ಗುಂಪಿನಲ್ಲಿ ಬರುವ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ವಿನಾಯಿತಿ ಪಡೆಯಲು ಸಕ್ಷಮ ಪ್ರಾಧಿಕಾರದಿಂದ ಪಡೆದ **ಜಾತಿ ಮತ್ತು ಆದಾಯ ಪ್ರಮಾಣ ಪತ್ರ** ಈ ಎರಡೂ ಪ್ರಮಾಣ ಪತ್ರಗಳನ್ನು ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ಶಾಲೆಯ ಮುಖ್ಯ ಗುರುಗಳು ಪರೀಕ್ಷಾ ಶುಲ್ಕದ ವಿನಾಯಿತಿಯನ್ನು ದೃಢೀಕರಿಸುವ ಸಂದರ್ಭದಲ್ಲಿಯೇ ವಿದ್ಯಾರ್ಥಿಗಳಿಂದ/ ಪೋಷಕರಿಂದ ಈ ಪ್ರಮಾಣಪತ್ರಗಳನ್ನು ಪಡೆಯತಕ್ಕದ್ದು, **ಈ ಪ್ರಮಾಣ ಪತ್ರಗಳನ್ನು ಸಲ್ಲಿಸದೇ ಶುಲ್ಕ ವಿನಾಯಿತಿ ನೀಡುವಂತಿಲ್ಲ**. ಜಾತಿ ಮತ್ತು ಆದಾಯ ಪ್ರಮಾಣಪತ್ರ ಸಲ್ಲಿಸಲು ಸಾಧ್ಯವಾಗದೇ ಇರುವ ಸಂದರ್ಭಗಳಲ್ಲಿ, ಅಂತಹ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಮಂಡಳಿಗೆ ಪಾವತಿಸಬೇಕಾಗುತ್ತದೆ. ಈ ಅಂಶವನ್ನು ಎಲ್ಲಾ ಮುಖ್ಯ ಗುರುಗಳು ತಪ್ಪದೇ ಪಾಲಿಸತಕ್ಕದ್ದು ಹಾಗೂ ಈ ಬಗ್ಗೆ ಅನಗತ್ಯವಾಗಿ ಮಂಡಳಿಗೆ ಪತ್ರ ವ್ಯವಹಾರ ಮಾಡತಕ್ಕದ್ದಲ್ಲ.

3. ಪ್ರವರ್ಗಗಳಿಗೆ ಸೇರಿದ ಹಾಗೂ ಪರೀಕ್ಷಾ ಶುಲ್ಕ ವಿನಾಯಿತಿ ಪಡೆದ ಅರ್ಹ ವಿದ್ಯಾರ್ಥಿಗಳ ಜಾತಿ ಮತ್ತ ಆದಾಯ ಪ್ರಮಾಣ ಪತ್ರಗಳ ಪ್ರತಿಗಳನ್ನು ಮುಖ್ಯೋಪಾಧ್ಯಾಯರು ದೃಢೀಕರಿಸಿ ನಾಮಿನಲ್ ರೋಲ್‌ನೊಂದಿಗೆ ಮಂಡಳಿಗೆ ಸಲ್ಲಿಸಬೇಕು. ಈ ಪ್ರಮಾಣ ಪತ್ರಗಳನ್ನು ಲಗತ್ತಿಸದೆ ಶುಲ್ಕ ಪಾವತಿಸಿಲ್ಲದಿದ್ದ ಸಂದರ್ಭದಲ್ಲಿ ಅಂತಹ ವಿದ್ಯಾರ್ಥಿಗಳಿಗೆ ಓ.ಎಂ.ಆರ್.ಗಳನ್ನು ಮುದ್ರಿಸಿ ಶಾಲೆಗೆ ಕಳುಹಿಸಲಾಗುವುದಿಲ್ಲ. ಆದ್ದರಿಂದ ಪ್ರವರ್ಗದ ವಿದ್ಯಾರ್ಥಿಗಳ ಶುಲ್ಕ ವಿನಾಯಿತಿ ಪಡೆಯುವಲ್ಲಿ ಮುಖ್ಯೋಪಾಧ್ಯಾಯರು ಬಹಳ ಮುನ್ನೆಚ್ಚರಿಕೆ ವಹಿಸುವಂತೆ ತಿಳಿಸಿದೆ.
4. ಮೇಲೆ ವಿವರಿಸಿರುವ ಹಿಂದುಳಿದ ಪ್ರವರ್ಗಗಳ ಪುನರಾವರ್ತಿತ ಅಭ್ಯರ್ಥಿಗಳಿಗೆ (REPEATERS) ಪರೀಕ್ಷಾ ಶುಲ್ಕದ ವಿನಾಯಿತಿ ಇರುವುದಿಲ್ಲ.
5. ಸರ್ಕಾರಿ ಆದೇಶದ ಸಂಖ್ಯೆ:ಇಡಿ.119.ಯೋಯೋಕಾ, ದಿನಾಂಕ:16.07.2001ರ ಅನ್ವಯ ಸರ್ಕಾರಿ ಪ್ರೌಢ ಶಾಲೆ/ ಪದವಿ ಪೂರ್ವ ಕಾಲೇಜುಗಳಲ್ಲಿ ಶಾಲಾ ಅಭ್ಯರ್ಥಿಗಳಾಗಿ ಪ್ರಥಮ ಬಾರಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗುವ ಹೆಣ್ಣುಮಕ್ಕಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಿದೆ.
6. ಸರ್ಕಾರಿ ಆದೇಶದ ಸಂಖ್ಯೆ:ಇಡಿ.98.ಎಸ್.ಎಕ್ಸ್.ಎಂ.98, ದಿನಾಂಕ:20.01.1997 ಕಿವುಡ/ ಮೂಗ/ ಅಂಧತ್ವ ಹಾಗೂ ಅರ್ಬುದ ರೋಗಗಳಿಂದ ನರಳುತ್ತಿರುವ ಶಾಲಾ ಅಭ್ಯರ್ಥಿ/ ಖಾಸಗಿ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಿದೆ. ಈ ಸೌಲಭ್ಯ ಪಡೆಯಲು ಜಿಲ್ಲಾ ಆರೋಗ್ಯಾಧಿಕಾರಿಗಳ ವೈದ್ಯಕೀಯ ಪ್ರಮಾಣ ಪತ್ರ ಪಡೆದು ಶಾಲಾ ಮುಖ್ಯಸ್ಥರಿಗೆ ಹಾಜರು ಪಡಿಸಬೇಕು. ಎಲ್ಲಾ ಮುಖ್ಯೋಪಾಧ್ಯಾಯರು ಮಂಡಳಿ ಸರಬರಾಜು ಮಾಡಿರುವ ಮಾರ್ಗದರ್ಶಿ ಪುಸ್ತಕದಲ್ಲಿ ನಮೂದಿಸಿರುವ ಸೌಲಭ್ಯಗಳನ್ನು ಈ ವಿದ್ಯಾರ್ಥಿಗಳಿಗೆ ಒದಗಿಸಲು ತಿಳಿಸಿದೆ.

   **ಎಲ್ಲಾ ವರ್ಗದ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿಯ ಲ್ಯಾಮಿನೇಷನ್ ಶುಲ್ಕವನ್ನು ಒಟ್ಟಿಗೆ ಸೇರಿಸಿ, ಮಂಡಳಿಗೆ ಪಾವತಿಯಾಗುವಂತೆ ಕೆಳಕಂಡ ಮಾರ್ಗಸೂಚಿಯಲ್ಲಿ ಸೂಚಿಸಿರುವಂತೆ ಪಾವತಿಸತಕ್ಕದ್ದು. ಯಾವುದೇ ಕಾರಣಕ್ಕೂ ಹುಂಡಿಗಳನ್ನು ಖರೀದಿಸಬಾರದಾಗಿ ತಿಳಿಸಿದೆ.ಒಂದು ವೇಳೆ ಖರೀದಿಸಿ ಮಂಡಳಿಗೆ ಸಲ್ಲಿಸಿದರೆ ಅಂತಹ ಹುಂಡಿಗಳನ್ನು ತಿರಸ್ಕರಿಸಲಾಗುವುದು.**

## VII. ಪರೀಕ್ಷಾ ಶುಲ್ಕ ಪಾವತಿಸುವ ಸ್ವರೂಪ:

**ಪರೀಕ್ಷಾ ಶುಲ್ಕ ಮತ್ತು ಅಂಕಪಟ್ಟಿಯ ಲ್ಯಾಮಿನೇಷನ್ ಶುಲ್ಕವನ್ನು NEFTಚಲನ್ ಮೂಲಕ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಸಬೇಕು**. ಪಾವತಿಸುವ ಚಲನ್‌ನಲ್ಲಿ ಎರಡು ಭಾಗಗಳು ಇರುತ್ತದೆ. ಚಲನ್‌ನಲ್ಲಿಯೇ ಪಾವತಿಸಬಹುದಾದ ಎಲ್ಲಾ ವಿವರಗಳು ಮುದ್ರಣವಾಗಿರುತ್ತದೆ. ಪರೀಕ್ಷಾ ಶುಲ್ಕ ಪಾವತಿಸುವ ಉದ್ದೇಶದ ಕೋಡ್ ಸಂಖ್ಯೆ:ಎಸ್–13(S-13) ಎಂಬುದಾಗಿರುತ್ತದೆ. ಶುಲ್ಕ ಪಾವತಿಸುವ ವಿಧಾನವನ್ನು ಸಹ ಚಲನ್‌ನಲ್ಲಿಯೇ ಉದಾಹರಣೆಯೊಂದಿಗೆ ವಿವರಿಸಿದ್ದು ಪ್ರತಿ ಲಗತ್ತಿಸಿದೆ. ಇದರಂತೆ ಪ್ರತಿ ಶಾಲೆಯ ಮುಖ್ಯಶಿಕ್ಷಕರು ನಿಮ್ಮ ಶಾಲಾ ಸಂಕೇತದೊಂದಿಗೆ ಪಾವತಿಸುವ ಉದ್ದೇಶದ ಕೋಡ್‌ನ್ನು ನಮೂದಿಸಿ ಭರ್ತಿ ಮಾಡಬೇಕಾಗುತ್ತದೆ. ಭರ್ತಿ ಮಾಡಿದ ಚಲನ್ ಒಂದನ್ನು ಬ್ಯಾಂಕ್‌ನವರು ಇಟ್ಟುಕೊಂಡು ನೀಡುವ ಮತ್ತೊಂದು ಭಾಗದ ಮೂಲ ಚಲನ್‌ನ್ನು ಮಂಡಳಿಗೆ ಕಳುಹಿಸಬೇಕು. ಶುಲ್ಕ ಪಾವತಿಸಿದ ಬಗ್ಗೆ ಚಲನ್‌ನಲ್ಲಿ ಬ್ಯಾಂಕಿನ ಮೊಹರು ಮತ್ತು ಟಿ.ಎಸ್.ಎಲ್. ಅಥವಾ ಯು.ಟಿ.ಆರ್.(TSL or UTR) ಸಂಖ್ಯೆ ಇರುವುದನ್ನು ಖಾತ್ರಿ ಪಡಿಸಿಕೊಳ್ಳುವುದು. ಶಾಲಾ ದಾಖಲಾತಿಗಾಗಿ ಜೆರಾಕ್ಸ್ ಪ್ರತಿಯನ್ನು ಮಾಡಿಸಿಕೊಂಡು ಸಂರಕ್ಷಿಸಕೊಳ್ಳತಕ್ಕದ್ದು.

**VIII. ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬರುವ ವಿದ್ಯಾರ್ಥಿಗಳ ನೋಂದಣಿ:**

1. ಕೇಂದ್ರ ಪಠ್ಯಕ್ರಮ ಸಿ.ಬಿ.ಎಸ್.ಇ., ಐಸಿಎಸ್ಇ ಹಾಗೂ ಹೊರ ರಾಜ್ಯ ಪಠ್ಯಕ್ರಮಗಳಿಂದ ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬರುವ ವಿದ್ಯಾರ್ಥಿಗಳು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರಿಗೆ ರೂ.1,000+ರೂ.10=ಒಟ್ಟು ರೂ.**1010/-**ಗಳ ನೋಂದಣಿ ಶುಲ್ಕ ಸಲ್ಲಿಸಿ ರಾಜ್ಯ ಪಠ್ಯಕ್ರಮಕ್ಕೆ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ರಾಜ್ಯ ಪಠ್ಯಕ್ರಮದಲ್ಲಿ ಅಭ್ಯಾಸ ಮಾಡಲು ಜಿಲ್ಲಾ ಉಪನಿರ್ದೇಶಕರ ಪೂರ್ವಾನುಮತಿ ಪಡೆಯುವುದು ಕಡ್ಡಾಯ. ಈ ಆದೇಶದ ಪ್ರತಿಯನ್ನು ನಾಮಿನಲ್ ರೋಲ್‌ನೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು. ವಲಸೆ ಬಂದ ವಿದ್ಯಾರ್ಥಿಗಳ ಮಾಹಿತಿಯನ್ನು ಸಲ್ಲಿಸುವುದು.

**ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬಂದ ವಿದ್ಯಾರ್ಥಿಗಳು ಮತ್ತು ಖಾಸಗಿ ವಿದ್ಯಾರ್ಥಿಗಳ ನೋಂದಣಿ ಶುಲ್ಕಗಳನ್ನು ಬ್ಯಾಂಕ್ NEFT ಚಲನ್ ಮೂಲಕ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಪಾವತಿಸುವಂತೆ ಜಿಲ್ಲಾ ಉಪನಿರ್ದೇಶಕರುಗಳು ಕ್ರಮವಹಿಸಬೇಕು.**

**NEFT ಚಲನ್ ಮುಖೇನ ಪಾವತಿ ಮಾಡುವ ವಿವರ :**

| ಕ್ರಮಸಂಖ್ಯೆ | ವಿವರಗಳು | ಉದ್ದೇಶಿತ ಕೋಡ್ |
|---|---|---|
| 1 | ಖಾಸಗಿ ವಿದ್ಯಾರ್ಥಿಗಳ ನೋಂದಣಿ ಶುಲ್ಕ | S-14 |
| 2 | ರಾಜ್ಯ ಪಠ್ಯಕ್ರಮ ಬದಲಾವಣೆಯ ನೋಂದಣಿ ಶುಲ್ಕ | S-15 |

ಶಾಲಾ ಸಂಕೇತದೊಂದಿಗೆ ಉದ್ದೇಶದ ಕೋಡ್ ಬಳಸಿ **NEFT ಚಲನ್** ಭರ್ತಿ ಮಾಡಿ ರಾಷ್ಟ್ರೀಕೃತ ಬ್ಯಾಂಕೊಂದರಲ್ಲಿ ಪಾವತಿಸಬೇಕು. ನೋಂದಣಿ ಶುಲ್ಕ ಪಾವತಿಸಿದ ಬಗ್ಗೆ ಚಲನ್‌ನಲ್ಲಿ ಬ್ಯಾಂಕಿನ ಮೊಹರು ಮತ್ತು ಟಿ.ಎಸ್.ಎಲ್. ಅಥವಾ ಯು.ಟಿ.ಆರ್.(TSL or UTR) ಸಂಖ್ಯೆ ಇರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.

ಪಾವತಿಸಿದ ಮೂಲ ಚಲನ್ ಪ್ರತಿಗಳನ್ನು ಲಗತ್ತಿಸಿ, ಪೂರ್ಣ ವಿವರಗಳೊಂದಿಗೆ ಕ್ರೋಢೀಕೃತ ವರದಿಯನ್ನು ಮಂಡಳಿಗೆ ದಿನಾಂಕ:31.08.2016 ರೊಳಗಾಗಿ ಸಲ್ಲಿಸಬೇಕು.

**2. NEFT ಚಲನ್ ಹಾಗೂ ಅರ್ಜಿಗಳನ್ನು ಸಲ್ಲಿಸಲು ನಿಗಧಿಗೊಳಿಸಿರುವ ದಿನಾಂಕಗಳ ವಿವರ.**

1. ಪರೀಕ್ಷಾರ್ಥಿಗಳಿಂದ ಪರೀಕ್ಷಾ ಶುಲ್ಕ ಸ್ವೀಕರಿಸಲು ಕೊನೆಯ ದಿನಾಂಕ: **25.08.2016**
2. ಪರೀಕ್ಷಾ ಶುಲ್ಕ ಬ್ಯಾಂಕಿಗೆ ಜಮಾ ಮಾಡಲು ಕೊನೆಯ ದಿನಾಂಕ: **29.08.2016**
3. ನಾಮಿನಲ್ ರೋಲ್ ಹಾಗೂ ಬ್ಯಾಂಕ್ ಚಲನ್‌ನ ಮೂಲ ಪ್ರತಿ ಮಂಡಳಿಗೆ ತಲುಪಿಸಲು ಕೊನೆಯ ದಿನಾಂಕ: **31.08.2016**
4. ಓ.ಎಂ.ಆರ್. ಫಾರಂಗಳನ್ನು ಶಾಲೆಗಳಿಗೆ ಮಂಡಳಿಯು ರವಾನಿಸಲು ನಿಗದಿಪಡಿಸಿದ ದಿನಾಂಕ: **15.09.2016**

**ನಿಗದಿತ ದಿನಾಂಕಕ್ಕೆ ಶುಲ್ಕ ಸಲ್ಲಿಸದೇ ಇರುವ ಶಾಲೆಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

5. ಭರ್ತಿಮಾಡಿದ ಓ.ಎಂ.ಆರ್. ಫಾರಂಗಳನ್ನು ಪರೀಕ್ಷಾ ಮಂಡಳಿಯ **ಕೇಂದ್ರ ಕಛೇರಿಗೆ** ಸಲ್ಲಿಸಲು ನಿಗದಿಪಡಿಸಿದ ಕಡೆಯ ದಿನಾಂಕ: **26.09.2016**

**XI.ಪರೀಕ್ಷಾ ಅರ್ಜಿಗಳ ಸಂಕೇತ ಮತ್ತು ನಮೂನೆಗಳ ವರ್ಗೀಕರಣ;-**

| ಕ್ರಮ ಸಂ. | ವಿದ್ಯಾರ್ಥಿಗಳ ವರ್ಗೀಕರಣ | ಸಂಕೇತ | ಅರ್ಜಿ ನಮೂನೆಯ ಸ್ವರೂಪ | ಷರಾ |
|---|---|---|---|---|
| 1 | ಶಾಲಾ ಅಭ್ಯರ್ಥಿಗಳು | ಸಿ.ಸಿ.ಇ. - ಆರ್.ಎಫ್<br>CCE-R.F | ಓ.ಎಂ.ಆರ್ | ಅನುಬಂಧ 1ರಲ್ಲಿ ಭರ್ತಿ ಮಾಡುವುದು |
| 2 | ಖಾಸಗಿ ಅಭ್ಯರ್ಥಿಗಳು | ಸಿ.ಸಿ.ಇ. - ಪಿ.ಎಫ್<br>CCE -P.F | ಓ.ಎಂ.ಆರ್ ಪಿ.ಎಫ್ | ಅನುಬಂಧ 2ರಲ್ಲಿ ಭರ್ತಿ ಮಾಡುವುದು |
| 3 | ಪುನರಾವರ್ತಿತ ಅಭ್ಯರ್ಥಿಗಳು | ಸಿ.ಸಿ.ಇ. - ಆರ್.ಆರ್<br>CCE-R.R | ಎಂ.ಎಸ್.ಎ | ಅನುಬಂಧ-3ರಲ್ಲಿ ಭರ್ತಿ ಮಾಡುವುದು |
| | | ಆರ್.ಆರ್<br>R.R | ಎಂ.ಎಸ್.ಎ | ಅನುಬಂಧ-4ರಲ್ಲಿ ಭರ್ತಿ ಮಾಡುವುದು |

| | | | | |
|---|---|---|---|---|
| 4 | ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳು | ಸಿ.ಸಿ.ಇ. – ಪಿ.ಆರ್ CCE-P.R | ಎಂ.ಎಸ್.ಎ | ಅನುಬಂಧ 5ರಲ್ಲಿ ಭರ್ತಿ ಮಾಡುವುದು |
| | | ಪಿ.ಆರ್. -P.R | ಎಂ.ಎಸ್.ಎ | ಅನುಬಂಧ–6ರಲ್ಲಿ ಭರ್ತಿ ಮಾಡುವುದು |
| 5 | ವಲಸೆ ಬಂದ ವಿದ್ಯಾರ್ಥಿಗಳ ಮಾಹಿತಿ | -- | -- | ಅನುಬಂಧ–7ರಲ್ಲಿ ಭರ್ತಿ ಮಾಡುವುದು. |
| 6 | ಖಾಸಗಿ ಅಭ್ಯರ್ಥಿಗಳ ನೋಂದಣಿ ಮಾಹಿತಿ | -- | -- | ಅನುಬಂಧ–8ರಲ್ಲಿ ಭರ್ತಿ ಮಾಡುವುದು. |
| 7 | ಶುಲ್ಕದ ವಿವರಗಳು | -- | -- | ಅನುಬಂಧ–9ರಲ್ಲಿ ಭರ್ತಿ ಮಾಡುವುದು. |
| 8 | ಬಿ.ಇ.ಓ. ರವರ ದೃಢೀಕರಣ ಪತ್ರ | -- | -- | ಅನುಬಂಧ–10ರಲ್ಲಿ ಭರ್ತಿ ಮಾಡುವುದು. |

ಮುಖ್ಯಶಿಕ್ಷಕರು ಮೇಲೆ ನಮೂದಿಸಿರುವ ನಮೂನೆಗಳಲ್ಲೇ ತಪ್ಪಿಲ್ಲದಂತೆ ವಿವರಗಳನ್ನು ಭರ್ತಿ ಮಾಡಬೇಕು.

**X. ಶಾಲಾ ಸಂಕೇತ:** ಶಾಲಾ ಮುಖ್ಯಸ್ಥರು ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಮಂಡಳಿಗೆ ಸಲ್ಲಿಸುವ ಮುನ್ನ ಮಂಡಳಿಯಿಂದ ಶಾಲಾ ಸಂಕೇತ ಪಡೆಯುವುದು ಕಡ್ಡಾಯ. ಶಾಲಾ ಸಂಕೇತವಿಲ್ಲದೆ ಅರ್ಜಿಗಳನ್ನು ಸಲ್ಲಿಸತಕ್ಕದ್ದಲ್ಲ.

1. ಕೆಲವು ಶಾಲೆಗಳಲ್ಲಿ 10ನೇ ತರಗತಿ ಪ್ರಾರಂಭವಾಗಿ ಸುಮಾರು 5 ರಿಂದ 6 ವರ್ಷಗಳಾದರೂ ಮಾನ್ಯತೆ ಪಡೆಯದೇ ಪರೀಕ್ಷಾ ಮಂಡಳಿಯಿಂದ ಶಾಲಾ ಸಂಕೇತ ಪಡೆಯದೆ ಅರ್ಜಿಗಳನ್ನು ಸಲ್ಲಿಸುತ್ತಿರುವುದು ಮಂಡಳಿ ಗಮನಿಸಿದೆ.
2. ಪರೀಕ್ಷಾ ಮಂಡಳಿಯ ಪೂರ್ವಾನುಮತಿ ಪಡೆಯದೇ ಕೆಲವು ಶಾಲೆಗಳು ಇತರೆ ಶಾಲೆಗಳ ವಿದ್ಯಾರ್ಥಿಗಳ ಅರ್ಜಿಗಳನ್ನೂ ಸಹ ಸಲ್ಲಿಸುತ್ತಿರುವುದನ್ನು ಗಮನಿಸಲಾಗಿದೆ. ಈ ರೀತಿಯ ಪ್ರಸ್ತಾವನೆಗಳನ್ನು ಸಲ್ಲಿಸಬಾರದೆಂದು ಸ್ಪಷ್ಟಪಡಿಸಿದೆ. ಇದು ಪುನರಾವರ್ತನೆಯಾದಲ್ಲಿ ಶಾಲಾ/ ಕಾಲೇಜುಗಳ ಮುಖ್ಯಸ್ಥರ ಮೇಲೆ ಶಿಸ್ತು ಕ್ರಮದ ಪ್ರಕ್ರಿಯೆ ಪ್ರಾರಂಭಿಸಲಾಗುವುದು. ಆದ್ದರಿಂದ ಶಾಲಾ ಸಂಕೇತವನ್ನು ಕಡ್ಡಾಯವಾಗಿ ಪಡೆದು ಅರ್ಜಿಗಳನ್ನು ಆ ಶಾಲೆಯ ಮೂಲಕವೇ ಸಲ್ಲಿಸಲು ಸ್ಪಷ್ಟಪಡಿಸಿದೆ.ಇದಕ್ಕೆ ಯಾವುದೇ ರಿಯಾಯಿತಿ ಇರುವುದಿಲ್ಲ.
3. ಶಾಲಾ ಸಂಕೇತ ಪಡೆಯದ ಸಂಸ್ಥೆಯನ್ನು ಪರೀಕ್ಷಾ ಮಂಡಳಿ ಮಾನ್ಯ ಮಾಡುವುದಿಲ್ಲ. ಈ ಶಾಲೆಗಳು ಮಾನ್ಯತೆ ಪಡೆಯದೇ ಇದ್ದಲ್ಲಿ ಹಾಗೂ ನಂತರ ಮಂಡಳಿಯಿಂದ ಶಾಲಾ ಸಂಕೇತ ಸಂಖ್ಯೆಯನ್ನು ಪಡೆಯದಿದ್ದಲ್ಲಿ, ಇಂತಹ ಶಾಲೆಗಳಿಂದ ಬರುವ ವಿದ್ಯಾರ್ಥಿಗಳನ್ನು ಖಾಸಗಿ ಅಭ್ಯರ್ಥಿಗಳೆಂದು ಪರಿಗಣಿಸಲಾಗುವುದು ಖಾಸಗಿ ವಿದ್ಯಾರ್ಥಿಗಳಿಗೆ ಪರೀಕ್ಷೆಗೆ ಕುಳಿತುಕೊಳ್ಳಲು ಅನುಸರಿಸಬೇಕಾದ ಕ್ರಮಗಳನ್ನು ಪಾಲಿಸಬೇಕಾಗುತ್ತದೆ.
4. 2015–16ನೇ ಸಾಲಿನ ಶೈಕ್ಷಣಿಕ ವರ್ಷದಿಂದ 10ನೇ ತರಗತಿಗೆ ಬರುವ ಹೊಸ ಪ್ರೌಢ ಶಾಲೆಗಳಿಗೆ ಹೊಸದಾಗಿ ಮಂಡಳಿಯಿಂದ ಶಾಲಾ ಸಂಕೇತ ಪಡೆಯುವಲ್ಲಿ ಕೆಳಕಂಡಂತೆ ದರ ಪಾವತಿಸಬೇಕಾಗುತ್ತದೆ.

- ಸರ್ಕಾರಿ ಪ್ರೌಢ ಶಾಲೆ ಹಾಗೂ ಪದವಿ ಪೂರ್ವ ಕಾಲೇಜು(ಪ್ರೌಢಶಾಲಾ ವಿಭಾಗ)ಗಳಿಗೆ ರೂ.5,000/–(ಐದು ಸಾವಿರ ರೂಪಾಯಿಗಳು ಮಾತ್ರ).
- ರಾಜ್ಯ ಸರ್ಕಾರದಿಂದ ಅಧಿಕೃತವಾಗಿ ಅನುಮತಿ ಮತ್ತು ಮಾನ್ಯತೆ ಪಡೆದ ಖಾಸಗಿ ಪ್ರೌಢ ಶಾಲಾ ಕಾಲೇಜುಗಳಿಗೆ ರೂ.10,000/–(ಹತ್ತು ಸಾವಿರ ರೂಪಾಯಿಗಳು ಮಾತ್ರ)
- ಶಾಲೆಯನ್ನು ಪ್ರಸ್ತುತ ಇರುವ ವಿಳಾಸದಿಂದ ತಾಲ್ಲೂಕಿನೊಳಗೆ/ ಜಿಲ್ಲೆಯೊಳಗೆ/ ಅಂತರ ಜಿಲ್ಲೆಯೊಳಗೆ ಸ್ಥಳಾಂತರಿಸಿದ ಸಂದರ್ಭದಲ್ಲಿ, ಸದರಿ ಶಾಲೆಯನ್ನು ಹೊಸ ಶಾಲೆ ಎಂದು ಪರಿಗಣಿಸಿ, ಅದೇ ಶಾಲಾ ಸಂಕೇತವನ್ನು ಮುಂದುವರೆಸುವುದಕ್ಕಾಗಲೀ ಅಥವಾ ಬೇರೆ ಶಾಲಾ ಸಂಕೇತವನ್ನು ನೀಡುವುದಕ್ಕಾಗಲೀ ಪ್ರಸ್ತಾವನೆಯೊಂದಿಗೆ ರೂ.10,000/– ಗಳನ್ನು ನೆಫ್ಟ್ ಚಲನ್ ಮೂಲಕ ಮಂಡಳಿಗೆ ಪಾವತಿಸಬೇಕಾಗುತ್ತದೆ.
- ಶಾಲಾ ಸಂಕೇತದ ದ್ವಿತೀಯ ಪ್ರತಿಯನ್ನು(SECOND COPY)ಪಡೆಯಲು ರೂ.2,000/–(ಎರಡು ಸಾವಿರ ಮಾತ್ರ) ಪಾವತಿಸಬೇಕಾಗುತ್ತದೆ.

- ನಿಗದಿಪಡಿಸಿರುವ ಶುಲ್ಕಗಳನ್ನು ನೆಫ್ಟ್ ಚಲನ್ ಮುಖೇನ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿಸಿರಬೇಕು.
- ದಿನಾಂಕ:20.08.2016 ರೊಳಗಾಗಿ ಶಾಲಾ ಸಂಕೇತ ಪಡೆಯುವುದು ಕಡ್ಡಾಯ.

**XI. ವಿಭಿನ್ನ ಸಾಮರ್ಥ್ಯವುಳ್ಳ(Differently Abled) ಮಕ್ಕಳಿಗೆ ನೀಡುವ ಸೌಲಭ್ಯಗಳು ಮತ್ತು ವಿನಾಯಿತಿ:**

1. ಭಾರತ ಸರ್ಕಾರದ Ministry of Social Justice and Empowerment Department of Disability Affairs ಸಂಸ್ಥೆಯ ಪತ್ರ ಸಂಖ್ಯೆ:F.No.16-110/2003-DDIII ದಿನಾಂಕ:26.02.2013 ಹಾಗೂ ಕರ್ನಾಟಕ ಸರ್ಕಾರ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಸುತ್ತೋಲೆ ಸಂಖ್ಯೆ:ವಿಹಿನಾಸಿಇ/ ಅಧಿನಿಯಮ/07/2012–13, ದಿನಾಂಕ:20.05.2013 ರನ್ವಯ ಕೆಳಕಂಡ ಸೌಲಭ್ಯಗಳನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಿದೆ.
2. ಸರ್ಕಾರದ ಆದೇಶದ ಸಂಖ್ಯೆ:ಮಮಅ.65.ಪಿಹೆಚ್‌ಪಿ.2000, ಬೆಂಗಳೂರು ದಿನಾಂಕ:10.03.2000 ರನ್ವಯ, ಅಧಿಕೃತ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಸ್ಪಾಸ್ಟಿಕ್/ ಕಿವುಡು/ ಮೂಗ ಮತ್ತು ಕಲಿಕಾ ನ್ಯೂನತೆ ಹಾಗೂ ಬುದ್ಧಿಮಾಂದ್ಯ ವಿದ್ಯಾರ್ಥಿಗಳು ಶಿಕ್ಷಣ ಮಾಧ್ಯಮದ ಭಾಷೆಯ ಒಂದನ್ನು ಮಾತ್ರ ತೆಗೆದುಕೊಳ್ಳಬಹುದು. ಉಳಿದ ಎರಡು ಭಾಷಾ ವಿಷಯಗಳಿಗೆ ವಿನಾಯಿತಿ ಇರುತ್ತದೆ. ಈ ಬಗ್ಗೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರಿಂದ ಅನುಮತಿ ಪಡೆದುಕೊಳ್ಳುವುದು. ನೇರವಾಗಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಬಾರದು ಈ ವಿಷಯದಲ್ಲಿ ಅಂತಹ ವಿದ್ಯಾರ್ಥಿಯ, ಪೋಷಕರಿಗೆ ಅನವಶ್ಯಕ ತೊಂದರೆ ನೀಡಬಾರದಾಗಿ ತಿಳಿಸಿದೆ.
3. ಭಾಷಾ ವಿನಾಯಿತಿಗಳ ಪ್ರಸ್ತಾವನೆಗಳನ್ನು ಜಿಲ್ಲಾ ಉಪನಿರ್ದೇಶಕರು ಕೂಲಂಕುಷವಾಗಿ ಪರಿಶೀಲಿಸಿ ವಿನಾಯಿತಿ ನೀಡುವ ಭಾಷಾ ವಿಷಯ ಮತ್ತು ವಿಷಯ ಸಂಕೇತಗಳನ್ನು ವಿವರಿಸಿರಬೇಕು. ವಿಕಲಚೇತನ(Physicaly challenged) ಮತ್ತು ಅಂಧ ವಿದ್ಯಾರ್ಥಿಗಳಿಗೆ ಭಾಷಾ ವಿನಾಯಿತಿ ನೀಡಲು ಅವಕಾಶವಿರುವುದಿಲ್ಲ. ಇದನ್ನು ಹೊರತುಪಡಿಸಿ ಉಳಿದಂತೆ ನೀಡುವ ಸೌಲಭ್ಯಗಳನ್ನು ವಿವರಿಸಿದ್ದು, ಅದರಂತೆ ಕ್ರಮವಹಿಸುವುದು.
4. ವಿಕಲ ಚೇತನ ಮಕ್ಕಳು ಬರಹಗಾರರ/ ಓದುಗಾರರ/ ಪ್ರಯೋಗ ಶಾಲಾ ಸಹಾಯಕರ ಸೌಲಭ್ಯ ಪಡೆಯಲು ಅವಕಾಶವಿರುತ್ತದೆ. ಬರಹಗಾರರ/ ಓದುಗಾರರ/ ಪ್ರಯೋಗ ಶಾಲಾ ಸಹಾಯಕರನ್ನು ಆಯ್ಕೆ ಮಾಡಿಕೊಳ್ಳುವುದು ವಿದ್ಯಾರ್ಥಿಗಳ ವಿವೇಚನೆಗೆ ಬಿಟ್ಟಿದ್ದು, ಅವರಿಗೆ ಯಾವುದೇ ವಿದ್ಯಾರ್ಹತೆ ಮತ್ತು ವಯೋಮಿತಿಯನ್ನು ನಿಗದಿಪಡಿಸುವಂತಿಲ್ಲ. ಬರಹಗಾರರ/ ಓದುಗಾರರ/ ಪ್ರಯೋಗ ಶಾಲಾ ಸಹಾಯಕರನ್ನು ಮಧ್ಯದಲ್ಲಿ ಬದಲಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.
5. ವಿಕಲಚೇತನ ಮಕ್ಕಳಿಗೆ 3–00 ಗಂಟೆ ಅವಧಿಯ ಪರೀಕ್ಷೆಗೆ 1–00 ಗಂಟೆ "ಪರಿಹಾರ ಅವಧಿ"(Compensatory time) ಎಂಬುದಾಗಿ ಪರಿಗಣಿಸುವುದು. ಸದರಿ ಅಭ್ಯರ್ಥಿಗಳಿಗೆ ಸೂಕ್ತ ಆಸನ ವ್ಯವಸ್ಥೆಯನ್ನು ನೆಲಮಹಡಿಯಲ್ಲಿರುವಂತೆ ಮಾಡುವುದು.
6. ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ.142.ಯೋಯೋಕ.2009, ದಿನಾಂಕ:16.07.2009 ರನ್ವಯ ಕಲಿಕಾ ನ್ಯೂನತೆ ಹೊಂದಿರುವ ವಿದ್ಯಾರ್ಥಿಗಳು ನಿಮ್ಹಾನ್ಸ್/ ಅಖಿಲ ಭಾರತ ದೃಕ್–ಶ್ರವಣ ಸಂಸ್ಥೆ ಮೈಸೂರು/ ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯಾವುದೇ ಮನ:ಶಾಸ್ತ್ರಜ್ಞರು/ ಕನಿಷ್ಠ ಎಂ.ಫಿಲ್. ವಿದ್ಯಾರ್ಹತೆ ಹೊಂದಿರುವ ಕ್ಲಿನಿಕಲ್ ಮನ:ಶಾಸ್ತ್ರಜ್ಞರು ನೀಡಿರುವ ಪ್ರಮಾಣ ಪತ್ರಕ್ಕೆ ಜಿಲ್ಲಾ ಸರ್ಜನ್ ಶ್ರೇಣಿಗಿಂತಲೂ ಕಡಿಮೆ ಇಲ್ಲದ ಸರ್ಕಾರಿ ವೈದ್ಯರಿಂದ ದೃಢೀಕರಣ ಅಥವಾ ಮಲ್ಲೇಶ್ವರಂ ಡಿಸ್ ಲೆಕ್ಸಿಯಾ ಅಸೋಷಿಯೇಷನ್(ರಿ), ಬೆಂಗಳೂರು ಅಥವಾ ಭಾರತ ದೇಶದ ಯಾವುದೇ ಭಾಗದಿಂದ ಅಧೀಕೃತ ಜಿಲ್ಲಾ ಸರ್ಜನ್‌ಗಿಂತಲೂ ಕಡಿಮೆ ಇಲ್ಲದ ವೈದ್ಯರಿಂದ ಪಡೆದ ಪ್ರಮಾಣ ಪತ್ರದ ಪ್ರತಿಯನ್ನು ಓ.ಎಂ.ಆರ್. ನೊಂದಿಗೆ ಸಲ್ಲಿಸುವುದು ಕಡ್ಡಾಯ. ತದನಂತರ ವಿನಾಯಿತಿ ಕೋರಿ ಬರುವ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ. ಈ ಬಗ್ಗೆ ವಿನಾಯಿತಿ ಪಡೆದುಕೊಳ್ಳಲು ಮುಖ್ಯಶಿಕ್ಷಕರು ಪೂರ್ವಭಾವಿ ಕ್ರಮವಹಿಸಿ ಅಂತಹ ವಿದ್ಯಾರ್ಥಿಗಳಿಗೆ ಸದರಿ ಸೌಲಭ್ಯ ಒದಗಿಸುವುದು ಮುಖ್ಯಶಿಕ್ಷಕರ ಆದ್ಯ ಕರ್ತವ್ಯವಾಗಿರುತ್ತದೆ.
7. ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ.142.ಯೋಯೋಕಾ.2008, ದಿ:21.02.2009ರ ಅನ್ವಯ, ರಾಜ್ಯದಲ್ಲಿ ಮಾನ್ಯತೆ ಪಡೆದ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕಲಿಕಾ ನ್ಯೂನತೆ ಹೊಂದಿರುವ ಮಕ್ಕಳಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಈ ಕೆಳಕಂಡ ಸೌಲಭ್ಯವನ್ನು ಒದಗಿಸಲಾಗಿದೆ.
    1. ಪರೀಕ್ಷಾ ಸಂದರ್ಭದಲ್ಲಿ ಸರಳ ಕ್ಯಾಲುಕ್ಯಲೇಟರ್ ಉಪಯೋಗಿಸಲು ಅನುಮತಿಸಲಾಗಿದೆ.
    2. ಈ ಮಕ್ಕಳಿಗೆ ಪ್ರಶ್ನೆಗಳನ್ನು ಓದಲು ಪೋಷಕರ ವೆಚ್ಚದಲ್ಲಿ ಸಹಾಯಕರನ್ನು ಪಡೆಯಲು ಅನುಮತಿಸಿದೆ.

**ವಿಭಿನ್ನ ಸಾಮರ್ಥ್ಯವುಳ್ಳ (Differently Abled) ಮಕ್ಕಳಿಗೆ ನೀಡಬಹುದಾದ ವಿಶೇಷ ಸೌಲಭ್ಯದ ವಿವರಗಳನ್ನು ಕೆಳಕಂಡಂತೆ ವಿವರಿಸಲಾಗಿದೆ:-**

| ನ್ಯೂನ್ಯತೆ | ಸೌಲಭ್ಯಗಳು/ವಿನಾಯಿತಿಗಳು |
|---|---|
| ಕಿವುಡ ಮತ್ತು ಮೂಗ | ಶಿಕ್ಷಣ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು. ಉಳಿದ ಎರಡು ಭಾಷೆಗಳಿಗೆ ವಿನಾಯಿತಿಯಿರುತ್ತದೆ.<br>ಹೆಚ್ಚುವರಿ ಸಮಯ ನೀಡುವ ಸೌಲಭ್ಯವಿರುತ್ತದೆ. |
| ಕಲಿಕಾ ನ್ಯೂನ್ಯತೆ / ಡಿಸ್‌ಲೆಕ್ಸಿಯಾ(Dyslexia)<br>Specific learning disability | ಶಿಕ್ಷಣ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು. ಉಳಿದ ಎರಡು ಭಾಷೆಗಳಿಗೆವಿನಾಯಿತಿ ಇರುತ್ತದೆ<br>ಗಣಿತ ಹಾಗೂ ವಿಜ್ಞಾನ ವಿಷಯಗಳ ಬದಲು ಭಾರತೀಯ ಸಮಾಜಶಾಸ್ತ್ರ-91/95, ಭಾರತೀಯ ಅರ್ಥಶಾಸ್ತ್ರ-92/96, ಭಾರತೀಯ ರಾಜ್ಯಶಾಸ್ತ್ರ ಮತ್ತು ಪೌರನೀತಿ-93/97, ಕರ್ನಾಟಕಸಂಗೀತ ಅಥವಾ ಹಿಂದೂಸ್ತಾನಿಸಂಗೀತ-94/98 ವಿಷಯಗಳಲ್ಲಿ ಯಾವುದಾದರೂ ಎರಡು ವಿಷಯಗಳನ್ನು ಸಮಾಜವಿಜ್ಞಾನದ ಜೊತೆಗೆ ಆಯ್ಕೆಮಾಡಿಕೊಳ್ಳಬಹುದು.<br>ಪ್ರಶ್ನೆಗಳನ್ನು ಓದಲು ಪೋಷಕರ ವೆಚ್ಚದಲ್ಲಿಯೇ ಸಹಾಯಕರನ್ನು ಪಡೆದುಕೊಳ್ಳಲು ಅವಕಾಶವಿರುವುದು.<br>ಇಂತಹ ಮಕ್ಕಳು ಮಾಡುವ ಸಣ್ಣಪುಟ್ಟ ದೋಷಗಳನ್ನು ಮೌಲ್ಯಮಾಪನದಲ್ಲಿ ಪರಿಗಣಿಸುವುದಿಲ್ಲ<br>ಪರೀಕ್ಷಾ ಸಂದರ್ಭದಲ್ಲಿ ಸರಳ ಕ್ಯಾಲುಕ್ಯುಲೇಟರ್ ಉಪಯೋಗಿಸಲು ಅನುಮತಿಸಲಾಗಿದೆ.<br>ಹೆಚ್ಚುವರಿ ಸಮಯ ನೀಡುವ ಸೌಲಭ್ಯವಿರುತ್ತದೆ |
| ಬುದ್ಧಿಮಾಂದ್ಯ | ಶಿಕ್ಷಣ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು. ಉಳಿದ ಎರಡು ಭಾಷೆಗಳಿಗೆ ವಿನಾಯಿತಿಯಿರುತ್ತದೆ.<br>ಹೆಚ್ಚುವರಿ ಸಮಯ ನೀಡುವ ಸೌಲಭ್ಯವಿರುತ್ತದೆ. |
| ಅಂಧ ವಿದ್ಯಾರ್ಥಿಗಳು/ ದೃಷ್ಟಿಮಾಂದ್ಯ ವಿದ್ಯಾರ್ಥಿ/ ಕ್ಷೀಣ ದೃಷ್ಟಿ (Low vision) | ಗಣಿತ ಹಾಗೂ ವಿಜ್ಞಾನ ವಿಷಯಗಳ ಬದಲು ಭಾರತೀಯ ಸಮಾಜಶಾಸ್ತ್ರ-91/95, ಭಾರತೀಯ ಅರ್ಥಶಾಸ್ತ್ರ-92/96, ಭಾರತೀಯ ರಾಜ್ಯಶಾಸ್ತ್ರ ಮತ್ತು ಪೌರನೀತಿ-93/97, ಕರ್ನಾಟಕಸಂಗೀತ ಅಥವಾ ಹಿಂದೂಸ್ತಾನಿಸಂಗೀತ-94/98 ವಿಷಯಗಳಲ್ಲಿ ಯಾವುದಾದರೂ ಎರಡು ವಿಷಯಗಳನ್ನು ಸಮಾಜವಿಜ್ಞಾನದ ಜೊತೆಗೆ ಆಯ್ಕೆಮಾಡಿಕೊಳ್ಳಬಹುದು.ಬರಹಗಾರರ ಸೌಲಭ್ಯ ನೀಡಲಾಗುವುದು<br>ಹೆಚ್ಚುವರಿ ಸಮಯ ನೀಡುವ ಸೌಲಭ್ಯವಿರುತ್ತದೆ. |
| ಮೆದುಳಿನ ಪಾರ್ಶ್ವವಾಯು, ಬಲತೋಳಿನ ಮತ್ತು ಬಲಗೈನ ಕೆಳತುದಿಯು ಸರಿಯಾಗಿ ಬೆಳವಣಿಗೆಯನ್ನು ಹೊಂದದೆ ಇರುವುದು,ಬಲಗೈ ಇದ್ದ ವ್ಯಕ್ತಿಯು ದಿನನಿತ್ಯದ ಕಾರ್ಯಗಳಿಗೆ ಬಲಗೈಯನ್ನೇ ಬಳಸುತ್ತಿದ್ದು ಎಡಗೈಯಲ್ಲಿ ಬರೆಯುವುದರಿಂದ ಬರವಣಿಗೆ ನಿಧಾನವಾಗುತ್ತದೆ | **ಹೆಚ್ಚುವರಿ ಸಮಯ ನೀಡುವ ಸೌಲಭ್ಯ**<br>2.30 ಹಾಗೂ 3.00 ಗಂಟೆಗಳ ಅವಧಿಯ ಪ್ರಶ್ನೆ ಪತ್ರಿಕೆಗೆ ಒಂದು ಗಂಟೆ<br>2 ಗಂಟೆಗಳ ಅವಧಿಯ ಪ್ರಶ್ನೆ ಪತ್ರಿಕೆಗೆ 45 ನಿಮಿಷಗಳು<br>1 ಗಂಟೆಯ ಅವಧಿಯ ಪ್ರಶ್ನೆ ಪತ್ರಿಕೆಗೆ 30 ನಿಮಿಷಗಳು |

| | |
|---|---|
| ಎನ್ನುವವರಿಗೆ | |
| ಎಲ್ಲಾ ರೀತಿಯ ನ್ಯೂನ್ಯತೆ | ವಿದ್ಯಾರ್ಥಿಗಳು ಸುಗಮವಾಗಿ ಪರೀಕ್ಷೆ ಬರೆಯಲು ನೆಲಮಹಡಿಯಲ್ಲಿ ಸೂಕ್ತ ಆಸನ ವ್ಯವಸ್ಥೆ ಮಾಡುವುದು.<br>ಇಂತಹ ಮಕ್ಕಳನ್ನು ಗುರುತಿಸಲು ಪ್ರಶ್ನೋತ್ತರ ಪತ್ರಿಕೆಗಳಿಗೆ ಹಸಿರು ಸ್ಟಿಕ್ಕರ್ ಅಂಟಿಸುವುದು. |

*ಪರೀಕ್ಷಾ ಸಮಯದಲ್ಲಿ ಸೆರೆಬ್ರಲ್‌ಪಾಲ್ಸಿ, ಆಟಿಸಂ, ಪಾರ್ಶ್ವವಾಯು, ಕುಷ್ಠರೋಗ ಹಾಗೂ ವಿವಿಧ ಇತರೆ ನ್ಯೂನ್ಯತೆಯಿರುವ ವಿದ್ಯಾರ್ಥಿ ಸೌಲಭ್ಯ ಪಡೆಯಲು ಅಪೇಕ್ಷಿಸಿದರೆ ಸೂಕ್ತ ವೈದ್ಯಕೀಯ ದಾಖಲೆಗಳನ್ನು ಪರಿಶೀಲಿಸಿ, ನಿಯಮಾನುಸಾರ ಹೆಚ್ಚುವರಿ ಸಮಯ ಬರಹಗಾರರ, ಓದುಗಾರರ ಸೌಲಭ್ಯ ನೀಡುವ ಅಧಿಕಾರ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗಿರುತ್ತದೆ.*

- *2016–17ನೇ ಸಾಲಿನಿಂದ ಹತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಂಧ/ವಿಶೇಷ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಗಣಿತ ಮತ್ತು ವಿಜ್ಞಾನ ವಿಷಯದ ಬದಲಾಗಿ ವಿದ್ಯಾರ್ಥಿಗಳು ತೆಗೆದುಕೊಳ್ಳಬಹುದಾದ ಸಮಾಜಶಾಸ್ತ್ರ, ಅರ್ಥಶಾಸ್ತ್ರ ಹಾಗೂ ರಾಜ್ಯಶಾಸ್ತ್ರ ಪಠ್ಯಪುಸ್ತಕಗಳನ್ನು ಹೊಸ ಪಠ್ಯಕ್ರಮದಲ್ಲಿ ರಚಿಸಲಾಗಿದ್ದು, ಈ ಶೈಕ್ಷಣಿಕ ಸಾಲಿನಿಂದಲೇ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವುದರಿಂದ ಪ್ರಸ್ತುತ ಶೈಕ್ಷಣಿಕ ವರ್ಷದ 10ನೇ ತರಗತಿಯ ವಿದ್ಯಾರ್ಥಿಗಳಿಗೆ ಹೊಸ ಪಠ್ಯಕ್ರಮದಲ್ಲಿ ಬೋಧನೆ ಮಾಡಲು ಹಾಗೂ ಪಬ್ಲಿಕ್ ಪರೀಕ್ಷೆಗೆ ಹೊಸ ಪಠ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲು ಮುಖ್ಯಶಿಕ್ಷಕರು ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.*
- *ಅಂಧ/ವಿಶೇಷ ಸಾಮರ್ಥ್ಯವುಳ್ಳ ಪುನರಾವರ್ತಿತ ಅಭ್ಯರ್ಥಿಗಳು ಜೂನ್–2016 ಎಸ್.ಎಸ್.ಎಲ್.ಸಿ. ಪರೀಕ್ಷಾ ಅವಧಿಯವರೆಗೂ ಹಳೇ ಪಠ್ಯಕ್ರಮದಲ್ಲಿ ಅಭ್ಯಾಸ ಮಾಡಲು ಅವಕಾಶ ಕಲ್ಪಿಸಲಾಗಿದೆ.*

## <u>XII. ಭಾಷಾ ಸಂಯೋಜನೆ:</u>

1. ಅಭ್ಯರ್ಥಿಗಳು ತೆಗೆದುಕೊಳ್ಳಬೇಕಾದ ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆಗಳ ಸಂಯೋಜನೆ ಬಗ್ಗೆ ಪರಿಪೂರ್ಣ ವಿವರಣೆಗಳನ್ನು 1999–2000 ರಿಂದ ಜಾರಿಗೊಂಡ ಪರಿಷ್ಕೃತ ಪಠ್ಯವಸ್ತುವಿನಲ್ಲಿ ವಿವರಿಸಲಾಗಿದೆ. ಆ ಕೋಷ್ಟಕದಂತೆ ಭಾಷಾ ಸಂಯೋಜನೆಯನ್ನು ರಾಜ್ಯದ ಭಾಷಾ ನೀತಿಯಂತೆ ಕಡ್ಡಾಯವಾಗಿ ತೆಗೆದುಕೊಂಡಿರಬೇಕು. ಆಯ್ಕೆ ಮಾಡಿಕೊಂಡಿರುವ ಭಾಷಾ ಸಂಯೋಜನೆ ಶಾಲೆಯಲ್ಲಿ ಬೋಧಿಸುತ್ತಿರುವ ಪಠ್ಯಕ್ರಮಕ್ಕೆ ಪೂರಕವಾಗಿರಬೇಕು. ಇದಕ್ಕೆ ಯಾವುದೇ ವಿನಾಯಿತಿ ನೀಡುವ ಪ್ರಶ್ನೆ ಬರುವುದಿಲ್ಲ. **(ಭಾಷಾ ಸಂಯೋಜನೆ ವಿವರಗಳನ್ನು ಅನುಬಂಧ–ಅ ನಲ್ಲಿ ವಿವರಿಸಲಾಗಿದೆ.) ಈ ಭಾಷಾ ಸಂಯೋಜನೆಯನ್ನು ಮುಖ್ಯಶಿಕ್ಷಕರು ಮತ್ತು ಶಾಲಾ ಸಿಬ್ಬಂದಿ ಅತಿ ಎಚ್ಚರಿಕೆಯಿಂದ ಸಂಯೋಜನೆ ಮಾಡಿ ಓ.ಎಂ.ಆರ್. ನಲ್ಲಿ ಶೇಡ್ ಮಾಡುವುದು. ಈ ಭಾಷಾ ಸಂಯೋಜನೆಯನ್ನು ಓ.ಎಂ.ಆರ್. ನಲ್ಲಿ ನಿಯಮಬದ್ಧವಾಗಿ ಮಾಡದೇ ಇರುವ ಮುಖ್ಯಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರ ಮೇಲೆ ದಂಡ ವಿಧಿಸಲಾಗುವುದು.**
2. ಆಲ್ಟರ್‌ನೇಟ್ ಇಂಗ್ಲೀಷ್‌ಗೆ ಅನುಮತಿ ನೀಡುವ ಕ್ರಮವು 2009ರ ಎಸ್.ಎಸ್.ಎಲ್.ಸಿ. ಪರೀಕ್ಷೆಯಿಂದ ಅಂತ್ಯಗೊಂಡಿರುತ್ತದೆ ಹಾಗೂ ವಿಷಯ ಸಂಕೇತ 55E ವಿಷಯಕ್ಕೆ ಪರೀಕ್ಷೆ ತೆಗೆದುಕೊಳ್ಳಲು ಅನುಮತಿ ನೀಡಲಾಗುತ್ತಿಲ್ಲ. **ಒಂದು ವೇಳೆ ಯಾವುದೇ ವಿದ್ಯಾರ್ಥಿಯು 55E ವಿಷಯಕ್ಕೆ ಪರೀಕ್ಷೆ ತೆಗೆದುಕೊಳ್ಳಲು ಅರ್ಜಿ ನಮೂನೆಯಲ್ಲಿ ಭರ್ತಿ ಮಾಡಿದ್ದಲ್ಲಿ ಅದನ್ನು ರದ್ದುಗೊಳಿಸಿ ಭಾಷಾ ನೀತಿಯಂತೆ ಪ್ರವೇಶ ಪತ್ರ ನೀಡಲಾಗುವುದು ಹಾಗೂ ಸಂಬಂಧಿಸಿದ ಶಾಲಾ ಮುಖ್ಯಸ್ಥರ ಮೇಲೆ ಶಿಸ್ತು ಕ್ರಮ ಜರುಗಿಸಲಾಗುವುದು.**
3. ಏಪ್ರಿಲ್–2012 ಮತ್ತು 2015ರ ಎಸ್.ಎಸ್.ಎಲ್.ಸಿ. ಪರೀಕ್ಷೆಯಿಂದ ಕ್ರಮವಾಗಿ **ಕೊಂಕಣಿ ಮತ್ತು ತುಳು** ಭಾಷೆಗಳನ್ನು **ತೃತೀಯ** ಭಾಷೆಯನ್ನಾಗಿ ಅಭ್ಯಾಸ ಮಾಡಲು ಅವಕಾಶ ಕಲ್ಪಿಸಿದೆ. ತೃತೀಯ ಭಾಷೆ ಕೊಂಕಣಿ ವಿಷಯದ ಸಂಕೇತ– Subject code 68D/K ಎಂದು ನಿಗದಿಪಡಿಸಿದೆ. ತೃತೀಯ ತುಳು ಭಾಷೆಯ ವಿಷಯ ಸಂಕೇತ 69D/K ಎಂದು

ನಿಗದಿಪಡಿಸಿದೆ. ಕೊಂಕಣಿ ಮತ್ತು ತುಳು ಭಾಷೆಗಳನ್ನು ಬೋಧಿಸುತ್ತಿರುವ ಶಾಲಾ ಮುಖ್ಯಶಿಕ್ಷಕರು ಎಚ್ಚರಿಕೆಯಿಂದ ಅಂತಹ ವಿದ್ಯಾರ್ಥಿಗಳಿಗೆ ಸೂಚನೆ ನೀಡಿ ಓ.ಎಂ.ಆರ್. ನಿಖರವಾಗಿ ಶೇಡ್ ಮಾಡಲು ಕ್ರಮ ವಹಿಸುವುದು.

4. ಪರೀಕ್ಷಾ ಮಂಡಳಿಯಿಂದ ಪ್ರವೇಶ ಪತ್ರಗಳನ್ನು ವಿತರಿಸಿದ ನಂತರ ವಿದ್ಯಾರ್ಥಿಯ ಭಾಷಾ ವಿಷಯದಲ್ಲಾಗಲಿ ಅಥವಾ ಮಾಧ್ಯಮದ ವಿಷಯದಲ್ಲಾಗಲಿ, ಶಾಲಾ ಹಂತದಲ್ಲಿ ಅಥವಾ ಪರೀಕ್ಷಾ ಕೇಂದ್ರದಲ್ಲಿ ಬದಲಾವಣೆ ಮಾಡಲು ಅವಕಾಶವಿಲ್ಲ. ಆದರೆ ಹಿಂದಿನ ವರ್ಷಗಳಲ್ಲಿ ಕೆಲವು ಶಾಲಾ ಮುಖ್ಯಸ್ಥರು ಹಾಗೂ ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಅನುಮತಿ ಪಡೆಯದೇ ಭಾಷಾ ವಿಷಯಗಳನ್ನು ಮತ್ತು ಮಾಧ್ಯಮವನ್ನು ಅವರ ಹಂತದಲ್ಲೇ ಬದಲಾವಣೆ ಮಾಡಿರುವ ಪ್ರಕರಣಗಳು ಕಂಡುಬಂದಿದೆ. ಈ ಕ್ರಮ ಸರಿಯಲ್ಲ ಆದ್ದರಿಂದ ಪರೀಕ್ಷಾ ಮಂಡಳಿಯಿಂದ ಒಮ್ಮೆ ಪ್ರವೇಶಪತ್ರ ವಿತರಣೆಯಾದ ನಂತರ ಶಾಲಾ ಮುಖ್ಯಸ್ಥರು ಅಥವಾ ಪರೀಕ್ಷಾ ಕೇಂದ್ರದ ಅಧೀಕ್ಷಕರು ತಮ್ಮ ಹಂತದಲ್ಲೇ ಯಾವುದಾದರೂ ಬದಲಾವಣೆ ಮಾಡಿದ್ದಲ್ಲಿ ಅಂತಹ ಅಧಿಕಾರಿಗಳ ಮೇಲೆ ನಿಯಮದಂತೆ ಶಿಸ್ತುಕ್ರಮ ಜರುಗಿಸಲಾಗುವುದು ಮತ್ತು ಸಂಬಂಧಪಟ್ಟ ವಿದ್ಯಾರ್ಥಿಯ ಪರೀಕ್ಷಾ ಫಲಿತಾಂಶವನ್ನು ತಡೆಹಿಡಿಯಲಾಗುವುದು.
5. *ಕ್ಲಸ್ಟರ್ ಪರೀಕ್ಷಾ ಕೇಂದ್ರಗಳ ವಿಧಾನವು ಈ ವರ್ಷವೂ ಮುಂದುವರಿಯುತ್ತದೆ.*

## XIII. ಮಕ್ಕಳ ಹಾಜರಾತಿ:

1. ಮಂಡಳಿಯ ಕಾಯ್ದೆ–1966 ನಿಯಮ–37 ರನ್ವಯ, ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳಲು 2015–16ನೇ ಸಾಲಿನಲ್ಲಿ ಶಾಲೆಯು ಕಾರ್ಯ ನಿರ್ವಹಿಸಲು ನಿಗಧಿಪಡಿಸಿರುವ ದಿನಗಳಿಗೆ ಅನುಸಾರ ಕನಿಷ್ಠ ಶೇ.75ರಷ್ಟು ಹಾಜರಾತಿ ಕಡ್ಡಾಯ. ಪರೀಕ್ಷಾ ಮಂಡಳಿಯ ನಿಯಮ–1966 ಚಾಪ್ಟರ್–VI ನಿಯಮ–37(2)(i) ರಂತೆ ಹಾಜರಾತಿ ವಿನಾಯಿತಿ ನೀಡಲು 15 ದಿನಗಳವರೆಗೆ ವಿನಾಯಿತಿ ನೀಡಲು ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರುಗಳು ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ. ಮಂಡಳಿಯ ನಿಯಮ–1966 ಚಾಪ್ಟರ್–VI ನಿಯಮ37(2)(ii) ರಂತೆ 15 ದಿನಗಳಿಗೂ ಮೇಲ್ಪಟ್ಟು 30 ದಿನಗಳವರೆಗೆ ವಿನಾಯಿತಿ ಪ್ರಸ್ತಾವನೆಯನ್ನು ಮಂಡಳಿಗೆ ಸಲ್ಲಿಸಿ ಅನುಮತಿ ಪಡೆಯಬೇಕಾಗಿರುತ್ತದೆ. 30ಕ್ಕೂ ಹೆಚ್ಚು ದಿನಗಳ ಹಾಜರಾತಿ ಕೊರತೆ ಇದ್ದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ.
2. ವೈದ್ಯಕೀಯ ಪ್ರಮಾಣಪತ್ರದ ಆಧಾರದ ಮೇಲೆ 30 ದಿವಸಗಳಿಗೂ ಮೀರಿದ ಅವಧಿಗೆ ಹಾಜರಾತಿ ವಿನಾಯಿತಿ ನೀಡುವ ಪ್ರಸ್ತಾವನೆಗಳು ಬಂದಿರುವುದನ್ನು ಮಂಡಳಿ ಗಮನಿಸಿದೆ. ಆದರೆ ಯಾವುದೇ ಸಂದರ್ಭದಲ್ಲಿಯೂ 30 ದಿವಸಗಳಿಗೆ ಮೀರಿದ ಹಾಜರಾತಿ ಕೊರತೆಯ ಅವಧಿಯನ್ನು ಮನ್ನಾ ಮಾಡಲು ಅವಕಾಶವಿರುವುದಿಲ್ಲವೆಂದು ಮತ್ತೊಮ್ಮೆ ಸ್ಪಷ್ಟಪಡಿಸಲಾಗಿದೆ. ಆದ್ದರಿಂದ ಮುಖ್ಯಗುರುಗಳು ಸಹ ಇದನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ತಿಳಿಸಲಾಗಿದೆ.
3. ಇಂತಹ ಪ್ರಸ್ತಾವನೆಗಳನ್ನು ಶಾಲಾ ಮುಖ್ಯಶಿಕ್ಷಕರು ಮಂಡಳಿಗೆ ಸಲ್ಲಿಸಬಾರದಾಗಿ ತಿಳಿಸಿದೆ. ನಿಯಮ ಪ್ರಕಾರ ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ. ಈ ಬಗ್ಗೆ ನಿಯಮ ಮೀರಿ ಅನುಮತಿ ನೀಡಲು ಯಾರಿಗೂ ಅಧಿಕಾರವಿರುವುದಿಲ್ಲ. ಮಂಡಳಿಗೆ ಪ್ರವೇಶ ಪತ್ರಗಳನ್ನು ಹಾಜರಾತಿ ಕೊರತೆಯಿಂದ ಹಿಂದಿರುಗಿಸಿರುವ ಪ್ರಕರಣಗಳಲ್ಲಿ ಕೆಲವು ಅಧಿಕಾರಿಗಳು ಸ್ಥಳೀಯ ಒತ್ತಡಗಳಿಗೆ ಮಣಿದು ಪ್ರವೇಶ ಪತ್ರಗಳ ಜೆರಾಕ್ಸ್ ಪ್ರತಿಯ ಮೇಲೆ ಪರೀಕ್ಷೆ ತೆಗೆದುಕೊಳ್ಳಲು ಅನುಮತಿಸಿದ್ದು, ಅಂತಹ ಅಧಿಕಾರಿಗಳ ಮೇಲೆ ಶಿಸ್ತುಪ್ರಕರಣ ಹೂಡಿದೆ.

   ಆದ್ದರಿಂದ ಯಾವುದೇ ಸಂದರ್ಭದಲ್ಲಿ ಮಂಡಳಿಯಿಂದ ಅನುಮತಿ ಪಡೆಯದೇ ಪರೀಕ್ಷೆಗೆ ಕೂಡಿಸಲು ಅವಕಾಶವಿಲ್ಲ. ಒಂದು ವೇಳೆ ಕೂಡಿಸಿದಲ್ಲಿ ಶಿಸ್ತು ಕ್ರಮ ಹೂಡಲಾಗುವುದು.
4. ವಿದ್ಯಾರ್ಥಿಯು ಶೇ.75 ರಷ್ಟು ಹಾಜರಾತಿ ಪಡೆಯುವುದು ಕಡ್ಡಾಯ. ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಯು ಆಂತರಿಕ ಮೌಲ್ಯಮಾಪನ ಮತ್ತು ಮಂಡಳಿಯು ನಡೆಸುವ ಬಾಹ್ಯ ಪರೀಕ್ಷೆಗೆ ಹಾಜರಾಗಲು ಅರ್ಹರಿರುವುದಿಲ್ಲ. ಉದಾ:ಸಿ.ಸಿ.ಇ. ಪದ್ದತಿಯಲ್ಲಿನ ರೂಪಣಾತ್ಮಕ ಮೌಲ್ಯಮಾಪನದಲ್ಲಿ ಎಫ್.ಎ.–1, ಎಫ್.ಎ.–2 ಮೌಲ್ಯಮಾಪನ ಪರೀಕ್ಷೆಗಳಿಗೆ ಹಾಜರಾಗಿದ್ದು, ಉಳಿದ ಅವಧಿಗೆ ಗೈರು ಹಾಜರಾಗಿ ಹಾಜರಾತಿ ಕೊರತೆ ಇದ್ದಲ್ಲಿ, ಎಫ್.ಎ.–1, ಮತ್ತು ಎಫ್.ಎ.–2 ಮೌಲ್ಯಮಾಪನಗಳಲ್ಲಿ ಗಳಿಸಿದ ಅಂಕಗಳನ್ನು ಆಂತರಿಕ ಮೌಲ್ಯ ಮಾಪನಕ್ಕೆ ಪರಿಗಣಿಸುವಂತಿಲ್ಲ.
5. ರೂಪಣಾತ್ಮಕ ಮೌಲ್ಯಮಾಪನದ ಚಟುವಟಿಕೆಗಳಿಗೆ(FA-1 ರಿಂದ FA-4 ರವರೆಗೆ) ಹಾಜರಾತಿ ಕೊರತೆಯಿಂದ ಗೈರುಹಾಜರಾಗಿದ್ದಲ್ಲಿ, ಅಂತಹ ವಿದ್ಯಾರ್ಥಿಗಳು ಮಂಡಳಿ ನಡೆಸುವ ಬಾಹ್ಯ ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಹರಿರುವುದಿಲ್ಲ.

ಇಂತಹ ವಿದ್ಯಾರ್ಥಿಗಳ ಪ್ರವೇಶ ಪತ್ರಗಳನ್ನು ಮಂಡಳಿಗೆ ಹಿಂದಿರುಗಿಸಬೇಕಾಗುತ್ತದೆ. ಕೆಲವು ಮುಖ್ಯ ಗುರುಗಳು ಹಾಜರಾತಿ ಪರಿಗಣಿಸುವ ವಿಷಯದಲ್ಲಿ ಗೊಂದಲವನ್ನು ಉಂಟು ಮಾಡಿಕೊಂಡಿರುವುದನ್ನು ಗಮನಿಸಿದೆ.

- ಆಂತರಿಕ ಮೌಲ್ಯಮಾಪನಗಳಿಗೆ ಅಂಕಗಳನ್ನು ನೀಡಿ, ಬಾಹ್ಯ ಪರೀಕ್ಷೆಗೆ ಹಾಜರಾತಿ ಕೊರತೆ ಎಂಬುದಾಗಿ ತಿಳಿಸಿ ಪ್ರವೇಶ ಪತ್ರವನ್ನು ಮಂಡಳಿಗೆ ಹಿಂದಿರುಗಿಸುವುದು.
- ಆಂತರಿಕ ಮೌಲ್ಯಮಾಪನ "ಗೈರು ಹಾಜರಿ" ಎಂಬುದಾಗಿ ಪರಿಗಣಿಸಿ ಎ.ಎಂ.ಎಲ್. ನಲ್ಲಿ ಭರ್ತಿ ಮಾಡಿ, ಬಾಹ್ಯ ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿಸುವುದು.
- FA1 ಮತ್ತು FA2 ಪರೀಕ್ಷೆಗೆ ಹಾಜರಾಗಿ, ಉಳಿದಂತೆ FA3 ಮತ್ತು FA4 ಗೈರುಹಾಜರಾಗಿದ್ದು, ವಿದ್ಯಾರ್ಥಿಯ ಹಾಜರಾತಿ ಶೇ.75 ಕ್ಕಿಂತ ಹೆಚ್ಚು ಇದ್ದು, ಶಾಲೆಗೆ ಅಂತಿಮ ದಿನಗಳಲ್ಲಿ ಹಾಜರಾಗದೇ ಇದ್ದಲ್ಲಿ ಅನಿವಾರ್ಯವಾಗಿ 02 ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಪರಿಗಣಿಸಿ ಪೂರ್ಣ ಪ್ರಮಾಣದಲ್ಲಿ 200 ಅಂಕಗಳಿಗೆ ಪರಿಮಾಣಿಸಿ ಎ.ಎಂ.ಎಲ್. ಭರ್ತಿಮಾಡುವುದು. ಇಂತಹ ಯಾವುದೇ ಗೊಂದಲಗಳಿಗೆ ಮುಖ್ಯಗುರುಗಳು ಅವಕಾಶ ನೀಡಬಾರದು. "ಹಾಜರಾತಿ ಕೊರತೆ" ಎಂದರೆ ಆಂತರಿಕ ಮೌಲ್ಯಮಾಪನ ಮತ್ತು ಬಾಹ್ಯ ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಹರಿರುವುದಿಲ್ಲ.
- FA1, FA2, FA3, ಹಾಗೂ FA4, ರೂಪಣಾತ್ಮಕ ಮೌಲ್ಯ ಮಾಪನಗಳಲ್ಲಿ ಯಾವುದಾದರು ಒಂದು ಅಥವಾ ಎರಡು(FA1, FA2, FA3, FA4) ಮೌಲ್ಯ ಮಾಪನದಲ್ಲಿ ಗೈರುಹಾಜರಾಗಿದ್ದು, ವಿದ್ಯಾರ್ಥಿಯ ಹಾಜರಾತಿ ಶೇ.75 ಕ್ಕಿಂತ ಹೆಚ್ಚು ಇದ್ದಲ್ಲಿ, ವಿದ್ಯಾರ್ಥಿಯ ಶಾಲೆಗೆ ಹಾಜರಾದ ದಿನಗಳಲ್ಲಿ ಗೈರು ಹಾಜರಾದ ಚಟುವಟಿಕೆಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಮೌಲ್ಯಮಾಪನ ಮಾಡಿ ಅಂಕಗಳನ್ನು ನೀಡುವುದು.
- ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಒಮ್ಮೆ ಮಂಡಳಿಗೆ AML ಮುಖಾಂತರ ಸಲ್ಲಿಸಿದ ನಂತರ ತಿದ್ದುಪಡಿ ಮಾಡಿ ಪರಿಷ್ಕರಿಸಲು ಅವಕಾಶವಿರುವುದಿಲ್ಲ. ಆದ್ದರಿಂದ AMLನಲ್ಲಿ ನಮೂದಿಸಿ ದೃಢೀಕರಿಸಿರುವ ಅಂಕಗಳನ್ನು ಮಾತ್ರ ಪರಿಗಣಿಸಲಾಗುತ್ತದೆ. ಯಾವುದೇ ಕಾರಣಗಳಿಂದ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಪರಿಷ್ಕರಣೆ ಮಾಡಲು ಅವಕಾಶವಿರುವುದಿಲ್ಲ.
- ಎಲ್ಲಾ ಆರೂ ವಿಷಯಗಳ ಆಂತರಿಕ ಮೌಲ್ಯ ಮಾಪನದ ಅಂಕಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು. ಭಾಗಶಃ ವಿಷಯಗಳಿಗೆ ಆಂತರಿಕ ಮೌಲ್ಯ ಮಾಪನದ ಅಂಕಗಳನ್ನು ನಮೂದಿಸಿ ದೃಢೀಕರಿಸುವುದನ್ನು ಪರಿಗಣಿಸಲಾಗುವುದಿಲ್ಲ. (ಉದಾ: 06 ವಿಷಯಗಳ ಪೈಕಿ 03 ಅಥವಾ 04 ವಿಷಯಗಳಿಗೆ ನಮೂದಿಸುವುದು) ಅಂದರೆ ಒರ್ವ ವಿದ್ಯಾರ್ಥಿ ಆರೂ ವಿಷಯಗಳಲ್ಲೂ ಗಳಿಸಿದ ಆಂತರಿಕ ಮೌಲ್ಯಮಾಪನದ ಅಂಕಗಳನ್ನು AML ನಲ್ಲಿ ನಮೂದಿಸುವುದು ಕಡ್ಡಾಯ.
- ಈ ಅಂಶಗಳು ಆಂತರಿಕ ಮೌಲ್ಯಮಾಪನದ PART-B ನಲ್ಲಿರುವ 04 ಸಹ ಶೈಕ್ಷಣಿಕ ವಿಷಯಗಳಿಗೂ ಅನ್ವಯಿಸುತ್ತದೆ. ಆಂತರಿಕ ಮೌಲ್ಯಮಾಪನದಲ್ಲಿ ಗೈರು ಹಾಜರಾಗಿದ್ದು ಬಾಹ್ಯ ಪರೀಕ್ಷೆಯಲ್ಲಿ ಕುಳಿತುಕೊಳ್ಳಲು ಮುಖ್ಯ ಗುರುಗಳು ಅನುಮತಿಸಿದ್ದಲ್ಲಿ ಇಂತಹ ವಿದ್ಯಾರ್ಥಿಗಳ ಫಲಿತಾಂಶವನ್ನು ತಡೆಹಿಡಿಯಲಾಗುವುದು.

6. ಏಪ್ರಿಲ್–2016ರ ಎಸ್.ಎಸ್.ಎಲ್.ಸಿ. ಪರೀಕ್ಷೆ ಪ್ರಾರಂಭ ದಿನಾಂಕದವರೆಗೆ ಹಾಜರಾತಿಯ ಲೆಕ್ಕಾಚಾರ ಮಾಡಿಕೊಳ್ಳಬಹುದಾಗಿದೆ.

**XIV. ಸತತ 6 ಪ್ರಯತ್ನಗಳು:–**

1. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಅಧಿಸೂಚನೆ ಸಂಖ್ಯೆ:ಎ8/ಮ.ಆ.ಪ್ರ/13/2010–11, ದಿನಾಂಕ:18.03.2011 ರನ್ವಯ ಏಪ್ರಿಲ್–2011ರ ನಂತರ ಪರೀಕ್ಷೆ ತೆಗೆದುಕೊಂಡ ಶಾಲಾ ಹಾಗೂ ಪುನರಾವರ್ತಿತ ವಿದ್ಯಾರ್ಥಿಗಳು 6 ಸತತ ಪರೀಕ್ಷೆಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕು. ಇಲ್ಲವಾದಲ್ಲಿ ನಂತರದ ಪ್ರಯತ್ನದಲ್ಲಿ ಖಾಸಗಿ ಅಭ್ಯರ್ಥಿಯಾಗಿ ಎಲ್ಲಾ ವಿಷಯಗಳಲ್ಲಿಯು ಹೊಸದಾಗಿ ಪರೀಕ್ಷೆ ತೆಗೆದುಕೊಳ್ಳಬೇಕು. ವಿದ್ಯಾರ್ಥಿಗೆ ಸರ್ಕಾರ ಒದಗಿಸಿರುವ 06 ಸತತ ಪರೀಕ್ಷೆಗಳಲ್ಲಿ ವಿದ್ಯಾರ್ಥಿಯ ಸ್ವಕಾರಣಗಳಿಂದ ಯಾವುದಾದರೂ ಪರೀಕ್ಷೆ ತೆಗೆದುಕೊಳ್ಳದೆ ಇದ್ದಲ್ಲಿ ಆ ಪರೀಕ್ಷೆಯನ್ನು ಕೂಡ ಒಂದು ಪ್ರಯತ್ನ(Attempt) ಎಂದು ಗಣನೆಗೆ ತೆಗೆದುಕೊಳ್ಳಲಾಗುವುದು. ಏಪ್ರಿಲ್–2014 ರಲ್ಲಿ ಪರೀಕ್ಷೆ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಜೂನ್ 2016ರ ಪರೀಕ್ಷೆಯ 6ನೇ ಪ್ರಯತ್ನವಾಗಿರುತ್ತದೆ.
2. ಏಪ್ರಿಲ್–2011 ಕ್ಕಿಂತ ಪೂರ್ವದ ಅವಧಿಗಳಲ್ಲಿ ನಡೆದ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿ ಪುನಃ ಪರೀಕ್ಷೆಗೆ ಕುಳಿತುಕೊಳ್ಳುವಲ್ಲಿ ಹಲವಾರು ಮುಖ್ಯಗುರುಗಳಲ್ಲಿ ಇನ್ನೂ ಗೊಂದಲಗಳಿರುವುದನ್ನು ಮಂಡಳಿ ಗಮನಿಸಿದೆ. ಇಂತಹ ಅಭ್ಯರ್ಥಿಗಳು 2011ರ ನಂತರ ಪರೀಕ್ಷೆಗೆ ಕುಳಿತ ಅವಧಿಯಿಂದ ಸತತ 06 ಪ್ರಯತ್ನಗಳ ವ್ಯಾಪ್ತಿಗೆ ಒಳಪಡುತ್ತಾರೆ.

**ಉದಾಹರಣೆ:-** ಏಪ್ರಿಲ್ 2008ರಲ್ಲಿ ಕುಳಿತಿದ್ದ ಓರ್ವ ಅಭ್ಯರ್ಥಿ ಏಪ್ರಿಲ್-2011ರಲ್ಲಿ ಕುಳಿತಿದ್ದಲ್ಲಿ ಜೂನ್ 2013ರ ಪರೀಕ್ಷೆಯು ಅಂತಿಮ ಪ್ರಯತ್ನದ ಅವಧಿಯಾಗಿರುತ್ತದೆ.

- ಇದೇ ವಿದ್ಯಾರ್ಥಿ ಏಪ್ರಿಲ್-2014ರಲ್ಲಿ ಕುಳಿತಿದ್ದಲ್ಲಿ ಜೂನ್-2016ರ ಪರೀಕ್ಷೆಯ ಅವಧಿಯವರೆಗೂ ಕುಳಿತುಕೊಳ್ಳಲು ಅವಕಾಶವಿರುತ್ತದೆ.

| ಸತತ 6 ಪ್ರಯತ್ನಗಳನ್ನು ಪೂರೈಸಿರುವ ವಿವರಗಳು | |
|---|---|
| ಏಪ್ರಿಲ್-2011ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್-2013ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| ಜೂನ್-2011ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್-2014ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| ಏಪ್ರಿಲ್-2012ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್-2014ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| ಜೂನ್-2012ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್-2015ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| ಏಪ್ರಿಲ್-2013ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್-2015ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| ಜೂನ್-2013ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್-2016ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| ಏಪ್ರಿಲ್-2014ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್-2016ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |

**ವಿಶೇಷ ಸೂಚನೆ:-** *ಮೇಲೆ ವಿವರಿಸಿದಂತೆ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳು ಸತತ 6 ಪ್ರಯತ್ನಗಳ ಅವಧಿಯಲ್ಲಿ ಪರೀಕ್ಷೆ ಬರೆದು ಅನುತ್ತೀರ್ಣನಾಗಿದ್ದರೆ, ಇಂತಹ ವಿದ್ಯಾರ್ಥಿಯು ತೇರ್ಗಡೆ ಹೊಂದಿದ್ದ ವಿಷಯಗಳೂ ಸಹಪರಿಗಣಿಸಲಾಗುವುದಿಲ್ಲ. ಈ ವಿದ್ಯಾರ್ಥಿಗಳು ಏಪ್ರಿಲ್-2017ರ ಪರೀಕ್ಷೆಗೆ ಹೊಸದಾಗಿ ಎಲ್ಲಾ 06 ವಿಷಯಗಳನ್ನು ತೆಗೆದುಕೊಳ್ಳಬೇಕು ಹಾಗೂ ಖಾಸಗಿ ವಿದ್ಯಾರ್ಥಿಯಾಗಿ ಪರೀಕ್ಷೆಗೆ ಕುಳಿತುಕೊಳ್ಳಬೇಕಾಗುತ್ತದೆ.ಖಾಸಗಿ ವಿದ್ಯಾರ್ಥಿ ಪರೀಕ್ಷೆಗೆ ಕುಳಿತುಕೊಳ್ಳಲು ವಿಧಿಸಿರುವ ಷರತ್ತುಗಳನ್ನು ಪಾಲಿಸಬೇಕು.*

## XV. ಫಲಿತಾಂಶ ಉತ್ತಮ ಪಡಿಸಿಕೊಳ್ಳುವಿಕೆ:-

1. ಮಂಡಳಿಯ ಕಾಯ್ದೆ ಅನುಬಂಧ-3ರ ನಿಯಮ 22ರನ್ವಯ ಎಸ್.ಎಸ್.ಎಲ್.ಸಿ.ಪರೀಕ್ಷೆಗೆ ಹಾಜರಾಗಿ ನಿರೀಕ್ಷಿಸಿದ್ದ ಫಲಿತಾಂಶ ಬಾರದಿದ್ದ ಸಂದರ್ಭಗಳಲ್ಲಿ, ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.ಈ ಸೌಲಭ್ಯ ಬಯಸುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಮೊದಲನೇ ಬಾರಿ ಎಲ್ಲಾ ವಿಷಯಗಳಲ್ಲಿ ತೇರ್ಗಡೆಹೊಂದಿದ್ದು, ತೇರ್ಗಡೆಯಾದ 02 ವರ್ಷಗಳ ಅವಧಿಯಲ್ಲಿ ಯಾವುದಾದರೂ ವಿಷಯ ಅಥವಾ ಎಲ್ಲಾ ವಿಷಯಗಳಲ್ಲಿ ಫಲಿತಾಂಶ ಉತ್ತಮಪಡಿಸಿಕೊಳ್ಳಬಹುದಾಗಿದೆ.ತೇರ್ಗಡೆಯಾದವಿದ್ಯಾರ್ಥಿಗಳು ಮರು ಪ್ರಯತ್ನದಲ್ಲಿ ಮೊದಲನೆ ಪ್ರಯತ್ನದಲ್ಲಿನ ಅಂಕಗಳಿಗಿಂತ ಕಡಿಮೆ ಅಂಕಗಳಿಸಿದಲ್ಲಿ ಮೊದಲನೆ ಪ್ರಯತ್ನದಲ್ಲಿ ಗಳಿಸಿರುವ ಅಂಕಗಳನ್ನು ಉಳಿಸಿಕೊಳ್ಳಬಹುದಾಗಿದೆ.
2. **ಅನುಸರಿಸಬೇಕಾದ ಕ್ರಮಗಳು:-**
   - ಬಿಳಿ ಹಾಳೆಯಲ್ಲಿ ಅರ್ಜಿ ಬರೆದು ಮುಖ್ಯೋಪಾಧ್ಯಾಯರ ಮುಖಾಂತರ ಮಂಡಳಿಗೆ ನಿಗದಿತ ಶುಲ್ಕದೊಂದಿಗೆ ಮತ್ತು ಮೂಲ ಅಂಕಪಟ್ಟಿಯೊಂದಿಗೆ ಅರ್ಜಿ ಸಲ್ಲಿಸಬೇಕು.
   - ಮಂಡಳಿಯಿಂದ ಅನುಮತಿ ಪಡೆದನಂತರ ಪರೀಕ್ಷಾ ಶುಲ್ಕ ಪಾವತಿಸಬೇಕು.
   - ಹಿಂದೆ ವ್ಯಾಸಂಗ ಮಾಡಿದ ಶಾಲೆಯಿಂದಲೇ ಪರೀಕ್ಷಾ ಶುಲ್ಕ ಪಾವತಿಸಬೇಕು ಆ ಶಾಲೆಗೆ ನಿಗದಿಪಡಿಸಿದ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಪರೀಕ್ಷಾ ಕೇಂದ್ರ ಬದಲಾವಣೆಗೆ ಅವಕಾಶವಿರುವುದಿಲ್ಲ.
   - ತಾನು ಯಾವುದೇ ಉನ್ನತ ವ್ಯಾಸಂಗವನ್ನು ಮುಂದುವರೆಸಿಲ್ಲ ಎಂಬ ಬಗ್ಗೆ ಮುಚ್ಚಳಿಕೆ ಪತ್ರ ಸಲ್ಲಿಸುವುದು.
   - ಪ್ರಯತ್ನ ಪರೀಕ್ಷೆಯಲ್ಲಿ ಫಲಿತಾಂಶ ಉತ್ತಮವಾಗದಿದ್ದ ಪಕ್ಷದಲ್ಲಿ ಹಿಂದಿನ ಫಲಿತಾಂಶವನ್ನೇ ಉಳಿಸಿಕೊಳ್ಳಬಹುದು.
   - ಅನುಮತಿ ಪತ್ರದೊಂದಿಗೆ ಪರೀಕ್ಷಾ ಶುಲ್ಕವನ್ನು ನಿಗದಿತ ಅವಧಿಯೊಳಗೆ ಮಂಡಳಿಗೆ ಸಲ್ಲಿಸುವುದು.

**3. ಶೇಕಡ 100 ರಷ್ಟು ಫಲಿತಾಂಶ ಪಡೆದ ಶಾಲೆಗಳ ಕುರಿತು:**

- ರಾಜ್ಯಾದ್ಯಾಂತ 10ನೇ ತರಗತಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ನೋಂದಾಯಿಸುವ ಸರ್ಕಾರಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಸಂಖ್ಯೆ ಏಕರೂಪದಿಂದ ಕೂಡಿರುವುದಿಲ್ಲ. ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 10 ರಿಂದ 200 ಕ್ಕಿಂತ ಹೆಚ್ಚಿನ ವ್ಯಾಪ್ತಿಯಲ್ಲಿರುವುದು ಮಂಡಳಿ ಗಮನಕ್ಕೆ ಬಂದಿದೆ. ಶೇಕಡ 100 ರಷ್ಟು ಫಲಿತಾಂಶ ಪಡೆಯುವ ಏಕೈಕ ಉದ್ದೇಶದಿಂದ ನಪಾಸಾಗುವ ಸಂಭವವಿರುವ ಶಾಲಾ ಅಭ್ಯರ್ಥಿಗಳನ್ನು ಖಾಸಗಿ ಅಭ್ಯರ್ಥಿಗಳನ್ನಾಗಿ ನೋಂದಾಯಿಸುತ್ತಿರುವ ಪ್ರವೃತ್ತಿಯನ್ನು ಕೆಲವು ಶಾಲೆಗಳು ಅನುಸರಿಸುತ್ತಿರುವುದನ್ನು ಗಮನಿಸಲಾಗಿದೆ.

4. ಈ ಹಿನ್ನೆಲೆಯಲ್ಲಿ ದಿನಾಂಕ:10.05.2014 ರಂದು ಮಂಡಳಿಯ 175ನೇ ಸಭೆಯಲ್ಲಿ ಈ ವಿಷಯದ ಬಗ್ಗೆ ಸಮಗ್ರವಾಗಿ ಚರ್ಚಿಸಲಾಯಿತು ಹಾಗೂ ಕೆಳಕಂಡಂತೆ ನಿರ್ಣಯಿಸಲಾಯಿತು.

   **1.** ಶೇಕಡ.100 ಕ್ಕೆ 100ರಷ್ಟು ಫಲಿತಾಂಶ ಪಡೆದ ಶಾಲೆಗಳನ್ನು ನಿರ್ಧರಿಸಲು ಆಯಾ ಶೈಕ್ಷಣಿಕ ವರ್ಷದಲ್ಲಿ 10ನೇ ತರಗತಿಯಲ್ಲಿ ಕನಿಷ್ಠ 25 ವಿದ್ಯಾರ್ಥಿಗಳ ಹಾಜರಾತಿ ಇರತಕ್ಕದ್ದು ಹಾಗೂ 25 ವಿದ್ಯಾರ್ಥಿಗಳು ವ್ಯಾಸಂಗ ಮಾಡಿ ಪರೀಕ್ಷೆ ತೆಗೆದುಕೊಂಡು ಉತ್ತೀರ್ಣರಾಗಿರಬೇಕು.

   **2.** 9ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಯು ಅದೇ ಶಾಲೆಯಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮುಂದುವರೆಸಿ ಪರೀಕ್ಷೆ ತೆಗೆದುಕೊಂಡಿರಬೇಕು.

   **3.** ಶೇಕಡ.100 ರಷ್ಟು ಫಲಿತಾಂಶ ಪಡೆಯುವ ಉದ್ದೇಶದಿಂದ ಶಾಲಾ ಅಭ್ಯರ್ಥಿಗಳನ್ನು ಖಾಸಗಿ ಅಭ್ಯರ್ಥಿಗಳನ್ನಾಗಿ ನೋಂದಾಯಿಸಿದ ಶಾಲೆಗಳನ್ನು, ಶೇಕಡ.100 ರಷ್ಟು ಫಲಿತಾಂಶ ಪಡೆದ ಶಾಲೆಗಳನ್ನಾಗಿ ಘೋಷಿಸಲು ಪರಿಗಣಿಸುವುದಿಲ್ಲ.

## XVI.ಕಿರಿಯ ತಾಂತ್ರಿಕ ಶಾಲೆಗಳು(Junior Technical Schools):–

1. ರಾಜ್ಯದ ಕೆಲವು ಅಧಿಕೃತ ಕಿರಿಯ ತಾಂತ್ರಿಕ ಶಾಲೆಗಳಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಸಾಮಾನ್ಯ ವಿಷಯಗಳ ಜೊತೆಗೆ 02 ತಾಂತ್ರಿಕ ವಿಷಯಗಳನ್ನು ಅಭ್ಯಾಸ ಮಾಡಿ ಪರೀಕ್ಷೆ ತೆಗೆದುಕೊಳ್ಳಬೇಕಾಗುತ್ತದೆ. 02 ತಾಂತ್ರಿಕ ವಿಷಯಗಳಲ್ಲಿ ಒಂದು ಥಿಯರಿ ಮತ್ತೊಂದು ಪ್ರಾಯೋಗಿಕ ಪರೀಕ್ಷೆ ವಿಷಯವಾಗಿರುತ್ತದೆ.ಪರೀಕ್ಷೆಗೆ ಆಯ್ಕೆ ಮಾಡಿಕೊಳ್ಳಬೇಕಾಗಿರುವ ತಾಂತ್ರಿಕ ವಿಷಯಗಳ ವಿವರ ಕೆಳಕಂಡಂತಿದೆ.

| ಕ್ರ.ಸಂ | ವಿಷಯ (Theory) | ವಿಷಯ ಸಂಕೇತ |
|---|---|---|
| 1 | Elements of Engineering | 71 |
| 2 | Engineering Drawing | 72 |
| 3 | Elements of Electronics | 73 |
| 4 | Elements of Computer Science | 74 |
| | Practical’s | |
| 5 | Craft Technology | 77 |
| 6 | Electronics lab | 75 |
| 7 | Computer lab | 76 |

*Elements of Engineering ವಿಷಯ ಆಯ್ಕೆ ಮಾಡಿಕೊಂಡ ವಿದ್ಯಾರ್ಥಿ Engineering Drawing ವಿಷಯವನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕಾಗುತ್ತದೆ.*

*Elements of Electronics ಅಥವಾ Elements of Computer Science ವಿಷಯಗಳ ಪೈಕಿ ಯಾವುದಾದರೊಂದು ವಿಷಯವನ್ನು ಥಿಯರಿ ವಿಷಯವಾಗಿ ಆಯ್ಕೆ ಮಾಡಿಕೊಳ್ಳಬಹುದಾಗಿದೆ.ಆಯ್ಕೆ ಮಾಡಿಕೊಳ್ಳುವ ವಿಷಯಗಳು ಶಾಲೆಯಲ್ಲಿ ಬೋಧನೆ ಮಾಡುವ ಪಠ್ಯಕ್ರಮಕ್ಕೆ ಅನುಗುಣವಾಗಿರಬೇಕು.*

## XVII. ಜಿಲ್ಲಾ ಉಪನಿರ್ದೇಶಕರು(ಆಡಳಿತ) / ಕ್ಷೇತ್ರ ಶಿಕ್ಷಣಾಧಿಕಾರಿಗಳ ಕರ್ತವ್ಯಗಳು ಮತ್ತು ಜವಾಬ್ದಾರಿಗಳು:

**ಕ್ಷೇತ್ರಶಿಕ್ಷಣಾಧಿಕಾರಿಗಳು:–**

1. ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 31ರ ಪ್ರಕಾರ ಪ್ರತಿಯೊಂದು ಪ್ರೌಢಶಾಲೆಯು ಬೋಧಿಸುವ ಮಾಧ್ಯಮಗಳಿಗನುಗುಣವಾಗಿ ಇಲಾಖೆಯ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯುವುದು ಕಡ್ಡಾಯ. ಎಸ್.ಎಸ್.ಎಲ್.ಸಿ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಆಂಗ್ಲ ಮಾಧ್ಯಮದಲ್ಲಿ ನೊಂದಾಯಿಸಿಕೊಳ್ಳಬೇಕಾದಲ್ಲಿ ಖಾಸಗಿ ಪ್ರೌಢಶಾಲೆಗಳು ಆಂಗ್ಲ ಮಾಧ್ಯಮ ಬೋಧನೆ ಮಾಡುವ ಬಗ್ಗೆ ಇಲಾಖೆಯಿಂದ ಪೂರ್ವಾನುಮತಿ ಪಡೆಯಬೇಕಾಗಿರುತ್ತದೆ. ಹಾಗೂ ಇಂತಹ ದೃಢೀಕರಣ ದಾಖಲಾತಿಗಳೊಂದಿಗೆ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಬೇಕಾಗುತ್ತದೆ ಎಂಬುದರ ಬಗ್ಗೆ ಮುಖ್ಯಗುರುಗಳಿಗೆ ಸೂಚನೆ ನೀಡತಕ್ಕದ್ದು.
2. ಆದರೆ ಕೆಲವು ಶಾಲೆಗಳು ಕನ್ನಡ ಮಾಧ್ಯಮ ಬೋಧನೆ ಮಾಡುವ ಬಗ್ಗೆ ಇಲಾಖಾ ಅನುಮತಿಯನ್ನು ಪಡೆದು, ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳನ್ನು ಪ್ರಸ್ತಾವನೆಗಳಲ್ಲಿ ಸಲ್ಲಿಸಿ ನೊಂದಾಯಿಸಿ ಕೊಂಡಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಇದನ್ನು ಗಮನಿಸಿದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕ್ರಿಯಾತ್ಮಕ ಮೇಲ್ವಿಚಾರಣೆಗಳು(ಮಾನಿಟರಿಂಗ್) ಇರುವುದಿಲ್ಲ. ಈ ಅಧಿಕಾರಿಗಳು ಪರಿಶೀಲಿಸದೆ ಪ್ರಸ್ತಾವನೆಗಳನ್ನು ಮಂಡಳಿಗೆ ಸಲ್ಲಿಸುತ್ತಿರುವುದು ಸಹ ಗಮನಿಸಲಾಗಿದೆ. ಈ ರೀತಿಯ ಪ್ರಸ್ತಾವನೆಗಳನ್ನು ಸಲ್ಲಿಸಬಾರದೆಂದು ಹಾಗೂ ಕಟ್ಟುನಿಟ್ಟಿನ ಕ್ರಮ ಅನುಸರಿಸಲು ಮುಖ್ಯ ಶಿಕ್ಷಕರಿಗೆ ಸೂಚಿಸತಕ್ಕದ್ದು. ಖಾಸಗಿ ಶಾಲೆಗಳು ಅಧಿಕೃತವಾಗಿ ನಡೆಯುತ್ತಿರುವ ಬಗ್ಗೆ ಅಥವಾ ನಡೆಯದಿರುವ ಬಗ್ಗೆ ಕ್ರಮಬದ್ಧವಾಗಿ ಪರಿಶೀಲನೆ ನಡೆಯದಿರುವುದು ದೃಢಪಡುತ್ತದೆ.
3. ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ವಿದ್ಯಾರ್ಥಿಗಳ ನಾಮಿನಲ್ ರೋಲ್ ಪ್ರಸ್ತಾವನೆ ಸಲ್ಲಿಸುವಾಗ ಶಾಲಾ ಮಾನ್ಯತೆಯ ದಾಖಲಾತಿ ಸಲ್ಲಿಸುವುದು ಕಡ್ಡಾಯವಾಗಿರುತ್ತದೆ. ಈ ದಾಖಲಾತಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳು ನೀಡುವಲ್ಲಿ ವಿಳಂಬವಾಗುತ್ತಿರುವುದನ್ನು ಗಮನಿಸಲಾಗಿದೆ. ಖಾಸಗಿ ಪ್ರೌಢಶಾಲೆಗಳಿಗೆ ಮಾನ್ಯತೆ ನೀಡುವುದು ಮತ್ತು ನವೀಕರಣ ಮಾಡುವ ಕಾರ್ಯವನ್ನು ಪ್ರತಿ ವರ್ಷ ಜುಲೈ 31 ರೊಳಗಾಗಿ ಪೂರ್ಣಗೊಳಿಸಬೇಕು. ಮಾನ್ಯತೆ ಪಡೆಯದಿರುವ ಶಾಲೆಗಳಿಗೆ ನೋಟೀಸ್ ಜಾರಿ ಮಾಡಿ ನಿಗಧಿತ ದಿನಾಂಕದೊಳಗೆ ಪ್ರಸ್ತಾವನೆ ಸಲ್ಲಿಸದಿರುವ ಶಾಲೆಗಳ ಮಾನ್ಯತೆ ರದ್ದು ಮಾಡುವುದಾಗಿ ತಿಳಿಸಲು ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.
4. ಕೆಲವು ಪ್ರೌಢಶಾಲೆಗಳು ಮಾನ್ಯತೆಯನ್ನು ಮತ್ತು ಬೋಧನಾ ಮಾಧ್ಯಮದ ಬಗ್ಗೆ ಇಲಾಖೆಯಿಂದ ಪೂರ್ವಾನುಮತಿ ಪಡೆಯದೆ ಮಂಡಳಿಗೆ ಪ್ರಸ್ತಾವನೆಗಳನ್ನು ಸಲ್ಲಿಸಿರುವುದನ್ನು ಗಮನಿಸಲಾಗಿದೆ. ಇಂತಹ ಪ್ರಸ್ತಾವನೆಗಳನ್ನು ಮಂಡಳಿಯು ಪುರಸ್ಕರಿಸುವುದಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳ ಮೇಲೆ ಗಂಭೀರ ಪರಿಣಾಮ ಬೀರುವುದಲ್ಲದೆ ಹಾಗೂ ಪೋಷಕರುಗಳಿಗೆ ಗೊಂದಲದ ಸನ್ನಿವೇಶಗಳುಂಟಾಗುತ್ತವೆ. ಇದನ್ನು ತಪ್ಪಿಸಲು ಆಡಳಿತ ಮಂಡಳಿಗಳು ತಮ್ಮ ಶಾಲೆಯ ನಾಮಫಲಕಗಳಲ್ಲಿ ಇಲಾಖೆಯಿಂದ ಅನುಮತಿ ಪಡೆದ ಮಾಧ್ಯಮಗಳ ವಿವರಗಳನ್ನು ಕಡ್ಡಾಯವಾಗಿ ನಮೂದಿಸಬೇಕಾಗುತ್ತದೆ. ಈ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೂಕ್ತ ಸುತ್ತೋಲೆಗಳನ್ನು ನೀಡಲು ಸೂಚಿಸಿದೆ.
5. ಪರೀಕ್ಷಾ ಮಂಡಳಿಯಿಂದ ಶಾಲಾ ಸಂಕೇತ ಪಡೆದ ರಾಜ್ಯದ ಸರ್ಕಾರಿ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ವಿವರಗಳನ್ನು ಸಲ್ಲಿಸಬೇಕು. ಈ ಅಧಿಸೂಚನೆಯ ಜೊತೆಯಲ್ಲಿ ಲಗತ್ತಿಸಿರುವ ಅನುಬಂಧದಲ್ಲಿ ವಿವರಿಸಿರುವಂತೆ ಪ್ರೌಢ ಶಾಲೆಗಳು 2016–17ನೇ ಶೈಕ್ಷಣಿಕ ವರ್ಷದಲ್ಲಿ ಮಾನ್ಯತೆ, ಶಾಲಾ ಸಂಕೇತ ಹಾಗೂ ಅಸ್ತಿತ್ವದಲ್ಲಿದ್ದು, ಶಾಲೆ ನಡೆಯುತ್ತಿದೆಯೇ ಎಂಬ ಬಗ್ಗೆ ಪರಿಶೀಲಿಸಿ ವರದಿ ಮಾಡಬೇಕು.
6. ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಇನ್ನೂ ಯಾವುದಾದರೂ ಹೊಸ ಅಧಿಕೃತ ಶಾಲೆಗಳು ನಡೆಯುತ್ತಿದ್ದಲ್ಲಿ ಅನುಬಂಧದಲ್ಲಿನ ಕೊನೆಯಲ್ಲಿ ಸ್ಪಷ್ಟವಾಗಿ ನಮೂದಿಸಿ ವಿವರಗಳನ್ನು ದೃಢೀಕರಿಸಬೇಕು.
7. ಅನಧಿಕೃತ ಶಾಲೆಗಳ ವಿವರಗಳನ್ನು ಸ್ಪಷ್ಟವಾಗಿ ವಿವರಿಸಿ ವರದಿ ಮಾಡಬೇಕು. ಯಾವುದೇ ಕಾರಣಗಳಿಂದ ಅನಧಿಕೃತ ಶಾಲೆಗಳಿಂದ ಪ್ರಸ್ತಾವನೆ ಸಲ್ಲಿಸದಂತೆ ಕ್ರಮವಹಿಸಬೇಕು. ಕಳೆದ ಸಾಲಿನಲ್ಲಿ ಕೆಲವು ಅನಧಿಕೃತ ಶಾಲೆಗಳಿಂದ ಪ್ರಸ್ತಾವನೆಗಳು ಬಂದಿದ್ದು, ಮಂಡಳಿ ಇದನ್ನು ಗಂಭೀರವಾಗಿ ಪರಿಗಣಿಸಿ ಸಂಬಂದಿಸಿದವರ ಮೇಲೆ ಶಿಸ್ತು ಕ್ರಮ ಜರುಗಿಸುವಲ್ಲಿ ಕ್ರಮಕೈಗೊಳ್ಳಲಾಗಿದೆ. ಇಂತಹ ಕ್ರಮಗಳನ್ನು ತಡೆಗಟ್ಟುವುದು ಅನಿವಾರ್ಯ ಹಾಗೂ ಕಡ್ಡಾಯ. ಆದ್ದರಿಂದ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಇಂತಹ ಅನಧಿಕೃತ ಶಾಲೆಗಳನ್ನು ಗುರುತಿಸಿ, ಬರುವಂತಹ ಪ್ರಸ್ತಾವನೆಗಳನ್ನು ತಡೆಗಟ್ಟಲು ಕ್ರಮವಹಿಸಬೇಕು.
8. ಕೆಲವು ಶಾಲೆಗಳು ಇಲಾಖಾ ಅನುಮತಿ, ಶಾಲಾ ಸಂಕೇತ ಪಡೆದು ಶಾಲೆಗಳನ್ನು ಸತತವಾಗಿ ನಡೆಸದೆ ಅನಂತರ ಏಕಾಏಕಿ ಶಾಲೆಗಳನ್ನು ಇಲಾಖಾ ಅನುಮತಿ ಪಡೆಯದೇ ಪ್ರಾರಂಭಿಸಿ ಅಥವಾ ಸ್ಥಳಾಂತರಿಸಿ ಅರ್ಜಿಗಳನ್ನು ಸಲ್ಲಿಸುತ್ತಿರುವುದನ್ನು ಗಮನಿಸಿದೆ. ಇಂತಹ ಸಂದರ್ಭಗಳಲ್ಲಿ ಪುನಃ ಶಾಲೆ ಪ್ರಾರಂಭವಾಗುವ ವರ್ಷಕ್ಕೆ ಇಲಾಖಾ ಅನುಮತಿ ಪತ್ರ ಸಲ್ಲಿಸುವುದು

ಕಡ್ಡಾಯ. ಮಾನ್ಯತೆ ನವೀಕರಣ ದಾಖಲಾತಿ ಸಲ್ಲಿಸುವುದು ಕಡ್ಡಾಯ. ಈ ಯಾವ ದಾಖಲಾತಿಗಳನ್ನು ಸಲ್ಲಿಸದೇ ಇರುವ ಶಾಲೆಗಳನ್ನು ಅನಧಿಕೃತ ಶಾಲೆ ಎಂಬುದಾಗಿ ಪರಿಗಣಿಸಬೇಕು.

- ಆಯಾಯ ಕ್ಷೇತ್ರಶಿಕ್ಷಣಾಧಿಕಾರಿಗಳ ವ್ಯಾಪ್ತಿಯಲ್ಲಿ ಸಕ್ಷಮ ಪ್ರಾಧಿಕಾರಿಗಳಿಂದ ಶಾಲೆಗಳನ್ನು ಮುಚ್ಚಿಸಲು ಆದೇಶ ನೀಡಿದ್ದಲ್ಲಿ ಹಾಗೂ ವಿದ್ಯಾರ್ಥಿಗಳು ಇಲ್ಲದೇ ಶಾಲೆಯನ್ನು ಮುಚ್ಚಿದ್ದಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳು ಶಾಲಾ ಸಂಕೇತವನ್ನು ರದ್ದುಪಡಿಸಲು ಕಡ್ಡಾಯವಾಗಿ ಶಿಫಾರಸ್ಸು ಮಾಡತಕ್ಕದ್ದು.
- ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಂಬಂಧಿಸಿದ ತಾಲ್ಲೂಕಿನಲ್ಲಿ ನಡೆಯುತ್ತಿರುವ ಎಲ್ಲಾ ಪ್ರೌಢ ಶಾಲೆಗಳು ಅಧಿಕೃತ ಶಾಲೆಯೇ ಅಥವಾ ಅನಧಿಕೃತ ಶಾಲೆಯೇ ಎಂಬ ಬಗ್ಗೆ ಮಂಡಳಿಗೆ **ದಿನಾಂಕ:16.08.2016** ರೊಳಗೆ ನಿಗಧಿಪಡಿಸಿರುವ ನಮೂನೆಯಲ್ಲಿ ಮಾಹಿತಿ ನೀಡಲು ತಿಳಿಸಿದೆ. ಈ ಮಾಹಿತಿ ನೀಡದೆ ಒಂದು ವೇಳೆ ಅನಧಿಕೃತವಾದ ಶಾಲೆಯಿಂದ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡರೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲೆ ಬಗ್ಗೆ ಮಾಹಿತಿ ನೀಡದಿರುವ ಬಗ್ಗೆ ಹೊಣೆಗಾರರನ್ನಾಗಿ ಮಾಡಲಾಗುವುದು.
- ಆಂತರಿಕ ಮೌಲ್ಯ ಮಾಪನದ ಅಂಕಗಳನ್ನು ಒಮ್ಮೆ ಮಂಡಳಿಗೆ AML ಮುಖಾಂತರ ಸಲ್ಲಿಸಿದ ನಂತರ ತಿದ್ದುಪಡಿ ಮಾಡಿ ಪರಿಷ್ಕರಿಸಲು ಅವಕಾಶವಿರುವುದಿಲ್ಲ. ಆದ್ದರಿಂದ AMLನಲ್ಲಿ ನಮೂದಿಸಿ ದೃಢೀಕರಿಸಿರುವ ಅಂಕಗಳನ್ನು ಮಾತ್ರ ಪರಿಗಣಿಸಲಾಗುತ್ತದೆ. ಯಾವುದೇ ಕಾರಣಗಳಿಂದ ಆಂತರಿಕ ಮೌಲ್ಯ ಮಾಪನದ ಅಂಕಗಳನ್ನು ಪರಿಷ್ಕರಣೆ ಮಾಡಲು ಅವಕಾಶವಿರುವುದಿಲ್ಲ.
- ಎಲ್ಲಾ ಆರೂ ವಿಷಯಗಳ ಆಂತರಿಕ ಮೌಲ್ಯ ಮಾಪನದ ಅಂಕಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು. ಭಾಗಶಃ ವಿಷಯಗಳಿಗೆ ಆಂತರಿಕ ಮೌಲ್ಯ ಮಾಪನದ ಅಂಕಗಳನ್ನು ನಮೂದಿಸಿ ದೃಢೀಕರಿಸುವುದನ್ನು ಪರಿಗಣಿಸಲಾಗುವುದಿಲ್ಲ (ಉದಾ:06 ವಿಷಯಗಳ ಪೈಕಿ 03 ಅಥವಾ 04 ವಿಷಯಗಳಿಗೆ ನಮೂದಿಸುವುದು) ಅಂದರೆ ಓರ್ವ ವಿದ್ಯಾರ್ಥಿ ಆರೂ ವಿಷಯಗಳಲ್ಲೂ ಗಳಿಸಿದ ಆಂತರಿಕ ಮೌಲ್ಯಮಾಪನದ ಅಂಕಗಳನ್ನು AML ನಲ್ಲಿ ನಮೂದಿಸುವುದು ಕಡ್ಡಾಯ.
- ಈ ಅಂಶಗಳು ಆಂತರಿಕ ಮೌಲ್ಯ ಮಾಪನದ PART-B ನಲ್ಲಿರುವ 04 ಸಹ ಶೈಕ್ಷಣಿಕ ವಿಷಯಗಳಿಗೂ ಅನ್ವಯಿಸುತ್ತದೆ. ಆಂತರಿಕ ಮೌಲ್ಯ ಮಾಪನದಲ್ಲಿ ಗೈರು ಹಾಜರಾಗಿದ್ದು ಬಾಹ್ಯ ಪರೀಕ್ಷೆಯಲ್ಲಿ ಕುಳಿತುಕೊಳ್ಳಲು ಮುಖ್ಯ ಗುರುಗಳು ಅನುಮತಿಸಿದ್ದಲ್ಲಿ ಇಂತಹ ವಿದ್ಯಾರ್ಥಿಗಳ ಫಲಿತಾಂಶವನ್ನು ತಡೆಹಿಡಿಯಲಾಗುವುದು. ಈ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾ ಮುಖ್ಯಸ್ಥರುಗಳಿಗೆ ಅಗತ್ಯ ಸೂಚನೆಗಳನ್ನು ನೀಡತಕ್ಕದ್ದು.

9. **ಶಾಲೆಯು ಅಧಿಕೃತವೇ ಅಥವಾ ಅನಧಿಕೃತವೇ ಎಂಬ ಬಗ್ಗೆ ಸಂಬಂದಿಸಿದ ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕರಣ ಪತ್ರವನ್ನು ಅನುಬಂಧ–10ರ ನಮೂನೆಯಲ್ಲಿ ನಾಮಿನಲ್ ರೋಲ್ ಜೊತೆ ಕಡ್ಡಾಯವಾಗಿ ಸಲ್ಲಿಸುವುದು. ಇಂತಹ ದೃಢೀಕರಣವಿಲ್ಲದ ನಾಮಿನಲ್ ರೋಲ್‌ಗಳ ಶಾಲೆಗಳ ವಿದ್ಯಾರ್ಥಿಗಳನ್ನು ನಿಯಮಾನುಸಾರ ಖಾಸಗಿ ಅಭ್ಯರ್ಥಿಗಳೆಂದು(PF) ಪರಿಣಿಸಲಾಗುವುದು.**

**<u>ಉಪನಿರ್ದೇಶಕರು(ಆಡಳಿತ):–</u>**

1. ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಅನಧಿಕೃತ ಪ್ರೌಢಶಾಲೆಗಳನ್ನು ಮುಚ್ಚಲು ಕ್ರಮ ವಹಿಸುವುದು. ಇಂತಹ ಶಾಲೆಗಳಿಂದ ಯಾವುದೇ ಕಾರಣಗಳಿಂದಾಗಿ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಪರೀಕ್ಷಾ ನೊಂದಾವಣೆ ಪ್ರಸ್ತಾವನೆಗಳನ್ನು ಸಲ್ಲಿಸದಿರುವಂತೆ ಕ್ರಮವಹಿಸಬೇಕು.
2. ಕನ್ನಡ ಮಾಧ್ಯಮದಲ್ಲಿ ಬೋಧನೆ ಮಾಡಲು ಇಲಾಖಾ ಅನುಮತಿ ಪಡೆದು, ಆಂಗ್ಲ ಮಾಧ್ಯಮದಲ್ಲಿಯೂ ವಿದ್ಯಾರ್ಥಿಗಳ ನೊಂದಾವಣೆಗೆ ಪ್ರಸ್ತಾವನೆ ಸಲ್ಲಿಸುವುದು ತಡೆಗಟ್ಟಲು ಕಟ್ಟುನಿಟ್ಟಾದ ಕ್ರಮ ಜರುಗಿಸಬೇಕು.
3. ಅಧಿಕೃತ ಖಾಸಗಿ ಶಾಲೆಗಳ ಮಾನ್ಯತೆಯ ನವೀಕರಣ ದಿನಾಂಕ:15.09.2016 ರೊಳಗಾಗಿ ಕಾರ್ಯವನ್ನು ಪೂರ್ಣಗೊಳಿಸುವಂತೆ ಕ್ರಮವಹಿಸುವುದು.
4. ಸಿ.ಸಿ.ಇ. ಪದ್ಧತಿಯನ್ನು ಅನುಷ್ಠಾನಗೊಳಿಸುವಲ್ಲಿ ಹಾಗೂ ಶಾಲೆಗಳಲ್ಲಿನ ದಾಖಲೀಕರಣ(ಆಂತರಿಕ ರೂಪಣಾತ್ಮಕ ಮೌಲ್ಯಮಾಪನ ಸೇರಿದಂತೆ)ಗಳನ್ನು ಈಗಾಗಲೇ ರಚಿಸಲಾಗಿರುವ ತ್ರಿಸದಸ್ಯ ತಂಡಗಳಿಂದ ಪರಿಣಾಮಕಾರಿಯಾಗಿ ಪರಿಶೀಲಿಸುವಲ್ಲಿ ಅಗತ್ಯಕ್ರಮ ತೆಗೆದುಕೊಳ್ಳಬೇಕು.

5. ಶಾಲಾ ಮಾನ್ಯತೆಯ ನವೀಕರಣದ ದಾಖಲಾತಿಯನ್ನು ಪಡೆಯದೇ ವಿದ್ಯಾರ್ಥಿಗಳ ನೊಂದಾವಣೆ ಪ್ರಸ್ತಾವನೆಗಳನ್ನು ಸಲ್ಲಿಸದಿರುವಂತೆ ಸೂಕ್ತ ಕ್ರಮ ತೆಗೆದುಕೊಳ್ಳುವುದು.

ಒಟ್ಟಾರೆ ಅಧಿಕೃತ ಶಾಲೆಗಳ ಮತ್ತು ಇಲಾಖಾ ವತಿಯಿಂದ ಪಡೆದ ಬೋಧನಾ ಮಾಧ್ಯಮದ ಜೊತೆಗೆ ಮಾನ್ಯತೆ ಪಡೆದ ದಾಖಲಾತಿಗಳೊಂದಿಗೆ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಜಿಲ್ಲಾ ವ್ಯಾಪ್ತಿಯಲ್ಲಿರುವ ಎಲ್ಲಾ ಖಾಸಗಿ ಪ್ರೌಢಶಾಲಾ ಮುಖ್ಯಸ್ಥರುಗಳಿಗೆ ಕಟ್ಟುನಿಟ್ಟಾದ ಸೂಚನೆಗಳನ್ನು ನೀಡತಕ್ಕದ್ದು.

**XVIII.ಪ್ರಶ್ನೋತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯಗಳು ಬಿ.ಇ.ಓ. ಮತ್ತು ಡಿ.ಡಿ.ಪಿ.ಐ.ಗಳು ಅನುಸರಿಸಬೇಕಾದ ಕರ್ತವ್ಯಗಳು ಮತ್ತು ಜವಾಬ್ದಾರಿಗಳು:–**

1. ಕರ್ನಾಟಕ ಶಿಕ್ಷಣ ಕಾಯ್ದೆ–28 ಹಾಗೂ 122ರನ್ವಯ ಹಾಗೂ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಿಯಮ– ತಿದ್ದುಪಡಿ–2012ರನ್ವಯ ಪ್ರತಿಯೊಬ್ಬ ಶಿಕ್ಷಕರು ಮೌಲ್ಯಮಾಪನಾ ಕಾರ್ಯಕ್ಕೆ ಹಾಜರಾಗುವುದು ಕಡ್ಡಾಯ. ಮೌಲ್ಯಮಾಪನಕ್ಕೆ ಹಾಜರಾಗದಿದ್ದಲ್ಲಿ ಶಿಸ್ತುಕ್ರಮದ ಪ್ರಕ್ರಿಯೆಯನ್ನು ಪ್ರಾರಂಭಿಸಲು ಅವಕಾಶವಿರುತ್ತದೆ. ಈ ಹಿನ್ನೆಲೆಯಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳು ಹೆಚ್ಚಿನ ಜವಾಬ್ದಾರಿಗಳನ್ನು ತೆಗೆದುಕೊಂಡು ಶಿಕ್ಷಕರುಗಳನ್ನು ಮೌಲ್ಯಮಾಪನಾ ಕಾರ್ಯಕ್ಕೆ ಹಾಜರಾಗುವಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
2. ಜಿಲ್ಲಾ ಉಪನಿರ್ದೇಶಕರು ಹಾಗೂ ಜಿಲ್ಲಾ ನೋಡಲ್ ಅಧಿಕಾರಿಗಳು ತಮ್ಮ ಜಿಲ್ಲಾ ಕೇಂದ್ರಗಳಲ್ಲಿನ ವಿಷಯವಾರು ಮೌಲ್ಯಮಾಪನಾ ಕೇಂದ್ರಗಳಿಗೆ ದಿನಕ್ಕೆ ಕನಿಷ್ಟ ಎರಡು ಬಾರಿ ಭೇಟಿ ನೀಡಿ ಮೌಲ್ಯಮಾಪನ ಕೇಂದ್ರಗಳಲ್ಲಿನ ಕಾರ್ಯನಿರ್ವಹಣೆಯ ಮಾನಿಟರಿಂಗ್ ಮಾಡತಕ್ಕದ್ದು.
3. ಮೌಲ್ಯಮಾಪನಾ ಕೇಂದ್ರಗಳಲ್ಲಿ ಕಡ್ಡಾಯವಾಗಿ ಮೊಬೈಲ್ ಫೋನ್‌ಗಳನ್ನು ನಿಷೇದಿಸಲಾಗಿದೆ. ಈ ಬಗ್ಗೆ ಮೌಲ್ಯಮಾಪನಾ ಕೇಂದ್ರದ ಮುಖ್ಯಅಧೀಕ್ಷಕರು ತಮ್ಮ ಕೇಂದ್ರಗಳಲ್ಲಿ ಬರುವ ಎಲ್ಲಾ ಮೌಲ್ಯಮಾಪಕರುಗಳ ಸೆಲ್‌ಫೋನ್‌ಗಳನ್ನು ತಮ್ಮ ವಶದಲ್ಲಿ ಪಡೆದುಕೊಳ್ಳತಕ್ಕದ್ದು. ಇದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿರುತ್ತದೆ. ವಾಟ್ಸ್‌ಅಪ್ ಅಥವಾ ಸೆಲ್‌ಫೋನ್‌ಗಳು ಯಾವುದೇ ಕಾರಣದಿಂದ ಮೌಲ್ಯಮಾಪಕರುಗಳಲ್ಲಿ ಇರತಕ್ಕದ್ದಲ್ಲ.
4. ಮೌಲ್ಯಮಾಪಕರುಗಳು ನಿಗದಿತ ಸಮಯವನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಮಾದರಿ ಉತ್ತರ ಪತ್ರಿಕೆಗಳನ್ನು ಚೆನ್ನಾಗಿ ಅಭ್ಯಸಿಸಿ, ವಸ್ತುನಿಷ್ಠವಾಗಿ ಮೌಲ್ಯಮಾಪನಾ ಮಾಡಿ ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಅನ್ಯಾಯವಾಗದಂತೆ ಕಾರ್ಯನಿರ್ವಹಿಸಲು ಸೂಚನೆಗಳನ್ನು ನೀಡತಕ್ಕದ್ದು.
5. ಮೌಲ್ಯಮಾಪನ ಕೇಂದ್ರದ ಸುತ್ತ–ಮುತ್ತ ಪೊಲೀಸ್ ಬಂದೋಬಸ್ತ್ ಮಾಡತಕ್ಕದ್ದು. ಅಹಿತಕರ ಘಟನೆಗಳಿಗೆ ಅವಕಾಶ ನೀಡದಂತೆ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳತಕ್ಕದ್ದು. ಪರೀಕ್ಷಾ ಕೇಂದ್ರಗಳಲ್ಲಿ ಸಹಾಯಕ ಮೌಲ್ಯಮಾಪಕರು ಮೌಲ್ಯಮಾಪನ ಮಾಡಲು ಇಚ್ಚಿಸುವ ಮಾಧ್ಯಮದ ಉತ್ತರಪತ್ರಿಕೆಗಳನ್ನು ಜಂಟಿ ಮುಖ್ಯಪರೀಕ್ಷಕರು ಹಾಗೂ ಉಪಮುಖ್ಯಪರೀಕ್ಷಕರು ನೀಡುವುದು. ಕನ್ನಡ ಮಾಧ್ಯಮದಲ್ಲಿ ಮೌಲ್ಯಮಾಪನಕ್ಕೆ ನೊಂದಣಿಯಾಗಿರುವವರು ಆಂಗ್ಲ ಮಾಧ್ಯಮದಲ್ಲಿ ಮೌಲ್ಯಮಾಪನ ಮಾಡಲು ಇಚ್ಚಿಸಿದಲ್ಲಿ ಮಾತ್ರ ಆಂಗ್ಲ ಮಾಧ್ಯಮದ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪಕರುಗಳಿಗೆ ನೀಡಬಹುದಾಗಿದೆ.
6. ಪ್ರಶ್ನೋತ್ತರ ಪತ್ರಿಕೆಗಳಿಗೆ ಸೂಕ್ತ ರಕ್ಷಣೆ–ಭದ್ರತೆ ಒದಗಿಸತಕ್ಕದ್ದು. ವಿದ್ಯುತ್, ಗಾಳಿ, ನೀರು ಮತ್ತು ಬೆಂಕಿ ಇವುಗಳಿಂದ ಹಾನಿಗೊಳಗಾಗದಂತೆ ಅಗತ್ಯವಾದ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಸ್ಟ್ರಾಂಗ್ ರೂಂ ಆಯ್ಕೆ ಮಾಡಿಕೊಳ್ಳುವಲ್ಲಿ ಈ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಸುರಕ್ಷತೆಯಾಗಿ ಕಾಪಾಡಿಕೊಳ್ಳತಕ್ಕದ್ದು.
7. ಪರೀಕ್ಷಾ ದಿನದಂದು ಉಪಖಜಾನೆಯಲ್ಲಿ ಕ್ಷೇತ್ರಶಿಕ್ಷಣಾಧಿಕಾರಿಗಳು, ತಹಶೀಲ್ದಾರ್ ಹಾಗೂ ಉಪಖಜಾನಾಧಿಕಾರಿಗಳ ಸಮ್ಮುಖದಲ್ಲಿ ಉಪಖಜಾನೆಯ ಭದ್ರತಾ ಕೊಠಡಿಯಿಂದ ಪ್ರಶ್ನೆಪತ್ರಿಕೆಗಳನ್ನು ದಿನಾಂಕವಾರು/ ಮಾಧ್ಯಮವಾರು/ ವಿಷಯವಾರು/ ಪರೀಕ್ಷಾ ಕೇಂದ್ರವಾರು/ ಮಾರ್ಗವಾರು ಪ್ರಶ್ನೆಪತ್ರಿಕೆಗಳನ್ನು ಮಾರ್ಗಾಧಿಕಾರಿಗಳಿಗೆ ವಿತರಿಸುವುದು. ಪ್ರಶ್ನೆಪತ್ರಿಕೆಗಳ ಬಂಡಲ್‌ಗಳನ್ನು ಉಪಖಜಾನೆಯಲ್ಲಿ ಯಾವುದೇ ಕಾರಣಕ್ಕೂ ತೆರೆಯದೇ ಮಾರ್ಗನಕ್ಷೆ ಪ್ರಕಾರ ಎಲ್ಲಾ ಪರೀಕ್ಷಾ ಕೇಂದ್ರಗಳ ಪ್ರಶ್ನೆಪತ್ರಿಕೆಗಳು ಇರುವ ಬಗ್ಗೆ ಖಾತ್ರಿಪಡಿಸಿಕೊಂಡು ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾರ್ಗಾಧಿಕಾರಿಗಳ ವಾಹನದಲ್ಲಿ ಸುರಕ್ಷಿತವಾಗಿ ಇಟ್ಟುಕೊಳ್ಳಲಾಗಿದೆಯೇ ಎಂಬುದನ್ನು ಖಾತರಿಪಡಿಸಿಕೊಂಡು ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾರ್ಗಾಧಿಕಾರಿಗಳಿಗೆ OK ವರದಿ ನೀಡಿದ ನಂತರ ಪರೀಕ್ಷಾ ಕೇಂದ್ರಗಳಿಗೆ ತೆರಳಲು ಅನುಮತಿ ನೀಡುವ ಕ್ರಮ ತೆಗೆದುಕೊಳ್ಳತಕ್ಕದ್ದು.
8. ಪರೀಕ್ಷಾ ಕೇಂದ್ರದ ಪರೀಕ್ಷಾ ದಿನದಂದು ಮುಖ್ಯ ಅಧೀಕ್ಷಕರು ಪ್ರಶ್ನೆಪತ್ರಿಕೆ ವಿತರಿಸುವ ಮಾರ್ಗಾಧಿಕಾರಿಗಳಿಂದ ಪ್ರಶ್ನೋತ್ತರ ಪತ್ರಿಕೆಗಳನ್ನು ಸ್ವೀಕರಿಸಿದ ನಂತರ ಪ್ರಶ್ನೆಪತ್ರಿಕೆ ಬೇಡಿಕೆವಾರು ಸರಬರಾಜು ಮಾಡಲಾಗಿದೆಯೇ

ಎಂಬುದನ್ನು ಖಾತ್ರಿಪಡಿಸಿಕೊಂಡು ಪ್ರಶ್ನೆಪತ್ರಿಕೆ ದಾಸ್ತಾನು ವಹಿಗೆ ದಾಸ್ತಾನು ತೆಗೆದುಕೊಳ್ಳುವುದು ಹಾಗೂ ತದನಂತರ ಭದ್ರತಾ ಠೇವಣಿ ಮಾಡುವ ಅಲ್ಮೇರಾದಲ್ಲಿ ಇಟ್ಟು ಬೀಗ ಹಾಕಿ ಸೀಲ್ ಮಾಡುವುದು.

9. ಪ್ರಶ್ನೆಪತ್ರಿಕೆಯನ್ನು ಪರೀಕ್ಷೆ ಪ್ರಾರಂಭವಾಗುವ 15 ನಿಮಿಷ ಮುಂಚೆ ಮಾತ್ರ ಪ್ರಶ್ನೆಪತ್ರಿಕೆ ಗೌಪ್ಯ ಲಕೋಟೆಗಳ ಬಂಡಲ್‌ನ್ನು ತೆರೆಯಬಹುದಾಗಿದೆ. ಪರೀಕ್ಷಾ ದಿನದಂದು ಪರೀಕ್ಷಾ ಕಾರ್ಯಕ್ಕೆ ಸ್ಥಾನಿಕ ಜಾಗ್ರತ ದಳದವರು/ಕೊಠಡಿ ಮೇಲ್ವಿಚಾರಕರು/ಪರೀಕ್ಷಾ ಸಿಬ್ಬಂದಿಯವರು ಪರೀಕ್ಷಾ ಕೇಂದ್ರಕ್ಕೆ ಹಾಜರಾದ ತಕ್ಷಣ ಕಡ್ಡಾಯವಾಗಿ ಮೊಬೈಲ್ ಪೋನ್‌ನ್ನು ಮುಖ್ಯ ಅಧೀಕ್ಷಕರು ಪಡೆದು ಸ್ವಿಚ್‌ಆಫ್ ಮಾಡಿ ಅಲ್ಮೇರಾದಲ್ಲಿ ಬೀಗಹಾಕಿ ತಮ್ಮ ಸುಪರ್ದಿನಲ್ಲಿ ಇಟ್ಟುಕೊಳ್ಳುವುದು.

10. ಪರೀಕ್ಷೆ ಪ್ರಾರಂಭವಾಗಿ ಅರ್ಧ ಗಂಟೆಯ ನಂತರ ಪ್ರತಿ ಪರೀಕ್ಷಾ ಕೊಠಡಿಯಿಂದ ಗೈರುಹಾಜರಿ ವರದಿ ಪಡೆದ ನಂತರ ಗೈರುಹಾಜರಿಯ ಪ್ರಶ್ನೆಪತ್ರಿಕೆಗಳನ್ನು ಹಾಗೂ ವಿತರಣೆ ಮಾಡಿ ಉಳಿಕೆಯಾಗಿರುವ ಪ್ರಶ್ನೆಪತ್ರಿಕೆಗಳನ್ನು ಬಂಡಲ್ ಮಾಡಿ ಸೀಲ್ ಮಾಡಿ ಅಲ್ಮೇರಾದಲ್ಲಿ ಮುಖ್ಯ ಅಧೀಕ್ಷಕರ ವಶದಲ್ಲಿ ಇಟ್ಟುಕೊಳ್ಳುವುದು.

11. ಮುಖ್ಯ ಅಧೀಕ್ಷಕರು ಪರೀಕ್ಷಾ ಕೇಂದ್ರದಲ್ಲಿ ಪ್ರಶ್ನೆಪತ್ರಿಕೆಗಳನ್ನು ವಿದ್ಯಾರ್ಥಿಗಳಿಗೆ ವಿತರಿಸಿದ ನಂತರ ಮುಖ್ಯ ಅಧೀಕ್ಷಕರ ಕಛೇರಿಯಲ್ಲಿ ಸ್ಥಾನಿಕ ಜಾಗೃತದಳದ ತಂಡದವರಿಗಾಗಲಿ, ಪರೀಕ್ಷಾ ಕೇಂದ್ರದಲ್ಲಿ ಬಿಡುವು ಮಾಡುವರಿಗಾಗಲಿ(ರಿಲಿವರ್) ಯಾವುದೇ ಕಾರಣಕ್ಕೂ ಪ್ರಶ್ನೆಪತ್ರಿಕೆಯನ್ನು ಪರೀಕ್ಷಾ ಸಮಯದಲ್ಲಿ ಅಭ್ಯಸಿಸಲು ಅವಕಾಶ ನೀಡಬಾರದು.

12. ಪರೀಕ್ಷಾ ಕರ್ತವ್ಯಕ್ಕೆ ನಿಯೋಜಿಸಿದ ಶಿಕ್ಷಕರು/ಸಿಬ್ಬಂದಿಯವರಲ್ಲಿ ಎರಡು ಮೊಬೈಲ್ ಸೆಟ್‌ಗಳು ಇರುವ ಸಾದ್ಯತೆಇದ್ದು, ಒಂದನ್ನು ಮಾತ್ರ ಮುಖ್ಯ ಅಧೀಕ್ಷಕರಿಗೆ ನೀಡಿ, ಇನ್ನೊಂದನ್ನು ಶಿಕ್ಷಕರು/ಸಿಬ್ಬಂದಿಯವರು ಇಟ್ಟುಕೊಳ್ಳುವ ಅವಕಾಶವಿದ್ದು, ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಪರಿಶೀಲಿಸಿ ಎರಡು ಮೊಬೈಲ್ ಸೆಟ್‌ನ್ನು ಕಡ್ಡಾಯವಾಗಿ ಪಡೆದು ತಮ್ಮ ವಶದಲ್ಲಿ ಇಟ್ಟುಕೊಳ್ಳಬೇಕು.

13. ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರೇ ತಮ್ಮ ಮೊಬೈಲ್ ಅಥವಾ ಇತರೆ ಶಿಕ್ಷಕರ ಮೊಬೈಲ್ ಮುಖಾಂತರ ಪ್ರಶ್ನೆಪತ್ರಿಕೆಯ ಫೋಟೋ ತೆಗೆದು ಸಿಬ್ಬಂದಿಯ ಮುಖಾಂತರ ಬೇರೆಡೆ ಕಳುಹಿಸಿ ಉತ್ತರವನ್ನು ಸಿದ್ದಪಡಿಸಿ ನಕಲು ಮಾಡಲು ಅವಕಾಶ ಕಲ್ಪಿಸಿರುವ ನಿದರ್ಶನವಿರುತ್ತದೆ.  ಆದ್ದರಿಂದ ಸ್ಥಾನಿಕ ಜಾಗೃತ ದಳದ ತಂಡದ ಸದಸ್ಯರು, ಮುಖ್ಯ ಅಧೀಕ್ಷಕರು ಸಹ, ಪರೀಕ್ಷಾ ಕಾರ್ಯಕ್ಕೆ ಮಾತ್ರ ಮೊಬೈಲ್ ಫೋನ್‌ಗಳನ್ನು ಬಳಸುತ್ತಿದ್ದಾರೆಯೇ ಎಂಬುದನ್ನು ಗಮನಹರಿಸಬೇಕು.

14. ಸ್ಥಾನಿಕ ಜಾಗೃತದಳದ ಸದಸ್ಯರು, ಪರೀಕ್ಷಾ ಕೇಂದ್ರದಲ್ಲಿ ಮುಖ್ಯ ಅಧೀಕ್ಷಕರು ಪ್ರಶ್ನೆಪತ್ರಿಕೆಗಳನ್ನು ಸ್ವೀಕರಿಸುವ ಸಂದರ್ಭದಲ್ಲಿ ಕಡ್ಡಾಯವಾಗಿ ಹಾಜರಿರಬೇಕು ಹಾಗೂ ಪ್ರಶ್ನೆಪತ್ರಿಕೆ ಬಂಡಲ್‌ಗಳನ್ನು ಮುಖ್ಯ ಅಧೀಕ್ಷಕರು ತೆರೆಯುವಾಗ ಹಾಗೂ ಪರೀಕ್ಷೆ ಮುಗಿದ ನಂತರ ಉತ್ತರ ಪತ್ರಿಕೆಗಳ ಬಂಡಲ್ ಮಾಡುವಾಗ ಸ್ಥಾನಿಕ ಜಾಗೃತ ದಳದ ಸದಸ್ಯರು ಕಡ್ಡಾಯವಾಗಿ ಹಾಜರಿರಬೇಕು.

15. ಸ್ಥಾನಿಕ ಜಾಗೃತದಳದ ಸದಸ್ಯರು ಪರೀಕ್ಷಾ ಕೇಂದ್ರದಲ್ಲಿ ಮುಖ್ಯ ಅಧೀಕ್ಷಕರಿಂದ ಪರೀಕ್ಷಾ ಅವ್ಯವಹಾರ ಕಂಡುಬಂದಲ್ಲಿ ತಕ್ಷಣವೇ ಕ್ಷೇತ್ರ ಶಿಕ್ಷಣಾಧಿಕಾರಿಗಳು/ಉಪನಿರ್ದೇಶಕರು ಇವರಿಗೆ ಮಾಹಿತಿಯನ್ನು ನೀಡುವುದು.

16. ತಂತ್ರಜ್ಞಾನ ಬಹಳ ಮುಂದುವರೆದಿರುವುದರಿಂದ ಕ್ಷಣಮಾತ್ರದಲ್ಲಿ ಮಾಹಿತಿಗಳನ್ನು ರವಾನಿಸಬಹುದಾದ ಸನ್ನಿವೇಶಗಳಿರುತ್ತವೆ. ಈ ತಂತ್ರಜ್ಞಾನವನ್ನು ಪರೀಕ್ಷಾ ಅವ್ಯವಹಾರಗಳಿಗೆ ದುರುಪಯೋಗವಾಗಿ ಬಳಸಿಕೊಳ್ಳಬಾರದು ಎಂಬ ನಿಟ್ಟಿನಲ್ಲಿ ಮುಂಜಾಗೃತಾ ಕ್ರಮವಹಿಸಿ ಅತಿ ಎಚ್ಚರಿಕೆವಹಿಸಿ ಕಾರ್ಯ ನಿರ್ವಹಿಸುವುದು ಅನಿವಾರ್ಯ. ಪರೀಕ್ಷಾ ಕೊಠಡಿಯಲ್ಲಿ ಕೊಠಡಿ ಮೇಲ್ವಿಚಾರಕರು ಪ್ರಶ್ನೆಪತ್ರಿಕೆಗಳನ್ನು ವಿತರಿಸುವ ಮೊದಲು ಗೌಪ್ಯ ಲಕೋಟೆಯ ಮೇಲೆ ಇಬ್ಬರು ವಿದ್ಯಾರ್ಥಿಗಳ ಸಹಿ ಪಡೆಯುವುದು ಕಡ್ಡಾಯ.

17. ವಿದ್ಯಾರ್ಥಿಗಳು ಕಡ್ಡಾಯವಾಗಿ ಪರೀಕ್ಷಾ ಕೇಂದ್ರಕ್ಕೆ ಮೊಬೈಲ್ ತರದಂತೆ ಪರೀಕ್ಷಾ ಕೇಂದ್ರಕ್ಕೆ ಲಗತ್ತಿಸಿರುವ ಶಾಲೆಗಳ ಮುಖ್ಯಶಿಕ್ಷಕರಿಗೆ ತಿಳಿಸುವುದು.  ಕೊಠಡಿ ಮೇಲ್ವಿಚಾರಕರು ವಿದ್ಯಾರ್ಥಿಗಳನ್ನು ಪರೀಕ್ಷಾ ಕೊಠಡಿಯ ಒಳಗೆ ಬಿಡುವ ಮೊದಲು ಮೊಬೈಲ್ ಹಾಗೂ ನಕಲು ಪ್ರತಿಗಳ ಬಗ್ಗೆ ಪರಿಶೀಲಿಸಿ ನಂತರ ಕೊಠಡಿ ಒಳಗೆ ಕಳುಹಿಸುವುದು. ಮೊಬೈಲ್‌ಗಳನ್ನು ಕೊಠಡಿ ಮೇಲ್ವಿಚಾರಕರಿಂದ ಪರೀಕ್ಷಾ ಸಮಯದಲ್ಲಿ ಮುಖ್ಯ ಅಧೀಕ್ಷಕರು ಒಮ್ಮೆ ಸ್ವೀಕರಿಸಿದ ನಂತರ ಮಧ್ಯೆ ಯಾವುದೇ ಕಾರಣಕ್ಕೂ ನೀಡಬಾರದು.

18. ಪರೀಕ್ಷಾ ಅವಧಿ ಮುಗಿದ ತಕ್ಷಣ ಪ್ರಶ್ನೋತ್ತರ ಪತ್ರಿಕೆಗಳನ್ನು ಕೊಠಡಿ ಮೇಲ್ವಿಚಾರಕರಿಂದ ಸ್ವೀಕರಿಸಿದ ನಂತರ ಎ.ಎಂ.ಎಲ್.ನ ನೊಂದಣಿಸಂಖ್ಯೆ ಪ್ರಕಾರ ಗೌಪ್ಯ ಲಕೋಟೆಯಲ್ಲಿಟ್ಟು ನಂತರ ಬಂಡಲ್ ಮಾಡಿ ಸೀಲ್ ಮಾಡುವುದು. ಬಂಡಲ್ ಮಾಡುವವರೆಗೂ ಮೊಬೈಲ್ ಪೋನ್‌ಗಳನ್ನು ಮುಖ್ಯ ಅಧೀಕ್ಷಕರು ಯಾರೊಬ್ಬರಿಗೂ ಹಿಂತಿರುಗಿಸಬಾರದು.

19. ಪರೀಕ್ಷಾ ಕೇಂದ್ರದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಏನಾದರೂ ಕಂಡುಬಂದಲ್ಲಿ ನೇರವಾಗಿ ಮುಖ್ಯ ಅಧೀಕ್ಷಕರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು.  ಪರೀಕ್ಷಾ ಕೇಂದ್ರದಲ್ಲಿ ಉಳಿಕೆ ಪ್ರಶ್ನೆಪತ್ರಿಕೆ ಬಂಡಲ್ ಮಾಡಿರುವ ಬಂಡಲ್ ಮೇಲ್ಭಾಗದ ಎರಡು ಕಡೆ **ಉಳಿಕೆ ಪ್ರಶ್ನೆಪತ್ರಿಕೆ** ಎಂದು ಸ್ಕೆಚ್ ಪೆನ್ನಿನಿಂದ ದೊಡ್ಡದಾಗಿ ಸ್ಪಷ್ಟವಾಗಿ ಕಾಣುವಂತೆ ಬರೆಯುವುದು. ಮುಖ್ಯ ಅಧೀಕ್ಷಕರು ಪ್ರಶ್ನೋತ್ತರ **ಪತ್ರಿಕೆಗಳ ಬಂಡಲ್** ಹಾಗೂ **ಉಳಿಕೆ ಪ್ರಶ್ನೆಪತ್ರಿಕೆಗಳ** ಬಂಡಲ್‌ಗಳನ್ನು

ಪ್ರತ್ಯೇಕವಾಗಿ ಮಾಡಿ, ಮಾರ್ಗನಕ್ಷೆಯ ಮಾರ್ಗಾಧಿಕಾರಿಗಳಿಗೆ ಸ್ಪಷ್ಟವಾಗಿ ತಿಳಿಸಿ ಬಂಡಲ್‌ಗಳನ್ನು ನೀಡಿ ಮಾರ್ಗಾಧಿಕಾರಿಗಳಿಂದ ಸ್ವೀಕೃತಿ ಪಡೆಯುವುದು.

**XIX. ಅರ್ಜಿಗಳನ್ನು ಸಲ್ಲಿಸಲು ಮುಖ್ಯೋಪಾಧ್ಯಾಯರು ಪಾಲಿಸಬೇಕಾದ ಸೂಚನೆಗಳು:–**

1. ಓ.ಎಂ.ಆರ್. ಅರ್ಜಿಗಳನ್ನು staple ಮಾಡುವುದಾಗಲಿ, ಪಂಚ್ ಮಾಡಿ ಟ್ಯಾಗ್‌ನಿಂದ ಕಟ್ಟುವುದಾಗಲಿ ಕಡ್ಡಾಯವಾಗಿ ಮಾಡುವಂತಿಲ್ಲ. ಎಣಿಕೆ ಸಂಬಂಧವಾಗಿ ಪೆನ್ಸಿಲ್‌ನಿಂದಾಗಿ ಬರೆಯುವಂತಿಲ್ಲ ಇದನ್ನು ಎಲ್ಲಾ ಮುಖ್ಯಶಿಕ್ಷಕರು ಕಡ್ಡಾಯವಾಗಿ ಪಾಲಿಸಬೇಕು. ಓ.ಎಂ.ಆರ್. ಅರ್ಜಿ ಬದಿಯಲ್ಲಿರುವ ಟೈಮರ್ಸ್‌ಗಳ ಮೇಲೆ ಬರೆಯುವುದು ಅಥವಾ ಫೋಕರ್‌ನಿಂದ ಚುಚ್ಚಿ ಹಾಳು ಮಾಡುವುದು ಇಂತಹವುಗಳನ್ನು ಯಾವುದೇ ಕಾರಣಗಳಿಂದ ಮಾಡತಕ್ಕದ್ದಲ್ಲ. ಈ ರೀತಿ ಮಾಡಿದಲ್ಲಿ ವಿದ್ಯಾರ್ಥಿಯ ಡೇಟಾ, ಸ್ಕ್ಯಾನ್ ಆಗುವುದಿಲ್ಲ.
2. ಎಲ್ಲಾ ಅಭ್ಯರ್ಥಿಗಳ ನಾಮ ಪಟ್ಟಿಗಳನ್ನು ಅನುಬಂಧದಲ್ಲಿ ಸೂಚಿಸಿರುವಂತೆ ಪ್ರತ್ಯೇಕವಾಗಿ ಸಿದ್ದಪಡಿಸಬೇಕು.
3. ಪುನರಾವರ್ತಿತ/ ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳಿಗೆ ಎಂ.ಎಸ್.ಎ. ಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಎಂ.ಎಸ್.ಎ. ಲಭ್ಯವಿಲ್ಲದಿದ್ದಲ್ಲಿ, ರೂ.50/– ಶುಲ್ಕವನ್ನು ಸಕ್ಷಮ ಪ್ರಾಧಿಕಾರವಾದ ವಿಭಾಗೀಯ ಪ್ರಾದೇಶಿಕ ಪರೀಕ್ಷಾ ಮಂಡಳಿಗಳಿಗೆ ಪಾವತಿಸಿ ಎಂ.ಎಸ್.ಎ. ಪ್ರತಿಯನ್ನು ಪಡೆದು ನಿಗದಿತ ದಿನಾಂಕದೊಳಗೆ ಸಲ್ಲಿಸುವುದು ಕಡ್ಡಾಯ. ಶಾಲಾ ಸಂಕೇತ ಬದಲಾದ ಎಂ.ಎಸ್.ಎಗಳಲ್ಲಿ ಶಾಲಾ ಸಂಕೇತ ಬದಲಾವಣೆಯಾಗಿರುವ ಬಗ್ಗೆ ದಾಖಲೆಗಳೊಂದಿಗೆ ಬದಲಾದ ಶಾಲಾಸಂಕೇತವನ್ನು ಮುಖ್ಯಶಿಕ್ಷಕರು ಸಹಿ ಮತ್ತು ಮೊಹರಿನೊಂದಿಗೆ ದೃಢೀಕರಿಸಿ ಸಲ್ಲಿಸುವುದು ಕಡ್ಡಾಯವಾಗಿದೆ.
4. ಇತ್ತೀಚಿನ ಪಾಸ್‌ಪೋರ್ಟ್ ಬಹುವರ್ಣದ(ಕಲರ್ ಫೋಟೋ) ಭಾವಚಿತ್ರದೊಂದಿಗೆ ಸಲ್ಲಿಸುವುದು ಕಡ್ಡಾಯ. ಕೇವಲ ಶುಲ್ಕವನ್ನು ವಸೂಲಿ ಮಾಡಿ ಭಾವಚಿತ್ರ ರಹಿತವಾಗಿ ಸಲ್ಲಿಸುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಆದ್ದರಿಂದ ವಿದ್ಯಾರ್ಥಿಗಳಿಂದ ಫೋಟೋ ಮತ್ತು ಶುಲ್ಕಗಳನ್ನು ಏಕ ಕಾಲದಲ್ಲಿ ಸ್ವೀಕರಿಸಲು ಕ್ರಮ ಕೈಗೊಳ್ಳತಕ್ಕದ್ದು.
5. ಕೆಲವು ವಿದ್ಯಾರ್ಥಿಗಳು ಸಕಾರಣದಿಂದ ಶಾಲೆಗೆ ಗೈರು ಹಾಜರಾದಲ್ಲಿ ಅಂತಹ ವಿದ್ಯಾರ್ಥಿಗಳ ಪೋಷಕರನ್ನು ಶಾಲೆಯ ಮುಖ್ಯೋಪಾಧ್ಯಾಯರು ಸಂಪರ್ಕಿಸಿ, ವಿದ್ಯಾರ್ಥಿಗಳು ಶಾಲೆಗೆ ಹಾಜರಾಗುವಂತೆ ಮನವೊಲಿಸಲು ಮತ್ತು ಪರೀಕ್ಷೆಗೆ ಹಾಜರಾಗಲು ಕ್ರಮವಹಿಸುವುದು. ವಿದ್ಯಾರ್ಥಿ ಶಾಲೆಗೆ ಬರುತ್ತಿಲ್ಲವೆಂಬ ಕಾರಣ ನೀಡಿ ಗೈರು ಹಾಜರಿ ನಮೂದಿಸಬಾರದು. ಅಂತಹ ವಿದ್ಯಾರ್ಥಿಗಳನ್ನು, ಪೋಷಕರನ್ನು ಸಂಪರ್ಕಿಸಿ ಕ್ರಮವಹಿಸುವುದು ಮುಖ್ಯಶಿಕ್ಷಕರ ಕರ್ತವ್ಯವಾಗಿರುತ್ತದೆ.
6. ಛಾಯಾಪ್ರತಿಯ ಎಂ.ಎಸ್.ಎ. ಮತ್ತು ವಿಭಾಗೀಯ ಕಾರ್ಯದರ್ಶಿಗಳ ಸಹಿ ಇಲ್ಲದ ಕೈಬರಹದ ಎಂ.ಎಸ್.ಎ.ಗಳನ್ನು ತಿರಸ್ಕರಿಸಲಾಗುವುದು.
7. ಬೋಧನಾ ಮಾಧ್ಯಮಗಳಿಗನುಗುಣವಾಗಿ ಶಾಲಾ ಸಂಕೇತ ಪಡೆಯುವುದು ಕಡ್ಡಾಯ. ಕೇವಲ ಒಂದು ಮಾಧ್ಯಮಕ್ಕೆ ಶಾಲಾ ಸಂಕೇತ ಪಡೆದು, ಇತರೆ ಮಾಧ್ಯಮಗಳಲ್ಲಿ ಪ್ರಸ್ತಾವನೆ ಸಲ್ಲಿಸುವುದು ನಿಯಮಬಾಹಿರ.
   - ಶಾಲೆಯನ್ನು ಪ್ರಾರಂಭಿಸಲು ಕನ್ನಡ ಹಾಗೂ ಆಂಗ್ಲ ಮಾಧ್ಯಮಗಳಿಗೆ ಒಂದೇ ಆದೇಶದಲ್ಲಿ ಅನುಮತಿ ನೀಡಿದ್ದಲ್ಲಿ ಪ್ರತ್ಯೇಕವಾಗಿ ಶಾಲಾ ಸಂಕೇತ ಪಡೆಯುವ ಅಗತ್ಯವಿಲ್ಲ.
8. 2016–17ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷಾ ನೊಂದಾವಣಿಗೆ ಅಧಿಕೃತ ಖಾಸಗಿ ಪ್ರೌಢಶಾಲೆಗಳು ನಾಮಿನಲ್ ರೋಲ್ ಪ್ರಸ್ತಾವನೆ ಸಲ್ಲಿಸುವಾಗ, ಶಾಲಾ ಮಾನ್ಯತೆ ನವೀಕರಣದ ದಾಖಲಾತಿ ಸಲ್ಲಿಸುವುದು ಕಡ್ಡಾಯ(2016–17ನೇ ಸಾಲಿನವರೆಗೆ ಮಾನ್ಯತೆ ನವೀಕರಣದ ದಾಖಲೆ ಒದಗಿಸಬೇಕು). ತಪ್ಪಿದ್ದಲ್ಲಿ ಪ್ರಸ್ತಾವನೆಯನ್ನು ಮಂಡಳಿಯು ಪುರಸ್ಕರಿಸುವುದಿಲ್ಲ.
9. ದಿನಾಂಕ:01.03.2017 ರಂದು 15 ವರ್ಷ ವಯೋಮಿತಿ ಪೂರೈಸುವ ಅಭ್ಯರ್ಥಿಗಳು ಖಾಸಗಿ ಅಭ್ಯರ್ಥಿಗಳಾಗಿ ಪರೀಕ್ಷೆಗೆ ಕುಳಿತುಕೊಳ್ಳಬಹುದು. ಇವರುಗಳು ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರವರಲ್ಲಿ ನಿಗದಿತ ನೋಂದಣಿ ಶುಲ್ಕ ನೀಡಿ ನೋಂದಣಿ ಮಾಡಿಸಿಕೊಂಡಿರಬೇಕು.
10. ಕರ್ನಾಟಕ ಶಿಕ್ಷಣ ಕಾಯ್ದೆ–1983 ಸೆಕ್ಷನ್–31ರ ಪ್ರಕಾರ ರಾಜ್ಯದ ಪ್ರತಿಯೊಂದು ಖಾಸಗಿ ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳು ಬೋಧಿಸುವ ಮಾಧ್ಯಮಗಳಿಗನುಗುಣವಾಗಿ ಇಲಾಖೆಯ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯುವುದು ಕಡ್ಡಾಯ. ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಆಂಗ್ಲ ಮಾಧ್ಯಮದಲ್ಲಿ ನೊಂದಾಯಿಸಿಕೊಳ್ಳಬೇಕಾದಲ್ಲಿ ಖಾಸಗಿ ಪ್ರೌಢಶಾಲೆಗಳು ಆಂಗ್ಲ ಮಾಧ್ಯಮ ಬೋಧನೆ ಮಾಡುವ ಬಗ್ಗೆ ಇಲಾಖೆಯಿಂದ ಪೂರ್ವಾನುಮತಿ ಪಡೆಯಬೇಕಾಗಿರುತ್ತದೆ. ಹಾಗೂ ಇಂತಹ ದೃಢೀಕರಣ ದಾಖಲಾತಿಗಳೊಂದಿಗೆ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಬೇಕಾಗುತ್ತದೆ.
11. ಕೆಲವು ಖಾಸಗಿ ಶಾಲೆಗಳು ಕನ್ನಡ ಮಾಧ್ಯಮ ಬೋಧನೆ ಮಾಡುವ ಬಗ್ಗೆ ಇಲಾಖಾ ಅನುಮತಿಯನ್ನು ಪಡೆದು, ಆಂಗ್ಲ ಮಾಧ್ಯಮದ ವಿದ್ಯಾರ್ಥಿಗಳನ್ನು ಪ್ರಸ್ತಾವನೆಗಳಲ್ಲಿ ಸೇರಿಸಿ ಸಲ್ಲಿಸಿರುವುದನ್ನು ಮಂಡಳಿ ಗಮನಿಸಿದೆ. ಅಲ್ಲದೇ ಇದನ್ನು

ಗಂಭೀರವಾಗಿ ಪರಿಗಣಿಸಲಾಗಿದೆ. ಆದ್ದರಿಂದ ಇಲಾಖೆಯಿಂದ ಅನುಮತಿ ಪಡೆದ ಮಾಧ್ಯಮದಲ್ಲಿ ಮಾತ್ರ ಬೋಧನೆ ಮಾಡತಕ್ಕದ್ದು. ಪೂರಕವಾಗಿ ಪ್ರಸ್ತಾವನೆಯನ್ನು ಸಹ ಸಲ್ಲಿಸತಕ್ಕದ್ದು. ತಪ್ಪಿದ್ದಲ್ಲಿ, ಮಾನ್ಯತೆಯನ್ನು ಹಿಂಪಡೆಯಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

12. ಪ್ರಸ್ತುತ ರಾಜ್ಯದ ಕೆಲವು ಖಾಸಗಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಹಲವಾರು ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ನಿರೀಕ್ಷಿತ ಮಟ್ಟದಲ್ಲಿ ಇಲ್ಲದಿರುವುದನ್ನು ಗಮನಿಸಿ ಮತ್ತು ಅನುತ್ತೀರ್ಣರಾಗುತ್ತಾರೆಂಬ ಪೂರ್ವಗ್ರಹ ಪೀಡಿತರಾಗಿ ಹಾಗೂ ಶಾಲೆಯ ಒಟ್ಟಾರೆ ಶೇಕಡಾ 100ರಷ್ಟು ಫಲಿತಾಂಶ ಪಡೆಯಬೇಕೆಂಬ ಹೆಬ್ಬಯಕೆಯಿಂದ, ಕೆಲವು ಶಾಲಾ ವಿದ್ಯಾರ್ಥಿಗಳನ್ನು ಖಾಸಗಿ ವಿದ್ಯಾರ್ಥಿಗಳಾಗಿ ಪರಿಗಣಿಸಿ ಪ್ರಸ್ತಾವನೆ ಸಲ್ಲಿಸುತ್ತಿರುವುದು ಮಂಡಳಿಯ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಶಾಲಾ ವಿದ್ಯಾರ್ಥಿಯನ್ನು ಯಾವುದೇ ಕಾರಣಗಳಿಂದಾಗಿ ವರ್ಗಾವಣೆ ಪ್ರಮಾಣ ಪತ್ರ ನೀಡಿ ಖಾಸಗಿ ಅಭ್ಯರ್ಥಿಯಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ. ಇನ್ನು ಮುಂದೆ ಇಂತಹ ಪ್ರಕರಣಗಳು ಮರುಕಳಿಸಿದಲ್ಲಿ ಶಿಕ್ಷಣ ಕಾಯ್ದೆ- 1983ರ ನಿಯಮ-39 ರನ್ವಯ ಮಾನ್ಯತೆಯನ್ನು ಹಿಂಪಡೆಯಲಾಗುವುದು ಹಾಗೂ ಸಂಬಂಧಿಸಿದ ಶಾಲೆಗಳ ಶಾಲಾ ಸಂಕೇತವನ್ನು ಸಹ ರದ್ದುಪಡಿಸಲು ಕ್ರಮವಹಿಸಲಾಗುವುದು.
13. ಶಾಲಾ ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿ ಬೋಧನೆ ಮಾಡುವ ವಿಷಯಗಳನ್ನು ಮಾತ್ರ ಪರೀಕ್ಷೆಗೆ ಆಯ್ಕೆ ಮಾಡಿಕೊಳ್ಳತಕ್ಕದ್ದು.
14. ಶಾಲಾ ಅಭ್ಯರ್ಥಿ/ಖಾಸಗಿ ಹೊಸ/ರೆಗ್ಯುಲರ್ ಪುನರಾವರ್ತಿತ/ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳ ನಾಮಪಟ್ಟಿಯನ್ನು ಮಂಡಳಿಯಲ್ಲಿ ಸ್ವೀಕರಿಸಲು **ದಿನಾಂಕ:31.08.2016** ರಂದು ಕೊನೆಯ ದಿನಾಂಕವಾಗಿರುತ್ತದೆ. ಈ ದಿನಾಂಕದ ನಂತರ ಬರುವ ನಾಮಪಟ್ಟಿಗಳನ್ನು ಸ್ವೀಕರಿಸಲಾಗುವುದಿಲ್ಲ. ಪರೀಕ್ಷಾ ಶುಲ್ಕವನ್ನು ಚಲನ್ ಮೂಲಕ ಸಂಬಂಧಪಟ್ಟ ಬ್ಯಾಂಕಿನಲ್ಲಿ ಜಮಾ ಮಾಡದೇ ಇದ್ದಲ್ಲಿ, ನಂತರ ವಿದ್ಯಾರ್ಥಿಗಳ ನಾಮಪಟ್ಟಿಗಳನ್ನು ಸಲ್ಲಿಸಲು ಖಂಡಿತಾ ಅವಕಾಶವಿಲ್ಲ. ನಾಮಪಟ್ಟಿ ಮತ್ತು ಪರೀಕ್ಷಾ ಶುಲ್ಕದ ಬ್ಯಾಂಕ್ ಚಲನ್ ಎರಡನ್ನೂ ದಿನಾಂಕ:**31.08.2016ರ** ಸಂಜೆ 5.30 ರೊಳಗೆ ಬೆಂಗಳೂರಿನ ಪರೀಕ್ಷಾ ಮಂಡಳಿಯ ಕೇಂದ್ರ ಕಛೇರಿಗೆ ಕಳುಹಿಸಬೇಕು.
15. **ಪುನರಾವರ್ತಿತ ಅಭ್ಯರ್ಥಿಗಳ ಎಂ.ಎಸ್.ಎ.ಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಬೇಕು.**

- ಜುಲೈ-2002ರ ಮತ್ತು ಹಿಂದಿನ ವರ್ಷಗಳಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳ ಎಂ.ಎಸ್.ಎ. ಗಳು.
- ಏಪ್ರಿಲ್-2003ರ ಮತ್ತು ನಂತರದ ವರ್ಷಗಳಲ್ಲಿ ಪರೀಕ್ಷೆ ತೆಗೆದುಕೊಂಡಿದ್ದ ವಿದ್ಯಾರ್ಥಿಗಳ ಎಂ.ಎಸ್.ಎ. ಗಳು

16. ಖಾಸಗಿ ಅಭ್ಯರ್ಥಿಗಳ ಪರೀಕ್ಷಾ ಅರ್ಜಿಯ ಜೊತೆಗೆ ನೋಂದಣಿ ಪ್ರಮಾಣ ಪತ್ರವನ್ನೂ ಸಹ ಲಗತ್ತಿಸಬೇಕು. ಸಕಾರಣದಿಂದ ತಿರಸ್ಕರಿಸುವ ಅರ್ಜಿಗಳ ಪರೀಕ್ಷಾ ಶುಲ್ಕವನ್ನು ಹಿಂದಿರುಗಿಸುವುದಿಲ್ಲ. ಶುಲ್ಕ ವಿನಾಯಿತಿ ಪಡೆಯುವ ಖಾಸಗಿ ಅಭ್ಯರ್ಥಿಗಳು ಜಾತಿ ಪ್ರಮಾಣ ಪತ್ರ ಅಥವಾ ವರ್ಗಾವಣೆ ಪ್ರಮಾಣ ಪತ್ರ(ಟಿ.ಸಿ.)ವನ್ನು ಮುಖ್ಯಶಿಕ್ಷಕರು ವಿದ್ಯಾರ್ಥಿಗಳಿಂದ ಪಡೆದು ಶಾಲೆಯಲ್ಲಿ ಸಂರಕ್ಷಿಸಿ ಇಡತಕ್ಕದ್ದು.
17. ಅಭ್ಯರ್ಥಿಗಳ ಮೂರು ಬಹುವರ್ಣದ ಇತ್ತೀಚಿನ ಭಾವಚಿತ್ರಗಳನ್ನು ಶಾಲಾ ಮುಖ್ಯಸ್ಥರು ಸಂಗ್ರಹಿಸಿ, ಎರಡು ಭಾವಚಿತ್ರಗಳನ್ನು ಮಂಡಳಿಯಿಂದ ಬರುವ ಓ.ಎಂ.ಆರ್ ಫಾರಂನಲ್ಲಿ ಭಾವಚಿತ್ರಕ್ಕಾಗಿ ನಿಗದಿಪಡಿಸಿರುವ ಅಂಕಣದಲ್ಲಿ ಅಂಟಿಸಿ **ಒಂದು ಭಾವಚಿತ್ರದ ಮೇಲೆ ಮಾತ್ರ ಮುಖ್ಯೋಪಾಧ್ಯಾಯರ ರುಜು ಹಾಗೂ ಶಾಲೆಯ ಮೊಹರು ನಮೂದಿಸಬೇಕು.** ಮತ್ತೊಂದು ಭಾವಚಿತ್ರವನ್ನು ಶಾಲೆಯ ಆಲ್ಬಂನಲ್ಲಿ ಸಂಗ್ರಹಿಸಿಡಬೇಕು. ಭಾವಚಿತ್ರಗಳನ್ನು ಅಂಟಿಸಲು ಬಳಸುವ ಗಮ್ ಉತ್ತಮ ಗುಣಮಟ್ಟದಿಂದಿರಬೇಕು. ಭಾವಚಿತ್ರದ ನಾಲ್ಕು ತುದಿಗಳು ಭದ್ರವಾಗಿ ಅಂಟಿಕೊಂಡಿರಬೇಕು. **ಸ್ಟೇಪಲ್ ಬಳಸಬಾರದು.**
18. **ಭಾವಚಿತ್ರ ರಹಿತ ಓ.ಎಂ.ಆರ್./ ಎಂ.ಎಸ್.ಎ. ಗಳನ್ನು ತಿರಸ್ಕರಿಸಲಾಗುವುದು.**
19. ಪುನರಾವರ್ತಿತ ಅಭ್ಯರ್ಥಿಗಳ ಎಂ.ಎಸ್.ಎ ಗಳಲ್ಲಿ ನಿಗದಿತ ಸ್ಥಳದಲ್ಲಿ ವಿದ್ಯಾರ್ಥಿಯ ಭಾವಚಿತ್ರವನ್ನು ಅಂಟಿಸಿ ಸಹಿ ಪಡೆಯಬೇಕು. **ಯಾವ ಕಾರಣಕ್ಕೂ ಭಾವಚಿತ್ರಗಳ ಮೇಲೆ ಮುಖ್ಯೋಪಾಧ್ಯಾಯರ ರುಜು ಹಾಗೂ ಶಾಲೆಯ ಮೊಹರು ಹಾಕತಕ್ಕದ್ದಲ್ಲ.**
20. ಪರೀಕ್ಷಾ ಮಂಡಳಿಯಿಂದ ಪಡೆದ ಎಲ್ಲಾ ಓ.ಎಂ.ಆರ್. ಅರ್ಜಿಗಳನ್ನು ಪೂರ್ಣವಾಗಿ ಹಿಂದಿರುಗಿಸಬೇಕು. ಗೈರು ಹಾಜರಾದ ವಿದ್ಯಾರ್ಥಿಗಳಿದ್ದಲ್ಲಿ, ಮಧ್ಯದಲ್ಲಿ ಶಾಲೆ ಬಿಟ್ಟುಹೋದ ಅಭ್ಯರ್ಥಿಗಳಿದ್ದಲ್ಲಿ ಅಂಥಹವರುಗಳ ವಿವರಗಳನ್ನು ಓ.ಎಂ.ಆರ್‌ನಲ್ಲಿ ನಮೂದಿಸಿ ದೃಢೀಕರಿಸಬೇಕು. **ಯಾವುದೇ ಕಾರಣದಿಂದ ಓ.ಎಂ.ಆರ್.ಗಳನ್ನು ಶಾಲೆಗಳಲ್ಲಿ ಇಟ್ಟುಕೊಳ್ಳುವಂತಿಲ್ಲ. ಬಾಕಿ ಉಳಿದ ಓ.ಎಂ.ಆರ್ ಅರ್ಜಿಗಳನ್ನು ಮಂಡಳಿಗೆ ಹಿಂದಿರುಗಿಸುವುದು ಕಡ್ಡಾಯ.**

21. ಶಾಲೆಯಿಂದ ವರ್ಗಾವಣೆ ಪತ್ರ ತೆಗೆದುಕೊಂಡ ಪುನರಾವರ್ತಿತ ವಿದ್ಯಾರ್ಥಿಗಳಿಗೆ ಶಾಲಾ ಬದಲಾವಣೆಗೆ ಅವಕಾಶವಿಲ್ಲ. ವಿದ್ಯಾರ್ಥಿಗಳು ಪುನ: ಪರೀಕ್ಷೆ ಬರೆಯಲು ಬಯಸಿದಲ್ಲಿ ವಿದ್ಯಾರ್ಥಿಯ ಮೂಲ ವರ್ಗಾವಣೆ ಪತ್ರ ಪಡೆದು ಅದೇ ಶಾಲೆಯಲ್ಲಿ ಪರೀಕ್ಷೆ ತೆಗೆದುಕೊಳ್ಳಲು ಮುಖ್ಯಶಿಕ್ಷಕರು ಅವಕಾಶ ಕಲ್ಪಿಸಬೇಕು.

- ಸರ್ಕಾರದಿಂದ ಮಾನ್ಯತೆ ಪಡೆದು ಅಧಿಕೃತ ಶಾಲೆಗಳಾಗಿ ಮಂಡಳಿಯಿಂದ ಶಾಲಾ ಸಂಕೇತ ಪಡೆದಿರುವ ಸರ್ಕಾರಿ/ಅನುದಾನಿತ/ಅನುದಾನ ರಹಿತ ಪ್ರೌಢಶಾಲೆಗಳ ವಿಷಯವಾರು ಶಿಕ್ಷಕರು ಕಡ್ಡಾಯವಾಗಿ ಮಂಡಳಿಯಲ್ಲಿ ಮೌಲ್ಯಮಾಪನಕ್ಕೆ ನೊಂದಣಿ ಮಾಡಿಸತಕ್ಕದ್ದು.
- ಮೌಲ್ಯಮಾಪನದ ನೊಂದಣಿಗೆ ಪದವಿ ಹಾಗೂ ಬಿ.ಇಡಿ., ವಿದ್ಯಾರ್ಹತೆ ಹೊಂದಿರುವವರು ಅರ್ಹತೆ ಹೊಂದಿರುತ್ತಾರೆ.
- ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ಪ್ರೌಢಶಾಲೆಗೆ ಬಡ್ತಿಹೊಂದಿದ ದಿನಾಂಕವನ್ನು ಜೇಷ್ಠತೆಗಾಗಿ ಪರಿಗಣಿಸಿ ಮೌಲ್ಯಮಾಪನಕ್ಕೆ ನೊಂದಣಿ ಮಾಡಿಸುವುದು.
- ಪ್ರಾಥಮಿಕ ಶಾಲಾ ಶಿಕ್ಷಕರು ಪ್ರೌಢಶಾಲೆಗೆ ಬಡ್ತಿ ಪಡೆದು ಕರ್ತವ್ಯಕ್ಕೆ ಹಾಜರಾದ ದಿನಾಂಕವನ್ನು ಪ್ರೌಢಶಾಲಾ ಸೇವೆಗೆ ಜೇಷ್ಠತಾ ದಿನಾಂಕವನ್ನಾಗಿ ಮೌಲ್ಯಮಾಪನಕ್ಕೆ ಪರಿಗಣಿಸುವುದು. ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆಗೆ ಸೇರಿದ ದಿನಾಂಕವನ್ನು ಮೌಲ್ಯಮಾಪನದ ನೊಂದಣಿಗೆ ಪರಿಗಣಿಸತಕ್ಕದ್ದಲ್ಲ.
- ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆಗೆ ಸೇರಿದ ದಿನಾಂಕವನ್ನೇ ಮೌಲ್ಯಮಾಪನದ ನೊಂದಣಿಗೆ ಸೇವೆಗೆ ಸೇರಿದ ದಿನಾಂಕವನ್ನಾಗಿ ಪರಿಗಣಿಸಿ ಮುಖ್ಯಶಿಕ್ಷಕರು ಕಳುಹಿಸಿದ್ದಲ್ಲಿ ಶಿಸ್ತುಕ್ರಮ ಜರುಗಿಸಲಾಗುವುದು.
- ಪ್ರಥಮ ಭಾಷೆ ಆಂಗ್ಲ ವಿಷಯವನ್ನು ಬೋಧಿಸುತ್ತಿರುವ ಸರ್ಕಾರಿ/ಅನುದಾನಿತ/ಅನುದಾನರಹಿತ ಶಾಲಾ ಅರ್ಹ ಶಿಕ್ಷಕರು ಕಡ್ಡಾಯವಾಗಿ ಮಂಡಳಿಯಲ್ಲಿ ನೊಂದಣಿ ಮಾಡಿಸುವುದು. ಹಾಗೂ ಸಂಬಂಧಿಸಿದ ಮುಖ್ಯಶಿಕ್ಷಕರು ಪ್ರಥಮ ಭಾಷೆ ಆಂಗ್ಲ ವಿಷಯದ ಅರ್ಹ ಶಿಕ್ಷಕರನ್ನು ಕಡ್ಡಾಯವಾಗಿ ನೊಂದಣಿ ಮಾಡಲು ಅಗತ್ಯಕ್ರಮವಹಿಸುವುದು.
- ರಾಜ್ಯದಲ್ಲಿರುವ ಆದರ್ಶ ವಿದ್ಯಾಲಯದ ಎಲ್ಲಾ ಶಿಕ್ಷಕರು ಕಡ್ಡಾಯವಾಗಿ ಮೌಲ್ಯಮಾಪನಕ್ಕೆ ನೋಂದಣಿ ಮಾಡಿಸುವುದು.
- ಮಂಡಳಿಯಿಂದ ಕಳುಹಿಸಿರುವ ಮೌಲ್ಯಮಾಪನದ ಚೆಕ್‌ಲಿಸ್ಟನ್ನು ಸಂಬಂಧಿಸಿದ ಶಾಲಾ ಮುಖ್ಯಶಿಕ್ಷಕರು ಪರಿಶೀಲಿಸಿ ಶಾಲೆಯಿಂದ ಶಿಕ್ಷಕರು ಬಿಟ್ಟುಹೋಗಿದ್ದಲ್ಲಿ ರದ್ದುಪಡಿಸುವುದು ಹಾಗೂ ಹೊಸದಾಗಿ ಶಾಲೆಗೆ ಶಿಕ್ಷಕರು ಸೇರ್ಪಡೆಯಾಗಿದ್ದಲ್ಲಿ ಚೆಕ್‌ಲಿಸ್ಟ್‌ನಲ್ಲಿ ಸೇವಾ ವಿವರದ ಮಾಹಿತಿಯೊಂದಿಗೆ ಸಲ್ಲಿಸುವುದು.
- ಮೌಲ್ಯಮಾಪನದ ಚೆಕ್‌ಲಿಸ್ಟ್‌ನಲ್ಲಿ ಕಡ್ಡಾಯವಾಗಿ ಶಾಲಾ ಮುಖ್ಯಶಿಕ್ಷಕರು ಸಹಿ ಮಾಡಿ ಮೊಹರು ಹಾಕುವುದು ಹಾಗೂ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳ ಮೇಲು ಸಹಿ ಪಡೆದು ಮೊಹರು ಹಾಕಿ ಕಳುಹಿಸುವುದು.
- ಕ್ಷೇತ್ರಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳು ಮೌಲ್ಯಮಾಪನಕ್ಕೆ ನೊಂದಣಿ ಮಾಡಿಸಲು ಚೆಕ್‌ಲಿಸ್ಟ್ ಸಲ್ಲಿಸಿದ್ದಾರೆಯೇ ಎಂಬುದನ್ನು ಖಾತ್ರಿ ಪಡಿಸಿಕೊಳ್ಳುವುದು.
- ಕ್ಷೇತ್ರಶಿಕ್ಷಣಾಧಿಕಾರಿಗಳು ಖಾಸಗಿ ಶಾಲೆಗಳಿಗೆ ಪರೀಕ್ಷೆಗೆ ಅವಕಾಶ ಮಾಡಿಕೊಡಲು ಅಧಿಕೃತ ಶಾಲೆಯೆಂದು ದೃಢೀಕರಿಸುವಾಗ ಕಡ್ಡಾಯವಾಗಿ ಮೌಲ್ಯಮಾಪನಕ್ಕೆ ನೊಂದಣಿ ಮಾಡಿಸಲು ಮೌಲ್ಯಮಾಪನದ ಶಿಕ್ಷಕರ ಸೇವಾ ವಿವರದ ಚೆಕ್‌ಲಿಸ್ಟ್‌ನ್ನು ಸಲ್ಲಿಸಿದ್ದಾರೆಯೇ ಎಂಬುದನ್ನು ಖಾತ್ರಿ ಪಡಿಸಿಕೊಂಡು ದೃಢೀಕರಣ ನೀಡತಕ್ಕದ್ದು.

22. ಸರ್ಕಾರದ ಆದೇಶ ಸಂಖ್ಯೆ:ಅಇ/47/ಟಿಎಆರ್/2014, ಬೆಂಗಳೂರು ದಿನಾಂಕ:22.12.2014 ರನ್ವಯ, ಸಹಾಯಧನ/ ಪ್ರೋತ್ಸಾಹಧನ /ಗೌರವಧನ ಮುಂತಾದವುಗಳನ್ನು RTGS / NEFT ಮುಖಾಂತರ ನೇರವಾಗಿ ಫಲಾನುಭವಿಗಳಿಗೆ ರಾಷ್ಟ್ರೀಯ ಬ್ಯಾಂಕ್ ಖಾತೆಗಳ ಮೂಲಕ ವಿತರಿಸುವಂತೆ ನಿರ್ದೇಶಿಸಿರುವ ಹಿನ್ನೆಲೆಯಲ್ಲಿ 2017ನೇ ಸಾಲಿನ ಮಾರ್ಚ್/ ಏಪ್ರಿಲ್ ಮಾಹೆಗಳ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಬ್ಯಾಂಕ್ ಖಾತೆ ಸಂಖ್ಯೆ, ಬ್ಯಾಂಕ್ ಹೆಸರು, ಐ.ಎಫ್.ಎಸ್. ಕೋಡ್ ಮುಂತಾದ ವಿವರಗಳನ್ನು ರಾಜ್ಯದ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು ತಮ್ಮಲ್ಲಿ ಸಂಗ್ರಹಿಸಿ ಇಟ್ಟುಕೊಂಡು, 2017ನೇ ಸಾಲಿನ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡ ನಂತರ, ಸದರಿ ಪರೀಕ್ಷೆಯಲ್ಲಿ ಶೇ 60ಕ್ಕಿಂತ ಹೆಚ್ಚು ಅಂಕಗಳಿಸಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಮಾಹಿತಿಯನ್ನು

ನೋಂದಣಿ ಸಂಖ್ಯೆಯೊಂದಿಗೆ ಬ್ಯಾಂಕ್ ಖಾತೆಯ ಮಾಹಿತಿಗಳನ್ನು ಲೆಕ್ಕಧಿಕಾರಿಗಳು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–03 ಇವರ ವಿಳಾಸಕ್ಕೆ ಕಳುಹಿಸಲು ಸೂಚಿಸಿದೆ.

***ವಿಶೇಷ ಸೂಚನೆ:*– ಎಸ್.ಎಸ್.ಎಲ್.ಸಿ. ಪರೀಕ್ಷಾ ಶುಲ್ಕವನ್ನು ಸುತ್ತೋಲೆಗೆ ಲಗತ್ತಿಸಿರುವ ಮಂಡಳಿಯ ನಿಗಧಿತ NEFT ಚಲನ್‌ನ್ನು ಉಪಯೋಗಿಸಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲೇ ಜಮಾ ಮಾಡಬೇಕು. ಯಾವುದೇ ಕಾರಣಕ್ಕೂ ಪರೀಕ್ಷಾ ಶುಲ್ಕವನ್ನು ಬ್ಯಾಂಕ್ ಹುಂಡಿಯ ಮೂಲಕ ಸಲ್ಲಿಸಬಾರದು.**

**2017ರ ಏಪ್ರಿಲ್ ಎಸ್.ಎಸ್.ಎಲ್.ಸಿ. ಪರೀಕ್ಷೆ ನಾಮಿನಲ್ ರೋಲ್ ಪ್ರಸ್ತಾವನೆ ಸಲ್ಲಿಸುವಾಗ ಕೆಳಕಂಡ ದಾಖಲೆಗಳನ್ನು ಸಲ್ಲಿಸುವುದು ಕಡ್ಡಾಯ:–**

1. ನಾಮಿನಲ್ ರೋಲ್–(ಪುಟ–15 ರಲ್ಲಿ ನಮೂದಿಸಿರುವ ನಮೂನೆಯಂತೆ).
2. ಶುಲ್ಕ ಪಾವತಿಸಿದ ಮೂಲ ನೆಫ್ಟ್ ಚಲನ್–(Original NEFT Challan)
3. ಅನುಬಂಧ–1 ರಿಂದ 10 ರವರೆಗೆ.
4. ಶಾಲಾ/ ಕಾಲೇಜು ಪ್ರಾರಂಭವಾದ ಬಗ್ಗೆ ಇಲಾಖಾ ಅನುಮತಿ.
5. ಇಲಾಖಾ ವತಿಯಿಂದ ಮಾನ್ಯತೆ ನವೀಕರಣದ ದೃಢೀಕೃತ ದಾಖಲಾತಿ.
6. ಅಧಿಕೃತವಾಗಿ ಶಾಲೆ ನಡೆಯುತ್ತಿರುವ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕರಣ ಪತ್ರ(ಅನುಬಂಧ–10 ರಲ್ಲಿದ್ದಂತೆ).
7. ಮುಖಪುಟ(Covering Letter)

**ಏಪ್ರಿಲ್–2017ರ ಎಸ್.ಎಸ್.ಎಲ್.ಸಿ. ಪರೀಕ್ಷಾ ಅರ್ಜಿಗಳನ್ನು ಮಂಡಳಿಯ ಈ ಕೆಳಗಿನ ಅಧಿಕಾರಿಗಳಿಗೆ ದಿನಾಂಕ:31.08.2016 ರೊಳಗಾಗಿ ತಲುಪಿಸಬೇಕು.**

| ಕ್ರ ಸಂ | ಶಾಖೆ | ಪರಿಶೀಲನಾ ಅಧಿಕಾರಿಗಳು ಶ್ರೀಮತಿ: ಶ್ರೀ | ಜಿಲ್ಲೆ | ದೂರವಾಣಿ ಸಂಖ್ಯೆ | ಕಛೇರಿಯ ದೂರವಾಣಿ |
|---|---|---|---|---|---|
| 1 | ಎಫ್ | ಕೆ.ಎನ್.ನಾಗರಾಜು, ಸಹಾಯಕ ನಿರ್ದೇಶಕರು | ಬೆಂಗಳೂರು ದಕ್ಷಿಣ / ಹಾವೇರಿ / ಶಿವಮೊಗ್ಗ | 9019242936 | 08023345579 |
| 2 | ಜಿ | ಭೀಮಸೇನರಾವ್ ಹೆಚ್ ಸಹಾಯಕ ನಿರ್ದೇಶಕರು | ಬೆಂಗಳೂರು ಉತ್ತರ / ಚಿಕ್ಕಬಳ್ಳಾಪುರ / ಕೋಲಾರ | 7259717221 | 08023345579 |
| 3 | ಹೆಚ್ | ಪಾರ್ವತಿ ಬಿ.ಯು ಸಹಾಯಕ ನಿರ್ದೇಶಕರು | ಚಿತ್ರದುರ್ಗ/ದಾವಣಗೆರೆ/ಬೆಂಗಳೂರು ಗ್ರಾಮಾಂತರ/ರಾಮನಗರ | 9480611852 | 08023344676 |
| 4 | ಐ | ಎಂ.ಜಿ.ಜಯಪ್ರಕಾಶ್, ಸಹಾಯಕ ನಿರ್ದೇಶಕರು | ಚಾಮರಾಜನಗರ/ಮಂಡ್ಯ/ ತುಮಕೂರು/ ಮಧುಗಿರಿ | 9845401773 | 08023344676 |
| 5 | ಜೆ | ಅನಿತಾ.ಆರ್. ಸಹಾಯಕ ನಿರ್ದೇಶಕರು | ಮೈಸೂರು/ ಹಾಸನ/ ಚಿಕ್ಕಮಗಳೂರು/ ಕೊಡಗು | 9844605881 | 08023344676 |
| 6 | ಕೆ | ಸೀತಾಲಕ್ಷ್ಮೀ, ಸಹಾಯಕ ನಿರ್ದೇಶಕರು | ಗದಗ/ ಕೊಪ್ಪಳ/ ಬಿಜಾಪುರ/ ಬಾಗಲಕೋಟೆ | 9480590754 | 08023344676 |
| 7 | ಎಲ್ | ಚಂದ್ರಕಾಂತಮ್ಮ, ಸಹಾಯಕ ನಿರ್ದೇಶಕರು | ಧಾರವಾಡ/ ಚಿಕ್ಕೋಡಿ/ ಬೆಳಗಾವಿ | 8971124869 | 08023344676 |
| 8 | ಎಂ | ಎಂ.ಜಿ.ಜಯಪ್ರಕಾಶ್, ಸಹಾಯಕ ನಿರ್ದೇಶಕರು | ಮಂಗಳೂರು/ ಉಡುಪಿ/ ಕಾರವಾರ/ಶಿರಸಿ/ ರಾಯಚೂರು | 9845401773 | 08023344676 |
| 9 | ಎನ್ | ಸ್ವೀಟಿ ಕಲಾಂಜಲಿ ಟಿ ಹಿರಿಯಸಹಾಯಕ ನಿರ್ದೇಶಕರು | ಗುಲ್ಬರ್ಗಾ/ ಯಾದಗಿರಿ/ ಬೀದರ್/ ಬಳ್ಳಾರಿ | 9845150413 | 08023345579 |

ಫ್ಯಾಕ್ಸ್ : 080–23347670 ಲೆಕ್ಕಾಧಿಕಾರಿಗಳು :9844361312, 080–23561271
ನಿರ್ದೇಶಕರು : 080–23349434
ಕಾರ್ಯದರ್ಶಿಗಳು : 080–23445579
ಉಪನಿರ್ದೇಶಕರು(ಆಡಳಿತ) : 080–23562267

**ನಿರ್ದೇಶಕರು ಪರೀಕ್ಷೆಗಳು**

**ಪ್ರತಿಯನ್ನು ಈ ಕೆಳಕಂಡವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.**

1. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅಂಗೀಕೃತ ಪ್ರೌಢ ಶಾಲೆ/ಸಂಯುಕ್ತ ಪದವಿ ಪೂರ್ವ ಕಾಲೇಜು ಮುಖ್ಯಸ್ಥರುಗಳಿಗೆ (ಪರಿಶೀಲನಾ ಶಾಖೆಗಳ ಮೂಲಕ)
2. ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಆದರ ಪೂರ್ವಕವಾಗಿ,
3. ಹೆಚ್ಚುವರಿ ಆಯುಕ್ತರು,ಧಾರವಾಡ/ಗುಲ್ಬರ್ಗಾ.(ಪರಿಶೀಲನಾ ಶಾಖೆಗಳ ಮೂಲಕ)ಇವರಿಗೆ ಆದರ ಪೂರ್ವಕವಾಗಿ,
4. ನಿರ್ದೇಶಕರು,ಅಂಗವಿಕಲಮತ್ತು ಹಿರಿಯ ನಾಗರೀಕ ಕಲ್ಯಾಣ ಇಲಾಖೆ,ಬೆಂ. ಇವರಿಗೆ ವಂದನಾ ಪೂರ್ವಕವಾಗಿ.
5. ರಾಜ್ಯದ ಎಲ್ಲಾ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಕ್ರಮಕ್ಕಾಗಿ (ಪರಿಶೀಲನಾ ಶಾಖೆಗಳ ಮೂಲಕ)
6. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ,ಇವರ ಮಾಹಿತಿಗಾಗಿ ಹಾಗೂ ಖಾಸಗಿ ಅಭ್ಯರ್ಥಿಗಳನ್ನು ಮತ್ತು ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬರುವ ವಿದ್ಯಾರ್ಥಿಗಳನ್ನು ಈ ಹಿಂದಿನ ವರ್ಷದಂತೆ ಶುಲ್ಕ ಪಡೆದು, ನೋಂದಣಿ ಮಾಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು ಹಾಗೂ ನಮೂನೆ 6 ಮತ್ತು 7 ನ್ನು ಭರ್ತಿ ಮಾಡಿ ಮಂಡಳಿಗೆ ಸಲ್ಲಿಸಲು ಅಗತ್ಯ ಕ್ರಮ ಕೈಗೊಳ್ಳುವುದು ಮತ್ತು ಉಪ ನಿರ್ದೇಶಕರ ಕಚೇರಿಯಲ್ಲಿ ನಾಮಾಂಕಿತರಾದ ಎಸ್.ಎಸ್.ಎಲ್.ಸಿ. ಪರೀಕ್ಷಾ ನೋಡಲ್ ಅಧಿಕಾರಿಯವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ. (ಪರಿಶೀಲನಾ ಶಾಖೆಗಳ ಮೂಲಕ)
7. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ. (ಪರಿಶೀಲನಾ ಶಾಖೆಗಳ ಮೂಲಕ) ಅವರ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳ ಬಗ್ಗೆ ಮಾಹಿತಿ ಹಾಗೂ ದೃಢೀಕರಣ ನೀಡಲು ತಿಳಿಸಿದೆ.
8. ಮಂಡಳಿಯಲ್ಲಿನ ಆಪ್ತ ಶಾಖೆಗೆ/ ಎಲ್ಲಾ ಶಾಖಾಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಅಗತ್ಯಕ್ರಮಕ್ಕಾಗಿ
9. ಮಂಡಳಿಯ ವೆಬ್‌ಸೈಟ್ 10. ಶಿಕ್ಷಣ ವಾರ್ತೆ 11. ಕಛೇರಿ ಪ್ರತಿ.

## <u>ಅನುಬಂಧ – ಅ</u>

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.**
**<u>ಎಪ್ರಿಲ್–2017ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಭಾಷಾ ಸಂಯೋಜನೆಯ ವಿಷಯ ಸಂಕೇತಗಳು</u>**

ಸರ್ಕಾರದ ಆದೇಶ ಸಂಖ್ಯೆ: ಮ.ಮ.ಅ:65:ಪಿಹೆಚ್‌ಪಿ:2000 ದಿನಾಂಕ:10.03.2000ದ ಅನ್ವಯ
**ಕಿವುಡ ಮತ್ತು ಮೂಗ** ಹಾಗೂ **ಕಲಿಕಾ ನ್ಯೂನತೆ ಹೊಂದಿದ** ವಿದ್ಯಾರ್ಥಿಗಳಿಗೆ:
**ಶಿಕ್ಷಣ ಮಾಧ್ಯಮದ ಒಂದು ಭಾಷೆ ಹೊರತು ಪಡಿಸಿ ಉಳಿದ ಎರಡು ಭಾಷೆಗಳ ಕಲಿಕೆಯಿಂದ ವಿನಾಯಿತಿ ಇದೆ.**

| | | |
|---|---|---|
| 01 | 31 | 61 |
| 01 | 31 | 64 |
| 01 | 31 | 65 |
| 01 | 31 | 66 |
| 01 | 31 | 67 |
| 01 | 31 | 68 |
| 01 | 31 | 69 |

| | | |
|---|---|---|
| 04 | 31 | 62 |
| 04 | 33 | 61 |
| 04 | 33 | 63 |
| 04 | 33 | 64 |
| 04 | 33 | 65 |
| 04 | 33 | 66 |
| 04 | 33 | 67 |
| 04 | 33 | 68 |
| 04 | 33 | 69 |

| | | |
|---|---|---|
| 06 | 31 | 62 |
| 06 | 33 | 63 |
| 06 | 33 | 64 |
| 06 | 33 | 65 |
| 06 | 33 | 66 |
| 06 | 33 | 67 |
| 06 | 33 | 68 |
| 06 | 33 | 69 |

| | | |
|---|---|---|
| 08 | 31 | 62 |
| 08 | 33 | 61 |
| 08 | 33 | 63 |
| 08 | 33 | 64 |
| 08 | 33 | 65 |
| 08 | 33 | 66 |
| 08 | 33 | 67 |
| 08 | 33 | 68 |
| 08 | 33 | 69 |

| | | |
|---|---|---|
| 10 | 31 | 62 |
| 10 | 33 | 61 |
| 10 | 33 | 63 |
| 10 | 33 | 64 |
| 10 | 33 | 65 |
| 10 | 33 | 66 |
| 10 | 33 | 67 |
| 10 | 33 | 68 |
| 10 | 33 | 69 |

| | | |
|---|---|---|
| 12 | 31 | 62 |
| 12 | 33 | 61 |
| 12 | 33 | 63 |
| 12 | 33 | 64 |
| 12 | 33 | 65 |
| 12 | 33 | 67 |
| 12 | 33 | 68 |
| 12 | 33 | 69 |

| | | |
|---|---|---|
| 14 | 33 | 61 |
| 14 | 33 | 64 |
| 14 | 33 | 65 |
| 14 | 33 | 66 |
| 14 | 33 | 67 |
| 14 | 33 | 68 |
| 14 | 33 | 69 |

| | | |
|---|---|---|
| 16 | 31 | 62 |
| 16 | 33 | 61 |
| 16 | 33 | 63 |
| 16 | 33 | 64 |
| 16 | 33 | 65 |
| 16 | 33 | 66 |
| 16 | 33 | 68 |
| 16 | 33 | 69 |

ಅಂಧ ವಿದ್ಯಾರ್ಥಿಗಳಿಗೆ ಕೋರ್ ವಿಷಯಗಳ ಸಂಯೋಜನೆ (ಕಡ್ಡಾಯವಲ್ಲ – ಐಚ್ಛಿಕ) (ತ್ರಿ ಭಾಷೆಗಳು ಕಡ್ಡಾಯ) ಪುನರಾವರ್ತಿತ ವಿದ್ಯಾರ್ಥಿಗಳಿಗೆ

ಕಲಿಕಾ ನ್ಯೂನತೆ ಹೊಂದಿದ ವಿದ್ಯಾರ್ಥಿಗಳಿಗೆ ಕೋರ್ ವಿಷಯಗಳ ಸಂಯೋಜನೆ (ಕಡ್ಡಾಯವಲ್ಲ – ಐಚ್ಛಿಕ) ಪುನರಾವರ್ತಿತ ವಿದ್ಯಾರ್ಥಿಗಳು

| | | |
|---|---|---|
| 91 | 92 | 85 |
| 91 | 93 | 85 |
| 91 | 94 | 85 |
| 92 | 91 | 85 |
| 92 | 93 | 85 |
| 92 | 94 | 85 |
| 93 | 91 | 85 |
| 93 | 92 | 85 |
| 93 | 94 | 85 |

| | | |
|---|---|---|
| 91 | 92 | 85 |
| 91 | 93 | 85 |
| 91 | 94 | 85 |
| 92 | 91 | 85 |
| 92 | 93 | 85 |
| 92 | 94 | 85 |
| 93 | 91 | 85 |
| 93 | 92 | 85 |
| 93 | 94 | 85 |

| ಸಿ.ಸಿ.ಇ. ಪದ್ಧತಿಯ CCERF/CCERR ವಿದ್ಯಾರ್ಥಿಗಳಿಗೆ | | |
|---|---|---|
| 95 | 96 | 85 |
| 95 | 97 | 85 |
| 95 | 98 | 85 |
| 96 | 95 | 85 |
| 96 | 97 | 85 |
| 96 | 98 | 85 |
| 97 | 95 | 85 |
| 97 | 96 | 85 |
| 97 | 98 | 85 |

**ಭಾಷಾ ವಿಷಯ ಸಂಕೇತ ಸೂಚಿ**:– 01/33/62–ಕನ್ನಡ, 14/31/63–ಇಂಗ್ಲೀಷ್, 16/67–ಸಂಸ್ಕೃತ, 04–ತೆಲುಗು, 08–ಮರಾಠಿ, 10–ತಮಿಳು, 61/06–ಹಿಂದಿ, 12/66–ಉರ್ದು, 64–ಅರೇಬಿಕ್, 65–ಪರ್ಷಿಯನ್, 68–ಕೊಂಕಣಿ(ದೇವನಾಗರಿ–ಕನ್ನಡ), 69–ತುಳು.

ಕೋರ್ ವಿಷಯಗಳಲ್ಲಿ ಬದಲಿಸಿಕೊಳ್ಳಬಹುದಾದ ವಿಷಯ ಸಂಕೇತ ಸೂಚಿ:–

91– ಭಾರತೀಯ ಸಮಾಜ ಶಾಸ್ತ್ರ, 92–ಭಾರತೀಯ ಅರ್ಥ ಶಾಸ್ತ್ರ, 93–ಭಾ.ರಾ ಮತ್ತು ಪೌ.ನೀತಿ, 94–ಹಿಂದೂಸ್ಥಾನಿ/ಕರ್ನಾಟಕ ಸಂಗೀತ –– ಪುನರಾವರ್ತಿತ ಅಭ್ಯರ್ಥಿಗಳಿಗೆ. 95–ಭಾರತೀಯ ಸಮಾಜ ಶಾಸ್ತ್ರ, 96–ಭಾ.ಅ.ಶಾಸ್ತ್ರ, 97–ಭಾ.ರಾ ಮತ್ತು ಪೌ.ನೀತಿ, 98–ಹಿಂದೂಸ್ಥಾನಿ/ಕರ್ನಾಟಕ ಸಂಗೀತ –– CCERF+CCERR ಅಭ್ಯರ್ಥಿಗಳಿಗೆ.

# ಅನುಬಂಧ–1

(ಪ್ರಥಮ ಬಾರಿಗೆ ಪರೀಕ್ಷೆಗೆ ಕುಳಿತುಕೊಳ್ಳುವ ಶಾಲಾ ವಿದ್ಯಾರ್ಥಿಗಳಿಗಾಗಿ)

## (REGULAR FRESH CANDIDATES ) (CCE RF)

**ಶಾಲೆಯ ಹೆಸರು** :________________________ **ಶಾಲಾ ಸಂಕೇತ** …….

:________________________

:________________________

| ಕ್ರ ಸಂ | ವಿದ್ಯಾರ್ಥಿಯ ಹೆಸರು | ಲಿಂಗ | | ಜನ್ಮ ದಿನಾಂಕ | ಜಾತಿಯ ಸಂಕೇತ | ಪರೀಕ್ಷಾ ಶುಲ್ಕದ ಮೊತ್ತ | ಲ್ಯಾಮಿನೇ ಷನ್ ಶುಲ್ಕದ ಮೊತ್ತ | ಒಟ್ಟು ಮೊತ್ತ ರೂ | ರಾಜ್ಯ ಪಠ್ಯ ಕ್ರಮಕ್ಕೆ ವಲಸೆ ಬಂದ ವಿದ್ಯಾರ್ಥಿಯೇ |
|---|---|---|---|---|---|---|---|---|---|
| | | ಗಂ | ಹೆ | | | | | | |
| 1 | 2 | 3 | 4 | 5 | 6 | 7 | 8 | 9 | 10 |
| | | | | | | | | | |
| | | | | | | | | | |

**ವಿಶೇಷ ಸೂಚನೆ:** ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳ ಬಗ್ಗೆ ಶುಲ್ಕ ವಿನಾಯಿತಿ ಎಂದು ಕೆಂಪು ಶಾಯಿಯಲ್ಲಿ ತಪ್ಪದೇ ಷರಾ ಬರೆಯಬೇಕು.

**ವಲಸೆ ಬಂದ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಕಾಲಂ 10 ರಲ್ಲಿ ಹೌದು ಅಥವಾ ಇಲ್ಲಾ ಎಂದು ನಮೂದಿಸುವುದು. ಹೌದಾದಲ್ಲಿ ರಾಜ್ಯ ಪಠ್ಯಕ್ರಮಕ್ಕೆ ಅನುಮತಿಸಲಾದ ಜಿಲ್ಲಾ ಉ.ನಿ.ಕರು ನೀಡಿದ ಆದೇಶದ ಪ್ರತಿ ಲಗತ್ತಿಸುವುದು.**

**ಜಾತಿ ಸಂಕೇತ:** 01. ಪರಿಶಿಷ್ಟ ಜಾತಿ 02. ಪರಿಶಿಷ್ಟ ಪಂಗಡ **ಹಿಂದುಳಿದ ವರ್ಗಗಳ ಗುಂಪುಗಳು:** 03. ಪ್ರವರ್ಗ–1, 04. 2ಎ, 05. 2ಬಿ, 06. 3ಎ, 07. 3ಬಿ, 08. ಸಾಮಾನ್ಯ

**ಘೋಷ್ವಾರೆ**

| ಕ್ರಸಂ | ವಿವರ | ಬಾಲಕರು | ಬಾಲಕಿಯರು | ಒಟ್ಟು |
|---|---|---|---|---|
| 1 | ಪರಿಶಿಷ್ಟ ಜಾತಿ | | | |
| 2 | ಪರಿಶಿಷ್ಟ ಪಂಗಡ | | | |
| 3 | ಪ್ರವರ್ಗ–1 | | | |
| 4 | 2ಎ | | | |
| 5 | 2ಬಿ | | | |
| 6 | 3ಎ | | | |
| 7 | 3ಬಿ | | | |
| 8 | ಸಾಮಾನ್ಯ | | | |
| 9 | ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹೆಣ್ಣುಮಕ್ಕಳ ಸಂಖ್ಯೆ | | | |

| | | | | |
|---|---|---|---|---|
| | (ಕ್ರ.ಸಂ. 1,2 ರಲ್ಲಿರುವ ಬಾಲಕಿಯರನ್ನು ಹೊರತುಪಡಿಸಿ) | | | |
| 10 | ಕಿವುಡ/ಮೂಗ/ಅಂಧತ್ವ/ಅರ್ಭಧ ರೋಗಗಳಿರುವ ವಿದ್ಯಾರ್ಥಿಗಳ ಸಂಖ್ಯೆ | | | |
| 11 | ಶುಲ್ಕ ನೀಡಿರುವವರ ಸಂಖ್ಯೆ | | | |
| 12 | ಒಟ್ಟು | | | |

ಮುಖ್ಯೋಪಾಧ್ಯಾಯರ ಸಹಿ
ಶಾಲೆಯ ಮೊಹರಿನೊಂದಿಗೆ

## ಅನುಬಂಧ–2

**(ಪ್ರಥಮ ಬಾರಿಗೆ ಪರೀಕ್ಷೆಗೆ ಕುಳಿತುಕೊಳ್ಳುವ ಖಾಸಗಿ ವಿದ್ಯಾರ್ಥಿಗಳಿಗಾಗಿ)**

**(PRIVATE FRESH CANDIDATES) (CCE PF)**

**ಶಾಲೆಯ ಹೆಸರು** :____________________________

:____________________________

:____________________________

**ಶಾಲಾ ಸಂಕೇತ** :____________________________

| ಕ್ರ ಸಂ | ವಿದ್ಯಾರ್ಥಿಯ ಹೆಸರು | ಲಿಂಗ | | ಜನ್ಮ ದಿನಾಂಕ | ಜಾತಿಯ ಸಂಕೇತ | ಪರೀಕ್ಷಾ ಶುಲ್ಕದ ಮೊತ್ತ | ಲ್ಯಾಮಿನೇಷನ್ ಶುಲ್ಕದ ಮೊತ್ತ | ಒಟ್ಟು ಮೊತ್ತ ರೂ. |
|---|---|---|---|---|---|---|---|---|
| | | ಗಂ | ಹೆ | | | | | |
| **1** | **2** | **3** | | **4** | **5** | **6** | **7** | **8** |
| | | | | | | | | |
| | | | | | | | | |

**ವಿಶೇಷ ಸೂಚನೆ:** ಪರೀಕ್ಷಾ ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳ ಬಗ್ಗೆ ಶುಲ್ಕ ವಿನಾಯಿತಿ ಎಂದು ಕೆಂಪು ಶಾಯಿಯಲ್ಲಿ ತಪ್ಪದೇ ಷರಾ ಬರೆಯಬೇಕು.

**ಜಾತಿ ಸಂಕೇತ:** 01. ಪರಿಶಿಷ್ಟ ಜಾತಿ 02. ಪರಿಶಿಷ್ಟ ಪಂಗಡ **ಹಿಂದುಳಿದ ವರ್ಗಗಳ ಗುಂಪುಗಳು:** 03. ಪ್ರವರ್ಗ–1, 04. 2ಎ, 05. 2ಬಿ, 06. 3ಎ, 07. 3ಬಿ, 08. ಸಾಮಾನ್ಯ

**ಘೋಷ್ವಾರೆ**

| ಕ್ರಸಂ | ವಿವರ | ಬಾಲಕರು | ಬಾಲಕಿಯರು | ಒಟ್ಟು |
|---|---|---|---|---|
| 1 | ಪರಿಶಿಷ್ಟ ಜಾತಿ | | | |
| 2 | ಪರಿಶಿಷ್ಟ ಪಂಗಡ | | | |
| 3 | ಪ್ರವರ್ಗ–1 | | | |
| 4 | 2ಎ | | | |
| 5 | 2ಬಿ | | | |
| 6 | 3ಎ | | | |
| 7 | 3ಬಿ | | | |
| 8 | ಸಾಮಾನ್ಯ | | | |
| 9 | ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹೆಣ್ಣುಮಕ್ಕಳ ಸಂಖ್ಯೆ (ಕ್ರ.ಸಂ. 1,2 ರಲ್ಲಿರುವ ಬಾಲಕಿಯರನ್ನು ಹೊರತುಪಡಿಸಿ) | | | |

| | | | | |
|---|---|---|---|---|
| 10 | ಕಿವುಡ/ಮೂಗ/ಅಂಧತ್ವ/ಅರ್ಧಘ ರೋಗಗಳಿರುವ ವಿದ್ಯಾರ್ಥಿಗಳ ಸಂಖ್ಯೆ | | | |
| 11 | ಶುಲ್ಕ ನೀಡಿರುವವರ ಸಂಖ್ಯೆ | | | |
| 12 | ಒಟ್ಟು | | | |

ಮುಖ್ಯೋಪಾಧ್ಯಾಯರ ಸಹಿ
ಶಾಲೆಯ ಮೊಹರಿನೊಂದಿಗೆ

## ಅನುಬಂಧ–3

**(ರೆಗ್ಯುಲರ್ ಪುನರಾವರ್ತಿತ ವಿದ್ಯಾರ್ಥಿಗಳಿಗಾಗಿ)**

## CCE REGULAR REPEATER (CCERR)

ಶಾಲೆಯ ಹೆಸರು :________________________

:________________________

ಶಾಲಾ ಸಂಕೇತ :________________________

| ಕ್ರ ಸಂ | ಪುನರಾವರ್ತಿತ ವಿದ್ಯಾರ್ಥಿಯ ಹೆಸರು | ಎಂ.ಎಸ್.ಎ ಲಗತ್ತಿಸ ಲಾಗಿದೆಯೇ | ಏಪ್ರಿಲ್–17ರ ಪರೀಕ್ಷೆಗೆ ತೆಗೆದುಕೊಳ್ಳುತ್ತಿರುವ ವಿಷಯಗಳ ವಿವರ | ಪರೀಕ್ಷಾ ಶುಲ್ಕದ ಮೊತ್ತ | ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು |
|---|---|---|---|---|---|
| **1** | **2** | **3** | **4** | **5** | **6** |
| | | | | | |
| | | | | | |

**ಘೋಷ್ವಾರೆ**

| ಕ್ರ.ಸಂ. | ವಿವರ | ಬಾಲಕರು | ಬಾಲಕಿಯರು |
|---|---|---|---|
| | | ಏಪ್ರಿಲ್–2015ರ ಮತ್ತು ನಂತರದ ಸಿ.ಸಿ.ಇ. ರೆಗ್ಯುಲರ್ ಪುನರಾವರ್ತಿತ ವಿದ್ಯಾರ್ಥಿಗಳ ಸಂಖ್ಯೆ | ಏಪ್ರಿಲ್–2015ರ ಮತ್ತು ನಂತರದ ಸಿ.ಸಿ.ಇ. ರೆಗ್ಯುಲರ್ ಪುನರಾವರ್ತಿತ ವಿದ್ಯಾರ್ಥಿಗಳ ಸಂಖ್ಯೆ |
| 1 | ಪರಿಶಿಷ್ಟ ಜಾತಿ | | |
| 2 | ಪರಿಶಿಷ್ಟ ಪಂಗಡ | | |
| 3 | ಪ್ರವರ್ಗ–1 | | |
| 4 | 2ಎ | | |
| 5 | 2ಬಿ | | |
| 6 | 3ಎ | | |
| 7 | 3ಬಿ | | |
| 8 | ಸಾಮಾನ್ಯ | | |
| 9 | ಶುಲ್ಕ ನೀಡಿರುವವರ ಸಂಖ್ಯೆ | | |
| 10 | ಒಟ್ಟು | | |

**ವಿಶೇಷ ಸೂಚನೆ:–**

**1. ಎಂ.ಎಸ್.ಎ. ಇಲ್ಲದಿದ್ದರೆ ಪರೀಕ್ಷಾ ಶುಲ್ಕ ಸ್ವೀಕರಿಸುವಂತಿಲ್ಲ.**

**2. ಭಾವಚಿತ್ರ ರಹಿತ ಎಂ.ಎಸ್.ಎ. ಗಳನ್ನು ತಿರಸ್ಕರಿಸಲಾಗುವುದು.**

**3. ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿ/ ವಿದ್ಯಾರ್ಥಿನಿಯರ ಮಾಹಿತಿಯನ್ನು ಕೆಂಪು ಶಾಹಿಯಲ್ಲಿ ಗುರುತು ಮಾಡತಕ್ಕದ್ದು.**

ಮೇಲೆ ತಿಳಿಸಿದ ಎಲ್ಲಾ ವಿಶೇಷ ಸೂಚನೆಗಳನ್ನು ಪಾಲಿಸಲಾಗಿದೆ ಎಂದು ಪ್ರಮಾಣೀಕರಿಸಿದೆ.

ಮುಖ್ಯೋಪಾಧ್ಯಾಯರ ಸಹಿ
ಶಾಲೆಯ ಮೊಹರಿನೊಂದಿಗೆ.

## ಅನುಬಂಧ–4

**(ರೆಗ್ಯುಲರ್ ಪುನರಾವರ್ತಿತ ವಿದ್ಯಾರ್ಥಿಗಳಿಗಾಗಿ) REGULAR REPEATER (RR)**

ಶಾಲೆಯ ಹೆಸರು :________________

:________________

ಶಾಲಾ ಸಂಕೇತ :________________

| ಕ್ರ ಸಂ | ಖಾಸಗಿ ಪುನರಾವರ್ತಿತ ವಿದ್ಯಾರ್ಥಿಯ ಹೆಸರು | ಎಂ.ಎಸ್.ಎ ಲಗತ್ತಿಸ ಲಾಗಿದೆಯೇ | ಏಪ್ರಿಲ್–17ರ ಪರೀಕ್ಷೆಗೆ ತೆಗೆದುಕೊಳ್ಳುತ್ತಿರುವ ವಿಷಯಗಳು ವಿವರ | ಪರೀಕ್ಷಾ ಶುಲ್ಕದ ಮೊತ್ತ | ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು |
|---|---|---|---|---|---|
| 1 | 2 | 3 | 4 | 5 | 6 |
| | | | | | |

**ಘೋಷ್ವಾರೆ**

| ಕ್ರ ಸಂ | ವಿವರ | ಬಾಲಕರು | | ಬಾಲಕಿಯರು | | ಒಟ್ಟು | |
|---|---|---|---|---|---|---|---|
| | | ಜುಲೈ–2002ರ ಮತ್ತು ಹಿಂದಿನ ಪುನರಾವರ್ತಿತ ವಿದ್ಯಾರ್ಥಿಗಳ ಸಂಖ್ಯೆ | ಏಪ್ರಿಲ್–2003ರ ಮತ್ತು ನಂತರದ ಪುನರಾವರ್ತಿತ ವಿದ್ಯಾರ್ಥಿಗಳ ಸಂಖ್ಯೆ | ಜುಲೈ–2002ರ ಮತ್ತು ಹಿಂದಿನ ಪುನರಾವರ್ತಿತ ವಿದ್ಯಾರ್ಥಿನಿಯರ ಸಂಖ್ಯೆ | ಏಪ್ರಿಲ್–2003ರ ಮತ್ತು ನಂತರದ ಪುನರಾವರ್ತಿತ ವಿದ್ಯಾರ್ಥಿನಿಯರ ಸಂಖ್ಯೆ | ಬಾಲಕರು | ಬಾಲಕಿಯರು |
| 1 | ಪರಿಶಿಷ್ಟ ಜಾತಿ | | | | | | |
| 2 | ಪರಿಶಿಷ್ಟ ಪಂಗಡ | | | | | | |
| 3 | ಪ್ರವರ್ಗ–1 | | | | | | |
| 4 | 2ಎ | | | | | | |
| 5 | 2ಬಿ | | | | | | |
| 6 | 3ಎ | | | | | | |
| 7 | 3ಬಿ | | | | | | |
| 8 | ಸಾಮಾನ್ಯ | | | | | | |
| 9 | ಶುಲ್ಕ ನೀಡಿರುವವರ ಸಂಖ್ಯೆ | | | | | | |
| 10 | ಒಟ್ಟು | | | | | | |

<u>ವಿಶೇಷ ಸೂಚನೆ:</u>

1. ಎಂ.ಎಸ್.ಎ ಇಲ್ಲದಿದ್ದರೆ ಪರೀಕ್ಷಾ ಶುಲ್ಕ ಸ್ವೀಕರಿಸುವಂತಿಲ್ಲ.
2. ಭಾವಚಿತ್ರ ರಹಿತ ಎಂ.ಎಸ್.ಎ. ಗಳನ್ನು ತಿರಸ್ಕರಿಸಲಾಗುವುದು.
3. ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿ/ ವಿದ್ಯಾರ್ಥಿನಿಯರ ಮಾಹಿತಿಯನ್ನು ಕೆಂಪು ಶಾಹಿಯಲ್ಲಿ ಗುರುತು ಮಾಡತಕ್ಕದ್ದು.

ಮೇಲೆ ತಿಳಿಸಿದ ಎಲ್ಲಾ ವಿಶೇಷ ಸೂಚನೆಗಳನ್ನು ಪಾಲಿಸಲಾಗಿದೆ ಎಂದು ಪ್ರಮಾಣೀಕರಿಸಿದೆ.

ಮುಖ್ಯೋಪಾಧ್ಯಾಯರ ಸಹಿ
ಶಾಲೆಯ ಮೊಹರಿನೊಂದಿಗೆ

## ಅನುಬಂಧ–5

(ರೆಗ್ಯುಲರ್ ಪುನರಾವರ್ತಿತ ವಿದ್ಯಾರ್ಥಿಗಳಿಗಾಗಿ)

## CCE REGULAR REPEATER (CCEPR)

ಶಾಲೆಯ ಹೆಸರು :________________

:________________

ಶಾಲಾ ಸಂಕೇತ :________________

| ಕ್ರ. ಸಂ. | ಪುನರಾವರ್ತಿತ ವಿದ್ಯಾರ್ಥಿಯ ಹೆಸರು | ಎಂ.ಎಸ್.ಎ. ಲಗತ್ತಿಸ ಲಾಗಿದೆಯೇ | ಏಪ್ರಿಲ್–17ರ ಪರೀಕ್ಷೆಗೆ ತೆಗೆದುಕೊಳ್ಳುತ್ತಿರುವ ವಿಷಯಗಳ ವಿವರ | ಪರೀಕ್ಷಾ ಶುಲ್ಕದ ಮೊತ್ತ | ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು |
|---|---|---|---|---|---|
| 1 | 2 | 3 | 4 | 5 | 6 |
| | | | | | |

<u>ಘೋಷ್ವಾರೆ</u>

| ಕ್ರ. ಸಂ. | ವಿವರ | ಬಾಲಕರು | ಬಾಲಕಿಯರು |
|---|---|---|---|
| | | ಏಪ್ರಿಲ್–2015ರ ಮತ್ತು ನಂತರದ ಸಿ.ಸಿ.ಇ. ಖಾಸಗಿ ಪುನರಾವರ್ತಿತ ವಿದ್ಯಾರ್ಥಿಗಳ ಸಂಖ್ಯೆ | ಏಪ್ರಿಲ್–2015ರ ಮತ್ತು ನಂತರದ ಸಿ.ಸಿ.ಇ. ಖಾಸಗಿ ಪುನರಾವರ್ತಿತ ವಿದ್ಯಾರ್ಥಿಗಳ ಸಂಖ್ಯೆ |
| 1 | ಪರಿಶಿಷ್ಟ ಜಾತಿ | | |
| 2 | ಪರಿಶಿಷ್ಟ ಪಂಗಡ | | |
| 3 | ಪ್ರವರ್ಗ–1 | | |
| 4 | 2ಎ | | |
| 5 | 2ಬಿ | | |
| 6 | 3ಎ | | |
| 7 | 3ಬಿ | | |
| 8 | ಸಾಮಾನ್ಯ | | |
| 9 | ಶುಲ್ಕ ನೀಡಿರುವವರ ಸಂಖ್ಯೆ | | |
| 10 | ಒಟ್ಟು | | |

<u>ವಿಶೇಷ ಸೂಚನೆ</u>:–

1. ಎಂ.ಎಸ್.ಎ. ಇಲ್ಲದಿದ್ದರೆ ಪರೀಕ್ಷಾ ಶುಲ್ಕ ಸ್ವೀಕರಿಸುವಂತಿಲ್ಲ.
2. ಭಾವಚಿತ್ರ ರಹಿತ ಎಂ.ಎಸ್.ಎ. ಗಳನ್ನು ತಿರಸ್ಕರಿಸಲಾಗುವುದು.
3. ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿ/ ವಿದ್ಯಾರ್ಥಿನಿಯರ ಮಾಹಿತಿಯನ್ನು ಕೆಂಪು ಶಾಹಿಯಲ್ಲಿ ಗುರುತು ಮಾಡತಕ್ಕದ್ದು.

ಮೇಲೆ ತಿಳಿಸಿದ ಎಲ್ಲಾ ವಿಶೇಷ ಸೂಚನೆಗಳನ್ನು ಪಾಲಿಸಲಾಗಿದೆ ಎಂದು ಪ್ರಮಾಣೀಕರಿಸಿದೆ.

ಮುಖ್ಯೋಪಾಧ್ಯಾಯರ ಸಹಿ
ಶಾಲೆಯ ಮೊಹರಿನೊಂದಿಗೆ.

## ಅನುಬಂಧ–6

**ರೆಗ್ಯುಲರ್ ಪುನರಾವರ್ತಿತ ವಿದ್ಯಾರ್ಥಿಗಳಿಗಾಗಿ)**

**REGULAR REPEATER (PR)**

ಶಾಲೆಯ ಹೆಸರು :____________________

:____________________

ಶಾಲಾ ಸಂಕೇತ :____________________

| ಕ್ರ ಸಂ | ಖಾಸಗಿ ಪುನರಾವರ್ತಿತ ವಿದ್ಯಾರ್ಥಿಯ ಹೆಸರು | ಎಂ.ಎಸ್.ಎ ಲಗತ್ತಿಸ ಲಾಗಿದೆಯೇ | ಏಪ್ರಿಲ್–17ರ ಪರೀಕ್ಷೆಗೆ ತೆಗೆದುಕೊಳ್ಳುತ್ತಿರುವ ವಿಷಯಗಳು ವಿವರ | ಪರೀಕ್ಷಾ ಶುಲ್ಕದ ಮೊತ್ತ | ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು |
|---|---|---|---|---|---|
| 1 | 2 | 3 | 4 | 5 | 6 |
| | | | | | |

**ಘೋಷ್ವಾರೆ**

| ಕ್ರ ಸಂ | ವಿವರ | ಬಾಲಕರು | | ಬಾಲಕಿಯರು | | ಒಟ್ಟು | |
|---|---|---|---|---|---|---|---|
| | | ಜುಲೈ–2002ರ ಮತ್ತು ಹಿಂದಿನ ಪುನರಾವರ್ತಿತ ವಿದ್ಯಾರ್ಥಿಗಳ ಸಂಖ್ಯೆ | ಏಪ್ರಿಲ್–2003 ರ ಮತ್ತು ನಂತರದ ಪುನರಾವರ್ತಿತ ವಿದ್ಯಾರ್ಥಿಗಳ ಸಂಖ್ಯೆ | ಜುಲೈ–2002ರ ಮತ್ತು ಹಿಂದಿನ ಪುನರಾವರ್ತಿತ ವಿದ್ಯಾರ್ಥಿನಿಯರ ಸಂಖ್ಯೆ | ಏಪ್ರಿಲ್–2003ರ ಮತ್ತು ನಂತರದ ಪುನರಾವರ್ತಿತ ವಿದ್ಯಾರ್ಥಿನಿಯರ ಸಂಖ್ಯೆ | ಬಾಲಕರು | ಬಾಲಕಿಯರು |
| 1 | ಪರಿಶಿಷ್ಟ ಜಾತಿ | | | | | | |
| 2 | ಪರಿಶಿಷ್ಟ ಪಂಗಡ | | | | | | |
| 3 | ಪ್ರವರ್ಗ–1 | | | | | | |
| 4 | 2ಎ | | | | | | |
| 5 | 2ಬಿ | | | | | | |
| 6 | 3ಎ | | | | | | |
| 7 | 3ಬಿ | | | | | | |
| 8 | ಸಾಮಾನ್ಯ | | | | | | |
| 9 | ಶುಲ್ಕ ನೀಡಿರುವವರ ಸಂಖ್ಯೆ | | | | | | |
| 10 | ಒಟ್ಟು | | | | | | |

**ವಿಶೇಷ ಸೂಚನೆ:**

**1. ಎಂ.ಎಸ್.ಎ ಇಲ್ಲದಿದ್ದರೆ ಪರೀಕ್ಷಾ ಶುಲ್ಕ ಸ್ವೀಕರಿಸುವಂತಿಲ್ಲ.**
**2. ಭಾವಚಿತ್ರ ರಹಿತ ಎಂ.ಎಸ್.ಎ ಗಳನ್ನು ತಿರಸ್ಕರಿಸಲಾಗುವುದು.**
**3. ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿ/ ವಿದ್ಯಾರ್ಥಿನಿಯರ ಮಾಹಿತಿಯನ್ನು ಕೆಂಪು ಶಾಹಿಯಲ್ಲಿ ಗುರುತು ಮಾಡತಕ್ಕದ್ದು.**

ಮೇಲೆ ತಿಳಿಸಿದ ಎಲ್ಲಾ ವಿಶೇಷ ಸೂಚನೆಗಳನ್ನು ಪಾಲಿಸಲಾಗಿದೆ ಎಂದು ಪ್ರಮಾಣೀಕರಿಸಿದೆ.

ಮುಖ್ಯೋಪಾಧ್ಯಾಯರ ಸಹಿ
ಶಾಲೆಯ ಮೊಹರಿನೊಂದಿಗೆ

## ಅನುಬಂಧ–7

**ಕೇಂದ್ರ ಪಠ್ಯ ಕ್ರಮ ಮತ್ತು ಹೊರರಾಜ್ಯ ಪಠ್ಯಕ್ರಮದಿಂದ ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬಂದ ವಿದ್ಯಾರ್ಥಿಗಳಿಗೆ ರಾಜ್ಯ ಪಠ್ಯಕ್ರಮದಲ್ಲಿ ವ್ಯಾಸಂಗ ಮುಂದುವರೆಸಲು ಅನುಮತಿಸಲಾದ ವಿದ್ಯಾರ್ಥಿಗಳ ಮಾಹಿತಿಯ ವಿವರ**

**ಜಿಲ್ಲೆಯ ಹೆಸರು:________________________**

| ಕ್ರ ಸಂ | ವಿದ್ಯಾರ್ಥಿಯ ಹೆಸರು | ಲಿಂಗ | | ಜನ್ಮ ದಿನಾಂಕ | ಜಾತಿಯ ಸಂಕೇತ | ನೋಂದಣಿ ಶುಲ್ಕದ ಮೊತ್ತ | ಒಟ್ಟು ಮೊತ್ತ ರೂ. | ಷರಾ |
|---|---|---|---|---|---|---|---|---|
| | | ಗಂ | ಹೆ | | | | | |
| 1 | 2 | 3 | 4 | 5 | 6 | 7 | 8 | 9 |
| | | | | | | | | |
| | | | | | | | | |
| | | | | | | | | |
| | ಒಟ್ಟು | | | | | | | |

ಅಕ್ಷರಗಳಲ್ಲಿ ಒಟ್ಟು ಮೊತ್ತ ರೂ………………..

**ಪರೀಕ್ಷಾ ಮಂಡಳಿಗೆ ಪಾವತಿಸಲಾದ ನೋಂದಣಿ ಶುಲ್ಕದ ವಿವರ**

| ಕ್ರ.ಸಂ. | ಬ್ಯಾಂಕಿನ ಹೆಸರು | ಬ್ಯಾಂಕ್ ಹುಂಡಿ ಸಂಖ್ಯೆ | ದಿನಾಂಕ | ಶುಲ್ಕದ ಮೊತ್ತ | ಷರಾ |
|---|---|---|---|---|---|
| 1 | | | | | |
| 2 | | | | | |
| 3 | | | | | |
| | | | | | |

ಅಕ್ಷರಗಳಲ್ಲಿ ಒಟ್ಟು ಮೊತ್ತರೂ………………..

ಜಿಲ್ಲಾ ಉಪನಿರ್ದೇಶಕರ ಸಹಿ
ಕಛೇರಿಯ ಮೊಹರಿನೊಂದಿಗೆ

## ಅನುಬಂಧ–8

**2016–17 ಸಾಲಿಗೆ ನಡೆಯಲಿರುವ ಎಪ್ರಿಲ್–2017ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಖಾಸಗಿಯಾಗಿ ಪರೀಕ್ಷೆ ಬರೆಯಲು ಹೆಸರು ನೋಂದಾಯಿಸಿಕೊಂಡ ವಿದ್ಯಾರ್ಥಿಗಳ ಮಾಹಿತಿಯ ವಿವರ**

**ಜಿಲ್ಲೆಯ ಹೆಸರು :____________________________**

| ಕ್ರ ಸಂ | ವಿದ್ಯಾರ್ಥಿಯ ಹೆಸರು | ಲಿಂಗ | | ಜನ್ಮ ದಿನಾಂಕ | ಜಾತಿಯ ಸಂಕೇತ | ನೋಂದಣಿ ಶುಲ್ಕದ ಮೊತ್ತ | ಒಟ್ಟು ಮೊತ್ತ ರೂ. | ಷರಾ |
|---|---|---|---|---|---|---|---|---|
| | | ಗಂ | ಹೆ | | | | | |
| **1** | **2** | **3** | **4** | **5** | **6** | **7** | **8** | **9** |
| | | | | | | | | |
| | | | | | | | | |
| | | | | | | | | |
| | ಒಟ್ಟು | | | | | | | |

ಅಕ್ಷರಗಳಲ್ಲಿ ಒಟ್ಟು ಮೊತ್ತ ರೂ.....................

**ಪರೀಕ್ಷಾ ಮಂಡಳಿಗೆ ಪಾವತಿಸಲಾದ ನೋಂದಣಿ ಶುಲ್ಕದ ವಿವರ**

| ಕ್ರ.ಸಂ. | ಬ್ಯಾಂಕಿನ ಹೆಸರು | ಬ್ಯಾಂಕ್ ಹುಂಡಿ ಸಂಖ್ಯೆ | ದಿನಾಂಕ | ಶುಲ್ಕದ ಮೊತ್ತ | ಷರಾ |
|---|---|---|---|---|---|
| 1 | | | | | |
| 2 | | | | | |
| 3 | | | | | |
| | | | | | |

ಅಕ್ಷರಗಳಲ್ಲಿ ಒಟ್ಟು ಮೊತ್ತ ರೂ.:……………

ಜಿಲ್ಲಾ ಉಪನಿರ್ದೇಶಕರ ಸಹಿ
ಕಛೇರಿಯ ಮೊಹರಿನೊಂದಿಗೆ

## ಅನುಬಂಧ-9

### ಅನುಬಂಧವಾರು ಪರೀಕ್ಷಾ ಶುಲ್ಕದ ವಿವರಗಳ ಘೋಷ್ವಾರೆ

ಶಾಲೆಯ ಹೆಸರು :______________ ಶಾಲಾ ಸಂಕೇತ
:______________
:______________

| ಕ್ರ.ಸಂ. | ಅನುಬಂಧದ ಸಂಖ್ಯೆ | ಪರೀಕ್ಷಾ ಶುಲ್ಕ ವಿನಾಯಿತಿ ಪಡೆದವರ ಸಂಖ್ಯೆ | ಪರೀಕ್ಷಾ ಶುಲ್ಕ ಪವಾತಿಸಿರುವವರ ಸಂಖ್ಯೆ | ಪರೀಕ್ಷಾ ಶುಲ್ಕದ ಮೊತ್ತ | ಲ್ಯಾಮಿನೇಷನ್ ಶುಲ್ಕದ ಮೊತ್ತ | ಒಟ್ಟು ವಸೂಲಾದ ಶುಲ್ಕದ ಮೊತ್ತ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಅನುಬಂಧ-1 | | | | | |
| 2 | ಅನುಬಂಧ-2 | | | | | |
| 3 | ಅನುಬಂಧ-3 | | | | | |
| 4 | ಅನುಬಂಧ-4 | | | | | |
| 5 | ಅನುಬಂಧ-5 | | | | | |
| 6 | ಅನುಬಂಧ-6 | | | | | |
| 7 | ಅನುಬಂಧ-7 | | | | | |
| 8 | ಅನುಬಂಧ-8 | | | | | |
| | ಒಟ್ಟು | | | | | |

ಅಕ್ಷರಗಳಲ್ಲಿ ಒಟ್ಟು ಮೊತ್ತ ರೂ………………..

### ಪರೀಕ್ಷಾ ಮಂಡಳಿಗೆ ಪಾವತಿಸಲಾದ ಪರೀಕ್ಷಾ ಶುಲ್ಕದ ವಿವರ

| ಕ್ರ.ಸಂ. | ಬ್ಯಾಂಕಿನ ಹೆಸರು | ಬ್ಯಾಂಕ್ ಚಲನ್ / NEFT ಚಲನ್ ಸಂಖ್ಯೆ | ದಿನಾಂಕ | ಶುಲ್ಕದ ಮೊತ್ತ | ಷರಾ |
|---|---|---|---|---|---|
| 1 | | | | | |
| 2 | | | | | |
| 3 | | | | | |

| | | | | | |
|---|---|---|---|---|---|
| | | | | | |

ಅಕ್ಷರಗಳಲ್ಲಿ ಒಟ್ಟು ಮೊತ್ತ ರೂ.………………..

ಮುಖ್ಯೋಪಾಧ್ಯಾಯರ ಸಹಿ
ಶಾಲೆಯ ಮೊಹರಿನೊಂದಿಗೆ

## ಅನುಬಂಧ–10

**ಕ್ಷೇತ್ರಶಿಕ್ಷಣಾಧಿಕಾರಿಗಳವರ ಕಛೇರಿ ವಿಳಾಸ**
**ದೃಢೀಕರಣ ಪತ್ರ**

ಶ್ರೀ ಶಾಲೆಯು 2016–17ನೇ ಸಾಲಿನಲ್ಲಿ ಶೈಕ್ಷಣಿಕ ವರ್ಷದಲ್ಲಿ ಅಧಿಕೃತ ಪ್ರೌಢಶಾಲೆಯಾಗಿ ನಡೆಯುತ್ತಿದೆ. ಈ ಶಾಲೆಯಲ್ಲಿ ಬೋಧಿಸುತ್ತಿರುವ ಮಾಧ್ಯಮ ಆಗಿರುತ್ತದೆ. ಶಾಲಾ ಮಾನ್ಯತೆಯನ್ನು ವರ್ಷದವರೆಗೆ ನೀಡಲಾಗಿದೆ. ಏಪ್ರಿಲ್–2017ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳಲು ನೊಂದಾಯಿಸಿಕೊಂಡಿರುವ ವಿದ್ಯಾರ್ಥಿಗಳ ಸಂಖ್ಯೆ: ಇರುತ್ತದೆ ಎಂಬುದಾಗಿ ಈ ಮೂಲಕ ದೃಢೀಕರಿಸಲಾಗಿದೆ.

ಸಹಿಯೊಡನೆ ಮುಖ್ಯ ಗುರುಗಳು
ಶಾಲೆ.

ಕ್ಷೇತ್ರಶಿಕ್ಷಣಾಧಿಕಾರಿಗಳು.